# 12

# ಹೃದಯಕ್ಕೆ ಹೋಗುವದು

## (5:21-48)

ನೀತಿಯು ಮುಚ್ಚುಮರೆಯಿಲ್ಲದ ಪಾಪದ ಕ್ರಿಯಕ್ಕೆ ಆಚೆಯಿರುವಂಥದ್ದಾಗಿದೆ. ಅಂತ ಕಾರ್ಯಕ್ಕೆ ಮುಂಚೆ ಬರುವ ಆಲೋಚನೆಯನ್ನು ಗುರುತಿಸುತ್ತದೆ (12:35; 15:18-20). ಕೇವಲ ಆಜ್ಞೆಗೆ ವಿಧೇಯರಾಗುವದು ಮಾತ್ರವಲ್ಲ, ಆದರೆ ಆಜ್ಞೆಯ ಹಿಂದೆ ಸ್ಫೂರ್ತಿಯು ಭಾಗವಹಿಸಿರುತ್ತದೆ. ಈ ಆಲೋಚನೆಯನ್ನು ಅನುಸರಿಸಿ, ಯೇಸು ಶಾಸ್ತ್ರಿಗಳು ಮತ್ತು ಫರಿಸಾಯರಿಗಿಂತಲೂ ಕಟ್ಟು ನಿಟ್ಟಿನ ವ್ಯಕ್ತಿಯಾಗಿದ್ದನು. ಆತನ ಹಿಂಬಾಲಕರು ಅವರ ರಾಜ್ಯದ ಕಾರ್ಯಗಳು ಹೃದಯದ ರಾಜ್ಯದಿಂದ ಬಿಡುಗಡೆ ಮಾಡಬೇಕೆಂದು ಆತನ ಆಪೇಕ್ಷೆಯಾಗಿತ್ತು.

20ನೇ ವಚನದಲ್ಲಿರುವ ಉನ್ನತವಾದ ಆತನ ವ್ಯಾಖ್ಯಾನವು ಪರ್ವತ ಮೇಲೆ ಮಾಡಿರುವ ಪ್ರಸಂಗದ ಉಳಿದ ಭಾಗದ ಸಾರಾಂಶ ಮತ್ತು ಪೂರ್ವ ನಿರೀಕ್ಷೆಯನ್ನು ಕ್ರೂಡಿಕರಿಸುತ್ತದೆ. ಆತನು ತನ್ನ ಶಿಷ್ಯರಿಗೆ ಕಲಿಸಿದಂತೆಯೇ, ಆತನ ಮುಂದೆ ಸೇರಿ ಬಂದಿರುವ ಜನರ ಸಮೂಹಕ್ಕೆ ಬೋಧಿಸಿದನು, ಆತನು ಧರ್ಮಶಾಸ್ತ್ರದ ಕುರಿತು ಇತರರು ಹೇಳಿರುವದಕ್ಕೂ ಮತ್ತು ಧರ್ಮಶಾಸ್ತ್ರದ ನಿಜವಾದ ಅಂಶದ ಕುರಿತು ಮಧ್ಯೆ ಇರುವ ಪರಸ್ಪರ ಆರು ವ್ಯತ್ಯಾಸಗಳನ್ನು ಹೇಳಿದನು. ಆತನು ಕೋಪದ ಬಗ್ಗೆ ಮಾತಾಡಿದನು (5:21-26), ವ್ಯಭಿಚಾರ (5:27-30), ವಿಚ್ಛೇಧನ (5:31, 32), ಆಣೆಯಿಡುವದು (5:33-37), ಪ್ರತಿಕಾರ (5:38-42), ವೈರಿಗಳನ್ನು ಪ್ರೀತಿಸುವದರ ಕುರಿತು ಮಾತಾಡಿದನು (5:43-48). ಜನರು ಧರ್ಮಶಾಸ್ತ್ರವನ್ನು ಅಕ್ಷರಶಃವಾಗಿ ಕೈಕೊಂಡು ನಡೆಯುತ್ತಲ್ಲೇ ಅದರ ಸ್ಫೂರ್ತಿಯನ್ನು ಅಲಕ್ಷ್ಯ ಮಾಡುವವರೆಂದು ಸೂಚಿಸಲು ಆತನ ದೃಷ್ಟಾಂತಗಳು ರಚಿಸಲಾಗಿದೆ.

### ಸಿಟ್ಟು ಮತ್ತು ನರಹತ್ಯ (5:21-26)

**21ನರಹತ್ಯ ಮಾಡಬಾರದು; ನರಹತ್ಯ ಮಾಡುವವನು ನ್ಯಾಯವಿಚಾರಣೆಗೆ
ಗುರಿಯಾಗುವನೆಂದು ಹಿರಿಯರಿಗೆ ಹೇಳಿಯದೆ ಎಂದು ಕೇಳಿದ್ದೀರಷ್ಟೇ. 22ಆದರೆ ನಾನು
ನಿಮಗೆ ಹೇಳುವದೇನೆಂದರೆ - ತನ್ನ ಸಹೋದರನ ಮೇಲೆ ಸಿಟ್ಟುಗೊಳ್ಳುವ ಪ್ರತಿ ಮನುಷ್ಯನು
ನ್ಯಾಯವಿಚಾರಣೆಗೆ ಗುರಿಯಾಗುವನು; ತನ್ನ ಸಹೋದರನನ್ನು ನೋಡಿ - ಛೀ ನೀಚಾ
ಅನ್ನುವವನು ನ್ಯಾಯ ಸಭೆಯ ವಿಚಾರಣೆಗೆ ಒಳಗಾಗುವನು; ಮೂರ್ಖಾ ಅನ್ನುವವನು ಅಗ್ನಿ
ನರಕಕ್ಕೆ ಗುರಿಯಾಗುವನು. 23ಆದಕಾರಣ ನೀನು ನಿನ್ನ ಕಾಣಿಕೆಯನ್ನು ಯಜ್ಞವೇದಿಯ
ಹತ್ತಿರಕ್ಕೆ ತಂದಾಗ ನಿನ್ನ ಸಹೋದರನ ಮನಸ್ಸಿನಲ್ಲಿ ನಿನ್ನ ಮೇಲೆ ಏನೋ ವಿರೋಧವದೆ
ಎಂಬುದು ನಿನ್ನ ನೆನಪಿಗೆ ಬಂದರೆ, 24ನಿನ್ನ ಕಾಣಿಕೆಯನ್ನು ಆ ಯಜ್ಞವೇದಿಯ ಮುಂದೆಯೇ
ಬಿಟ್ಟುಹೋಗಿ ಮೊದಲು ನಿನ್ನ ಸಹೋದರನ ಸಂಗಡ ಒಂದಾಗು; ಆ ಮೇಲೆ ಬಂದು ನಿನ್ನ
ಕಾಣಿಕೆಯನ್ನು ಕೊಡು.**

**25ನಿನ್ನ ವಾದಿಯ ಸಂಗಡ ಇನ್ನೂ ದಾರಿಯಲ್ಲಿರುವಾಗಲೇ ಅವನ ಕೂಡ ಬೇಗ
ಸಮಧಾನ ಮಾಡಿಕೋ; ಇಲ್ಲದಿದ್ದರೆ ಆ ವಾದಿಯು ನಿನ್ನನ್ನು ನ್ಯಾಯಾಧಿಪತಿಗೆ ಒಪ್ಪಿಸಾನು;
ನ್ಯಾಯಾಧಿಪತಿಯೂ ನಿನ್ನನ್ನು ಓಲೇಕಾರನ ಕೈಗೆ ಒಪ್ಪಿಸಿಕೊಟ್ಟಾನು; ಆಗ ನೀನು ಸೆರೆಯಲ್ಲಿ**

**ಬಿದ್ದೀಯೆ. [26]ನೀನು ಒಂದು ಕಾಸನ್ನಾದರೂ ನಿಲ್ಲಿಸಿಕೊಳ್ಳದೆ ಎಲ್ಲಾ ಸಲ್ಲಿಸುವ ತನಕ ಅಲ್ಲಿಂದ ಬರುವದೇ ಇಲ್ಲ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ.**

**ವಚನ 21.** ಯೇಸು ತನ್ನ ಮೊದಲಿನ ಭಿನ್ನತೆಯನ್ನು ಪರಿಚಯಿಸುತ್ತಾ, **ಹಿರಿಯರಿಗೆ ಹೇಳಿರುವದು ಕೇಳಿದ್ದೀರಿ** ಎಂಬ ಮಾತು ಧರ್ಮಶಾಸ್ತ್ರದಿಂದ ಬಂದ ಯೂದಾಯ ಸಂಪ್ರದಾಯಗಳನ್ನು ಮತ್ತು ಎಷ್ಟೋ ಶತಮಾನಗಳಿಂದ ಶೇಖರಿಸಿದ್ಧವುಗಳನ್ನು ಸೂಚಿಸುತ್ತದೆ. ಆತನ ವಾಕ್ಯವನ್ನು ಸ್ಪಷ್ಟವಾಗಿ ಹೇಳುವಂತೆ ಈಗ "ಇದು ಬರೆಯಲ್ಪಟ್ಟಿದೆ" ಎಂಬ ಮಾತು ಆತನು ತನ್ನ ಭಿನ್ನತೆ ನಿರೂಪಿಸಲು ಹೇಳಲಿಲ್ಲ. ಅದಕ್ಕೆ ಬದಲಾಗಿ, ಯೆಹೂದ್ಯರ ಬಾಯಿಮಾತಿನಿಂದ ಬೋಧಿಸಿರುವ ಬೋಧನೆಗಳನ್ನು ಮತ್ತು ಸಂಪ್ರದಾಯಗಳನ್ನು ತೋರಿಸಲು "ಹೇಳಿಯದೇ ಎಂಬುದಾಗಿ ನೀವು ಕೇಳಿದ್ದೀರಷ್ಟೆ" (NIV) ಎಂಬ ಪದವನ್ನು ಪದೆ ಪದೆ ಉಪಯೋಗಿಸಿದ್ದಾನೆ (5:27, 33, 38, 43). ಆತನು 5:31ರಲ್ಲಿ "ಹೇಳಿಯದೇಯಷ್ಟೆ" ಎಂದು ಸಂಕ್ಷಿಪ್ತಗೊಳಿಸಲಾಗಿದೆ.

ಯೇಸು ಬಳಸಿದ ಭಾಷೆ "ಯೆಹೂದ್ಯ ರಬ್ಬಿಗಳು ಚರ್ಚೆಯಲ್ಲಿರುವಾಗ ಉಪಯೋಗಿಸಿರುವದು ಒಂದು ಉಪಾಯವಾಗಿದೆ."[1] ಯೆಹೂದ್ಯರ ಮತ್ತು ಶಾಸ್ತ್ರಿಗಳ ವ್ಯಾಖ್ಯಾನಕ್ಕೂ ಮತ್ತು ಧರ್ಮಶಾಸ್ತ್ರದ ಮೂಲ ಅರ್ಥಕ್ಕೂ ಮಧ್ಯದಲ್ಲಿದ್ದ ವ್ಯತ್ಯಾಸವನ್ನು ಆತನು ಹೇಳುತ್ತಿದ್ದನು. ಅಂದಿನ ಯೆಹೂದ್ಯ ಮತದ ಬೋಧಕರು, ಪಾಂಡಿತ್ಯದ ಶೈಲಿಯಲ್ಲಿಯೇ, ಅವರಿಗಿಂತಲೂ ಮುಂಚೆ ಇದ್ದ ಮತ ನಾಯಕರ ವ್ಯಾಖ್ಯಾನಗಳನ್ನು ಇವರು ಕೆಲವು ಸಾರಿ ಹೇಳುತ್ತಿದ್ದರು. ಇನ್ನೊಂದು ರೀತಿಯಲ್ಲಿ, ಯೇಸು "ಶಾಸ್ತ್ರಿಗಳಂತೆ ಮಾತಾಡದೆ ವೈಯಕ್ತಿಕ ಅಧಿಕಾರದಿಂದ" ಮಾತಾಡುತ್ತಿದ್ದನು (7:29). "ಆದರೆ ನಾನು ನಿಮಗೆ ಹೇಳುತ್ತೇನೆ," ಎಂದು ಸರಳವಾದ ಮಾತಿನಿಂದ "ಅವರ ಜಾಣತನವನ್ನು ಮತ್ತು ಧರ್ಮಶಾಸ್ತ್ರದ ತಪ್ಪಾದ ಬಳಕೆಯನ್ನು ಯೇಸು ದೂಳು ತೆಗೆದಂತೆ ಜಾಡಿಸಿಬಿಟ್ಟನು."

**ನರಹತ್ಯ ಮಾಡಬಾರದು; ನರಹತ್ಯ ಮಾಡುವವನು ನ್ಯಾಯವಿಚಾರಣೆಗೆ ಗುರಿಯಾಗುವನೆಂದು** ಹಿಂದಿನ ಕಾಲದ ಬೋಧಕರು "ಹಿರಿಯರಿಗೆ" ಹೇಳಿದ್ದಾರೆ. ಯೇಸುವಿನ ಪ್ರಥಮ ಹೇಳಿಕೆ ದಶಾಜ್ಞೆಗಳಿಂದ ತೆಗೆದುಕೊಳ್ಳಲಾಗಿತ್ತು (ವಿಮೋಚನಕಾಂಡ 20:13; ಧರ್ಮೋಪದೇಶಕಾಂಡ 5:17), ಈ ವಿಷಯ ಹಿರಿಯರಿಗೆ ಚಿರಪರಿಚಯವಾಗಿತ್ತು. ಎರಡನೆಯದು ಕೊಲೆಗಾರನು "ನ್ಯಾಯತೀರ್ಪಿಗೆ ಒಳಗಾಗುವನು" (NIV) ಅಥವಾ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಗಾಗುವನೆಂದು ಯೆಹೂದ್ಯ ಸಂಪ್ರದಾಯವು ಪ್ರತಿಬಿಂಬಿಸುತ್ತದೆ (ಧರ್ಮೋಪದೇಶಕಾಂಡ 16:18; 17:8-13). ಕೊಲೆಗಾರನಿಗೆ ಮರಣದಂಡನೆಯೆಂದು ಧರ್ಮಶಾಸ್ತ್ರ ನಿರ್ಣಯಿಸುತ್ತದೆ (ವಿಮೋಚನಕಾಂಡ 21:12; ಯಾಜಕಕಾಂಡ 24:21; ಅರಣ್ಯಕಾಂಡ 35:16-21, 30, 31).

ಸ್ಪಷ್ಟವಾಗಿ, ಅದು ಆಚಾರಣೆ ನಿಯಮ ಪ್ರಕಾರ ಅಂಗೀಕರಿಸದೆ ಹೋದಾಗ್ಯೂ, ದಶಾಜ್ಞೆಗಳಲ್ಲಿ ಆರನೇ ಆಜ್ಞೆಯನ್ನು ಆಲೋಚನೆಗಳಲ್ಲಿ ಅಥವಾ ಗುಣನಡತೆಗಳನ್ನು ಹೊರತುಪಡಿಸಿ, ಒಂದು ಕೇವಲ ಭೌತಿಕ ಕಾರ್ಯವೆಂದು ಯೆಹೂದ್ಯ ನಾಯಕರು ಅದರ ಮೌಲ್ಯವನ್ನು ಕಡಿಮೆಗೊಳಿಸಿದರು. ಈ ಅನುವಾದದ ಪ್ರಕಾರ, ಸ್ವನೀತಿಯುಳ್ಳವನಾಗಿ ನ್ಯಾಯಬದ್ಧವಾಗಿರುವಾತನು, ಹತ್ಯಮಾಡಲಿಲ್ಲ ಎಂಬ ಆಲೋಚನೆ ಅವನ ಹೃದಯದಲ್ಲಿ ಇರುವ ತನಕ, ತಾನು ನಿಜವಾಗಿಯೂ ಒಬ್ಬರ ಪ್ರಾಣವನ್ನು ತೆಗೆಯಲಿಲ್ಲವೆಂದು, ತನ್ನಷ್ಟಕ್ಕೆ ತಾನೇ ತೃಪ್ತಿಪಟ್ಟುಕೊಳ್ಳುವನು. ಹತ್ಯಮಾಡುವ ಉದ್ದೇಶ ಹೊಂದಿರುವ ಹೃದಯವು ಭದ್ರವಾಗಿ ಕಾಪಾಡುತ್ತಾ, ಹೇಗಾದರು ಸರಿ "ನಾನು ಧರ್ಮಶಾಸ್ತ್ರ ಕೈಗೊಂಡಿದ್ದೇನೆ" ಎಂದು ತನ್ನಷ್ಟಕ್ಕೆ ತಾನು ಹೇಳಿಕೊಳ್ಳುವನು.

**ವಚನ 22.** ಅಂತಹಾ ಆಲೋಚನೆಗೆ ಭಿನ್ನವಾಗಿ ಯೇಸು, **ನಾನು ನಿಮಗೆ**

**ಹೇಳುವದೇನೆಂದರೆ - ತನ್ನ ಸಹೋದರನ ಮೇಲೆ ಸಿಟ್ಟುಗೊಳ್ಳುವ ಪ್ರತಿ ಮನುಷ್ಯನು ನ್ಯಾಯವಿಚಾರಣೆಗೆ ಗುರಿಯಾಗುವನು** ಎಂದು ಹೇಳಿದನು. ನರಹತ್ಯ ಮಾಡುವ ಪಾಪವು ಕೇವಲ ದೈಹೀಕವಾದ ಕಾರ್ಯ ಮಾತ್ರವಲ್ಲ, ಆದರೆ ಮನೋಭಾವವು ಮತ್ತು ಹೃದಯದ ಅಭಿಪ್ರಾಯವು ಒಳಗೊಂಡಿರುತ್ತದೆ. ಯೋಹಾನನು ಸಮನಾಂತರವಾದ ಹೇಳಿಕೆ ಕೊಟ್ಟಿದ್ದಾನೆ: "ತನ್ನ ಸಹೋದರನನ್ನು ದ್ವೇಷಿಸುವವನು ಕೊಲೆಗಾರನಾಗಿದ್ದಾನೆ, ಮತ್ತು ಯಾವ ಕೊಲೆಗಾರನಲ್ಲಿಯೂ ನಿತ್ಯಜೀವವು ಇರುವುದಿಲ್ಲವೆಂಬುದು ನಿಮಗೆ ಗೊತ್ತಾಗಿದೆ" (1 ಯೋಹಾನ 3:15).

"ಒಂದು ಕಾರಣದ ಹೊರತಾಗಿ" (ನೋಡಿರಿ KJV), ಎಂಬ ವಾಕ್ಯಭಾಗವು, ಕೆಲವು ಗ್ರೀಕ್ ಕೈ ಬರಹಗಳಲ್ಲಿ "ಕೋಪ" ಎಂಬುದನ್ನು ತಿದ್ದುಪಡಿಸಿ, ಬಹುಶಃ ಕೈ ಬರಹಗಾರರಿಂದ ಸೇರಿಸಲಾಗಿದೆ ಎಂದು ಸ್ಪಷ್ಟವಾಗುತ್ತದೆ. ವಾಕ್ಯಭಾಗದಲ್ಲಿ ಸೇರಿಸಿರುವದರಿಂದ ಯೇಸು ಮಾಡಿದ ದಿಟ್ಟವಾದ ನ್ಯಾಯತೀರ್ಪಿನ್ನು ಮೃದುವಾಗಿ ಮಾಡಿತು. ಸಹೋದರನ ಜೊತೆಯಲ್ಲಿ ದ್ವೇಷದಿಂದಿರುವದು ಸರಳವಾಗಿ ಕಂಡುಕೊಳ್ಳಬಹುದು, ಆದರೆ ಯೇಸು ಇದರ ಕುರಿತು ಆತನು ತೋರಿಸಿದ ವ್ಯತ್ಯಾಸದಲ್ಲಿ ಯಾವುದು ನ್ಯಾಯವಾದದೆಂದು ಸಮರ್ಥನೆ ಕೊಡಲಿಲ್ಲ.

ಹೊಸ ಒಡಂಬಡಿಕೆಯಲ್ಲಿ ಎರಡು ತರಹದ ಸಿಟ್ಟನ್ನು ವರ್ಣಿಸಲಾಗಿದೆ. ಗ್ರೀಕ್ ಶಬ್ದ *thumos* ಇದು ಒಂದು ರೀತಿಯ ಕೋಪ ಅದು ತಕ್ಷಣವೇ ಧಗಧಗನೆ ಉರಿಯುವಂಥದ್ದು ಮತ್ತು ತಕ್ಷಣವೇ ಚದುರಿಬಿಡುವದು. ಗ್ರೀಕ್ ಶಬ್ದ ಎನ್ನುವಂಥದ್ದು ಇದು ಬಹಳ ದಿನಗಳ ಕಾಲ ಇರುವ ಸಿಟ್ಟು, ಇದು ಕಲ್ಪಿಸಿಕೊಳ್ಳುವ ಅಥವಾ ನಿಜವಾದ ನೋವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮತ್ತು (ಮರಿಗಳನ್ನಾಗಿ) ಹೆಚ್ಚಾಗುತ್ತದೆ. ಸ್ಪಷ್ಟವಾಗಿ, ಈ ಎರಡನೆಯ ಲಕ್ಷಣವನ್ನು ಯೇಸು ನಿಷೇಧಿಸಿದ್ದಾನೆ - ಇದು ಕ್ಷಮಿಸದೆ ಇರುವದು ಅಥವಾ ಮರೆಯದೆ ಇರುವದಂತಾಗಿದೆ. ಇದು ಬಹಳ ದಿನಗಳ ಕಾಲ ಇರುತ್ತದೆ, ಸಮಾಧಾನ ಮಾಡಿಕೊಳ್ಳಲು ನಿರಾಕರಿಸುತ್ತದೆ ಮತ್ತು ಪ್ರತಿಕಾರ ತೀರಿಸಿಕೊಳ್ಳಲು ಮಾರ್ಗ ಹುಡುಕುತ್ತಿರುತ್ತದೆ. ಇಂಥಂಹ ಕೋಪವು ದೇವರ ನೀತಿಯನ್ನು ನೆರವೇರಿಸುವದಿಲ್ಲ (ಯಾಕೋಬ 1:20). "ಕ್ರೋಧ, ಮತ್ಸರ, ಧೂಷಣೆ" ಇವೆಲ್ಲವುಗಳನ್ನು ವಿಸರ್ಜಿಸಬೇಕು (ಕೊಲಸ್ಸೆ 3:8). ಅಂಥಹ ಕೋಪವನ್ನು ಹಾಸಿಗೆಗೆ ಹೋಗುವ ಮೊದಲೆ ತಿರಸ್ಕರಿಸಿರಿ ಎಂದು ಪೌಲನು ಕ್ರೈಸ್ತರಿಗೆ ಒತ್ತಾಯಪಡಿಸುತ್ತಾನೆ (ಎಫೆಸ 4:26).

**ತನ್ನ ಸಹೋದರನನ್ನು ನೋಡಿ ಛೀ ನೀಚಾ ಅನ್ನುವವನು ನ್ಯಾಯ ಸಭೆಯ ವಿಚಾರಣೆಗೆ ಒಳಗಾಗುವನು; ಮೂರ್ಖ ಅನ್ನುವವನು ಅಗ್ನಿ ನರಕಕ್ಕೆ ಗುರಿಯಾಗುವನು** ಎಂದು ಯೇಸು ಮುಂದುವರಿಸಿ ಹೇಳಿದನು. ಆತನು ಒಬ್ಬರಿಗೊಬ್ಬರು ತಿರಸ್ಕರಿಸುವ ಮನೋಭಾವನೆ ವಿರುದ್ಧ ಎಚ್ಚರಿಕೆ ಕೊಡುತ್ತಾನೆ. 2 ಅರಸುಗಳು 2:23, 24ರಲ್ಲಿನ ಎಲೀಷನ ಮತ್ತು ಯೆಹೂದ್ಯ ರಬ್ಬಿಯರ ಬೋಧನೆಗಳಿಂದ ಉದಾಹರಣೆ ತೆಗೆದುಕೊಳ್ಳೋಣ. Donald A. Hagner ಹೀಗೆ ಬರೆದಿದ್ದಾರೆ, "ಸತ್ಯವೇದದ ಆ ಕಾಲದಲ್ಲಿ ಹೆಸರಿಟ್ಟು ಕರೆಯುವುದೇ ದೊಡ್ಡ ಅಪರಾಧವಾಗುತ್ತಿತ್ತು, ಯಾಕೆಂದರೆ ಆ ಹೆಸರುಗಳಿಗೆ ಒಂದು ಮಹತ್ವ ಕೊಡಲ್ಪಟ್ಟಿತ್ತು."[2] Michael J. Wilkins ಇದಕ್ಕೆ ಇನ್ನು ಸ್ವಲ್ಪ ಸೇರಿಸಿ ಹೇಳಿದ್ದಾರೆ, "ಹೆಸರಿಟ್ಟು ಕರೆಯುವದು ಯೆಹೂದ್ಯ ಸಂಸ್ಕೃತಿಯಲ್ಲಿ ಅವಮಾನ ಮಾಡಿದಂತೆ, ಯಾಕೆಂದರೆ ಪ್ರತಿಯೊಂದು ಹೆಸರಿಗೆ ಒಂದು ಮಹತ್ವವು ಕೊಡಲ್ಪಟ್ಟಿತು ಅದನ್ನು ಅವರಿಂದ ಅಥವಾ ಆಕೆಯಿಂದ ಹಿಂದಕ್ಕೆ ಪಡೆದುಕೊಳ್ಳುತ್ತಿದ್ದರು."[3]

"Raca" (KJV; NIV) ಇದು ಅರೆಮಿಕ್ ಭಾಷೆಯಲ್ಲಿ ಉಚ್ಚರಿಸುವ ಶಬ್ದವಾಗಿದೆ ಮತ್ತು ಇದರ ಸ್ಪಷ್ಟವಾದ ಅನುವಾದ ನಿರ್ಧರಿಸಿರುವುದಿಲ್ಲ. "Raca" ಬೇರೆ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ, "ಉಪಯೋಗಕ್ಕೆ ಬಾರದಿರುವ" (NASB), "ಮೂರ್ಖ" (Phillips),

ಮತ್ತು "ಖಾಲಿ ತಲೆಯ ಬುದ್ಧಿಹೀನ" (AB). John Lightfoot ರವರು ಹೇಳಿದೇನೆಂದರೆ ಒಬ್ಬನು "raca" ಈ ಶಬ್ದವನ್ನು ಇನ್ನೊಬ್ಬನನ್ನು ಹಿನೈಸಲು ಹೆಚ್ಚಿನ ತಿರಸ್ಕಾರ ಮನೋಭಾವದಿಂದ ಉಪಯೋಗಿಸುತ್ತಿದ್ದರು: "ಇದು ಇಬ್ರಿಯಾ ಬರಹಗಾರರಲ್ಲಿ ಸಾಮಾನ್ಯವಾಗಿತ್ತು, ಮತ್ತು ದೇಶದ ಪ್ರತಿಯೊಬ್ಬರ ಬಾಯಲ್ಲಿ ಈ ಮಾತು ಸಹಜವಾಗಿ ಸಾಮಾನ್ಯವಾಗಿ ಉಪಯೋಗಿ ಸುತ್ತಿದ್ದರು."[4] ಈ ಶಬ್ದವನ್ನು ಗರ್ವದಿಂದ ಇರುವ ನಿರ್ಲಕ್ಷ ತೋರಿಸುವದಕ್ಕಾಗಿ ಇದನ್ನು ಉಪಯೋಗಿಸುತ್ತಾರೆ - ಇದು ಕೇವಲ ಶಬ್ದ ಮಾತ್ರವಲ್ಲ ದೊಡ್ಡದಾದ ಸ್ವರ ಎತ್ತಿಕೊಂಡು ಉಪಯೋಗಿಸುತ್ತಾರೆ. ದೇವರ ಸ್ವರೂಪದಲ್ಲಿ ಉಂಟುಮಾಡಿದ ಮತ್ತೊಬ್ಬ ವ್ಯಕ್ತಿಯನ್ನು ತಿರಸ್ಕರಿಸುವದಕ್ಕಿಂತ ಯೇಸು ಕ್ರಿಸ್ತನ ವಿರುದ್ಧವಾಗಿ ಮಾಡುವಂತ ಪಾಪ ಮತ್ತೊಂದಿಲ್ಲ (ಯಾಕೋಬ 3:8-10; 1 ಯೋಹಾನ 4:20). ಖಚಿತವಾಗಿ, ಕ್ರೈಸ್ತರು "ಇತರರ ಕುರಿತ ಆಲೋಚನೆಗಳನ್ನು ಮತ್ತು ಅವರಿಂದ ಉಂಟಾಗುವ ಮಾತುಗಳನ್ನು ದೇವರ ಸೂಕ್ಷ್ಮವಾದ ಪರಿಶೋಧನೆಗೆ ಒಳಪಡಿಸಬೇಕು."[5]

"ಮೂರ್ಖ" ಎನ್ನುವ ಶಬ್ದಕ್ಕಾಗಿ (*mōros*) ಈ ಪದವನ್ನು "moron" ಎಂಬ ಶಬ್ದದಿಂದ ತೆಗೆದುಕೊಳ್ಳಲಾಗಿದೆ "ಕಾರಣ ರಹಿತನು" ಅಥವಾ "ನೀತಿಗೆ ಯೋಗ್ಯ ನಲ್ಲದವನು" ಸ್ವಧರ್ಮಿ, ದಗಾಕೋರ ಎಂದು ಅದರ ಅರ್ಥವಾಗಿದೆ. ಇದರಲ್ಲಿ ದುರುದ್ದೇಶ ಒಳಗೊಂಡಿರುತ್ತದೆ ಎಂದು ಸೂಚಿಸುತ್ತದೆ. ಇಂಥಹ ನ್ಯಾಯತೀರ್ಪು ಕೇವಲ ದೇವರಿಗೆ ಮಾತ್ರ ಸೇರಿರುತ್ತವೆ ಯಾಕೆಂದರೆ ಆತನು ಮಾತ್ರ ಹೃದಯವನ್ನು ಬಲ್ಲವನಾಗಿರುತ್ತಾನೆ. ಇದು ಭೌದ್ಧಿಕ ಜ್ಞಾನಕ್ಕೆ ಒಬ್ಬನ ಸಂಬಂಧವಿರುವುದಿಲ್ಲ ಆದರೆ ಒಬ್ಬನ ನೀತಿಯ ವ್ಯಕ್ತಿಯ ಮೇಲೆ ಧೂಷಣೆ ಬರಮಾಡುತ್ತದೆ. ಒಬ್ಬನ ಉತ್ತಮ ವ್ಯಕ್ತಿಯ ಹೆಸರು ತೆಗೆದುಕೊಂಡು ಅವನನ್ನು ಯೋಗ್ಯನಲ್ಲ ಎಂದು, ಅನೀತಿಯುಳ್ಳ ವ್ಯಕ್ತಿ ಎಂದು ಮುದ್ರೆಹಾಕಲಾಗುವದು.

ಮೂರು ರೀತಿಯ ಶಬ್ದಗಳನ್ನು ನ್ಯಾಯ ತೀರ್ಪಿಗಾಗಿ ಯೇಸು ಉಪಯೋಗಿಸಿದ್ದಾನೆ, ಮತ್ತು ಅದರ ಗಂಭೀರತೆಯ ಏರಿಕೆಯ ಕ್ರಮದಲ್ಲಿ ಇರಬಹುದು. (1) ಸಿಟ್ಟಿಗೆ ಸಂಬಂಧಿಸಿದಂತೆ, ಒಬ್ಬನು "ನ್ಯಾಯಾಲಯ"ದ ಮುಂದೆ ಹೋಗಬಹುದು ಅಥವಾ "ನ್ಯಾಯತೀರ್ಪಿ"ಗೆ (NIV) ಹೋಗಬಹುದು. ನರಹತ್ಯದ ವಿಷಯದಲ್ಲಿ ಹೇಳುವಾಗ ಅದೇ ಪದವನ್ನು ವಚನ 21ರಲ್ಲಿ ಉಪಯೋಗಿಸಲಾಗಿದೆ. ಸ್ಥಳೀಯ ನ್ಯಾಯಾಲಕ್ಕೆ ಸೂಚಿಸಿರಬಹುದು, ಇದಕ್ಕೆ ಯೇಸುವಿನ ಹೇಳಿಕೆ ಅತಿಶಯೋಕ್ತವಾಗಿರಬೇಕಾಗಿತ್ತು. ಏನೇ ಆಗಲಿ, ಯಾವಾಗಾದರೂ ಸಹ ಕೋಪದ ವಿಷಯದಲ್ಲಿ ಎಷ್ಟು ಜನರು ತೀರ್ಪಿಗೆ ಒಳಗಾಗಿದ್ದಾರೆ? ಇನ್ನೊಂದು ಸಾಧ್ಯತೆ ಅದೇನೆಂದರೆ, "ದೇವರ ನ್ಯಾಯತೀರ್ಪು ಮನಸ್ಸಿನಲ್ಲಿ ಇರುವದು ಸಾಧ್ಯವೇ ಆಗಿದೆ."[6]

(2) "Raca" ಉಪಯೋಗ ಮಾಡುವದಕ್ಕೆ ಸಂಬಂಧಿಸಿ, ಒಬ್ಬನು "ಉಚ್ಚ ನ್ಯಾಯಲಯಕ್ಕೆ" ಹೋಗಿರಬಹುದು. ಈ ಪದವು ಸ್ಥಳಿಯ ನ್ಯಾಯಲಯವನ್ನು ಸೂಚಿಸುತ್ತದೆ (10:17; ಮಾರ್ಕ 13:9), ಆದರೆ ಇದು ರೂಢಿಯಂತೆ ಯೆರೂಸಲೇಮಿನಲ್ಲಿ ಕೂಡಿಬರುವ ಸನ್ಹೆದ್ರೀನ್ ಸಭೆಗೆ ಹೋಲಿಸಿ ಗುರುತಿಸಲಾಗಿದೆ. ಆ ನ್ಯಾಯಲಯದಲ್ಲಿ ಎಪ್ಪತ್ತೊಂದು (71) ಪ್ರಭಾವವುಳ್ಳ ಪುರುಷರು, ಮಹಾಯಾಜಾಕರು, ಹಿರಿಯರು ಮತ್ತು ಶಾಸ್ತ್ರಿಗಳು ಒಳಗೊಂಡಿರುತ್ತಿದ್ದರು.

(3) "ಮೂರ್ಖ" ಎನ್ನುವ ಪದ (*mōros*) ಇದು **"ಬೆಂಕಿಯ ನರಕ"ದಲ್ಲಿನ** ದೇವರ ನ್ಯಾಯತೀರ್ಪನ್ನು ತಿಳಿಸುತ್ತದೆ. **"ನರಕ' ಎಂಬುದನ್ನು ಗ್ರೀಕ್ ಭಾಷೆಯ** ***gehenna*** **ಎಂಬ ಶಬ್ದದಿಂದ ಅನುವಾದಿಸಿದ್ದಾರೆ.** Gehenna ಇದರ ಕಲ್ಪನೆಯು ಯೆರೂಸಲೇಮಿನ ದಕ್ಷಿಣದಲ್ಲಿರುವ ಹಿನ್ನೊಮ್ ಕಣಿವೆಯಿಂದ ಹುಟ್ಟುತ್ತದೆ. ದ್ವೇಷಿಸುವಂತ ಈ ಸ್ಥಳವು ಅಂತ್ಯಂತ ಅನೀತಿ, ಅನ್ಯಮತ ಆರಾಧಿಕರ ಮೆಲೇಕು ದೇವತೆಗೆ ಚಿಕ್ಕ ಮಕ್ಕಳನ್ನು ಬಲಿ ಅರ್ಪಿಸುವ ಯೋಚನೆಗಳನ್ನು ಯೆಹೂದ್ಯರ ಮನಸ್ಸಿನಲ್ಲಿ ಹುಟ್ಟಿಸುತ್ತದೆ (2 ಪೂರ್ವಕಾಲವೃತ್ತಾಂತ 28:3; 33:6; ಯೆರೆಮೀಯಾ 32:35). ರಾಜ ಯೋಷೆಯನು ಆ ಸ್ಥಳವನ್ನು ಹೊಲಸು ಮಾಡಿದನು (2 ಅರಸುಗಳು 23:10), ಮತ್ತು ಅದು "ಜನರನ್ನು ಸಂಹಾರ ಮಾಡುವ ತಗ್ಗು ಪ್ರದೇಶ"

ಎಂದು ಯೆರೇಮಿಯನು ತರುವಾಯ ಪ್ರವಾದಿಸಿದನು - ಬಾಬೆಲಿನವರು ಯುದಾಯದವರ ಸತ್ತದೇಹಗಳನ್ನು ಅಲ್ಲಿ ಬೀಸಾಡುತ್ತಿದ್ದರು (ಯೆರೆಮಿಯಾ 7:31-33; 19:6). ಹಿನ್ನೊಮ ಕಣಿವೆಯು ಕೊಳಕಾದ ಜಾಗವಾಗಿತ್ತು, ಕಸಹಾಕುವ ತಿಪ್ಪೆಯಾಗಿತ್ತು, ಉಪಯೋಗವಿಲ್ಲದೆ ಬಿದ್ದಿರುವ ವಸ್ತುಗಳನ್ನು ನಾಶಮಾಡುವ ಸ್ಥಳವಾಗಿತ್ತು.[7]

ಹಳೆ ಮತ್ತು ಹೊಸ ಒಡಂಬಡಿಕೆ ಮಧ್ಯ ಕಾಲದಲ್ಲಿ, ಈ ಸ್ಥಳವನ್ನು ನಿತ್ಯ ಸುಡುವ ಶಿಕ್ಷೆಕೊಡುವ ಸ್ಥಳವಾಗಿ ಗುರುತು ಮಾಡಿದರು - ಅದುವೆ ನರಕ. ಹಿನ್ನೊಮ ಕಣಿವೆಯಲ್ಲಿ ಸೇರಿಕೊಂಡು ಸಹಕರಿಸುವ ಬೆಂಕಿಯು ಮೂರು ದಿಕ್ಕಿನಿಂದ ಎದ್ದೇಳುವಂತಿದೆ: ಮೆಲೇಕು ದೇವತೆಯನ್ನು ಆರಾಧಿಸುವಾಗ ಮತಾರಾಧಿಕರು ಉರಿಯುತ್ತಿರುವ ಅಗ್ನಿಯಂತೆ, ಕಸವು ಹಾಕಿದ ಮೇಲೆ ಯಾವಾಗಲು ಬೆಂಕಿ ಸಣ್ಣಗೆ ಉರಿಯುತ್ತಿರುವಂತೆ, ಮತ್ತು ಹಳೆ ಒಡಂಬಡಿಕೆಯ ವಾಕ್ಯಗಳು ಸೂಚಿಸುವ ಬೆಂಕಿಯ ನ್ಯಾಯ ತೀರ್ಪಿನಂತದ್ದಾಗಿದೆ (ಯೆಶಾಯ 30:33; 33:14; 66:24).

ಯೇಸು ತನ್ನ ಶಿಷ್ಯರಿಗೆ ಜ್ಞಾಪಿಸಿ ಹೇಳದ್ದೇನೆಂದರೆ, ಒಬ್ಬನು ತನ್ನ ಸಹೋದರನಿಗಾಗಲಿ ಅಥವಾ ಸಹೋದರಿಗಾಗಲಿ ಕೆಟ್ಟಮಾತುಗಳಿಂದ ಮತ್ತು ದುಷ್ಟ ಕಾರ್ಯಗಳಿಂದ ನಾಶನ ಉಂಟುಮಾಡಿದವನಿಗೆ ಅಂತಹ ಪರಿಣಾಮಕಾರಿಯಾದ ಶಿಕ್ಷೆಗಿಂತ ಮತ್ತೊಂದಿಲ್ಲವೆಂದು ಹೇಳಿದನು. "ಅಂಥವನು ನ್ಯಾಯವಿಚಾರಣೆಗೆ ಗುರಿಯಾಗುವನು ಮತ್ತು ನಿತ್ಯ ಬೆಂಕಿಗೆ ಗುರಿಯಾಗುವನು ಎಂದು ಕೆಲವು ಸುಳ್ಳು ಶಿಷ್ಯರಂತೆ"[8] ಇರುವವರಿಗೆ ಯೇಸು ಕೊಟ್ಟಿರುವ ಅಂತಿಮ ಎಚ್ಚರಿಕೆಯನ್ನು ಸೂಚಿಸುತ್ತದೆ.

**ವಚನಗಳು 23, 24.** ಸಾಮಾನ್ಯವಾದ ಸೂತ್ರಗಳನ್ನು ಕೊಟ್ಟ ನಂತರ, ಯೇಸು ಎರಡು ಅನ್ವಯಿಸುವಿಕೆಗಳನ್ನು ಉಪಯೋಗಿಸಿದ್ದಾನೆ. ಮೊದಲನೆಯದು, ದೇವರಿಗೆ ಮೊದಲು ಆರಾಧಿಸುವದಕ್ಕಿಂತಲೂ **ಸಹೋದರನ ಸಂಗಡ ಒಂದಾಗುವ** ಪ್ರಾಮುಖ್ಯತೆಯು ಒತ್ತಿ ಹೇಳಲಾಗಿದೆ. ಶಿಷ್ಯರು ಕೇವಲ ಸಹೋದರ ಕುರಿತು ಕೆಟ್ಟದ್ದಾಗಿ ತಮ್ಮ ಹೃದಯಲ್ಲಿ ಯೋಚಿಸುವದು ಅಥವಾ ಮಾತಾಡುವದು ಬಿಟ್ಟು ಬಿಡಬೇಕೆಂದು ಹೇಳುವದಲ್ಲದೆ ಅವರು ತಮ್ಮ ಸಹೋದರ ಮಧ್ಯ ಮತ್ತು ಇತರರೊಂದಿಗೆ ಇರುವ ಸಮಸ್ಯೆಗಳನ್ನು ಸರಿಪಡಿಸಿಕೊಳ್ಳಲು ಸರಿಯಾದ ಹೆಜ್ಜೆಗಳನ್ನು ಇಡಬೇಕು. ಪುನಃ ಒಂದಾಗಲು ಪ್ರಯತ್ನಿಸುವ ಕಾರ್ಯವನ್ನು ಮಾಡುವುದು ತಪ್ಪಿತಸ್ಥನ ಮೇಲೆ ಹೊರಿಸಲಾಗಿದೆ, ಆದರೆ ಮತ್ತಾಯ 18:15-17ರಲ್ಲಿ ನೊಂದವನ ಮೇಲೆ ಹೊರಿಸಲಾಗಿದೆ. ವೈಯಕ್ತಿಕವಾಗಿ ಒಬ್ಬೊಬ್ಬರು ಸಮಸ್ಯೆಗಳನ್ನು ಅರಿತುಕೊಂಡು ಏನು ಮಾಡದೇ ಹೋದಲ್ಲಿ, ಕೊನೆಗೆ ಅವರು ಅಪರಾಧಿಗಳಾಗಿ ಉಳಿಯುವರು.

ಯೇಸುವಿನ ಮಾರ್ಗದರ್ಶನವು ಅದು ಯೆರೂಸಲೇಮಿನ ದೇವಾಲಯದಲ್ಲಿ ಯೆಹೂದ್ಯರು ದೇವರಿಗೆ **ಕಾಣಿಕೆ ಕೊಡುವದಕ್ಕೆ ಸಂಬಂಧಿಸಿದ್ದಾಗಿದೆ.** ಧರ್ಮಶಾಸ್ತ್ರದ ಅಡಿಯಲ್ಲಿ ಬಲಿ ಅರ್ಪಣೆಗಳನ್ನು ಅರ್ಪಿಸುವುದು ದೇವರ ಮತ್ತು ಪಾಪಿಯ ಮಧ್ಯೆ ಉಂಟಾದ ಭಂಗವನ್ನು ಸ್ವಸ್ಥಗೊಳಿಸುವ ಮಾರ್ಗವಾಗಿದೆ, ಆದರೆ ಅವುಗಳಿಂದ ಅವುಗಳ ಮುಖಾಂತರ ಪಾಪಕ್ಕೆ ಪ್ರಾಯಶ್ಚಿತ್ತವಾಗುವದಿಲ್ಲ (ನೋಡಿರಿ ಇಬ್ರಿಯ 10:1-4); ಅವರು ನಿಜವಾದ ಪಶ್ಚಾತ್ತಾಪ ಹೊಂದಬೇಕು ಮತ್ತು ಯಥಾರ್ಥವಾಗಿ ತಪ್ಪುಗಳನ್ನು ಸರಿಪಡಿಸಿಕೊಂಡಾಗ ಅವನ ಪಾಪದ ಕಾರಣವು ಸರಿಹೊಂದಬಹುದು. ಶಿಷ್ಟಾಚಾರ ಯಜ್ಞಾರ್ಪಣೆಗಳು ನೀತಿಯಲ್ಲಿ ಬಿದ್ದು ಹೋಗುವಿಕೆಗೆ ಪ್ರತಿಯಾಗುವದಿಲ್ಲ ಎಂದು ಯೇಸು ಸ್ಪಷ್ಟಪಡಿಸಿದ್ದಾನೆ.

**ನಿನ್ನ ಕಾಣಿಕೆಯನ್ನು ಆ ಯಜ್ಞವೇದಿಯ ಮುಂದೆಯೇ ಬಿಟ್ಟು ಹೋಗಿ** ಎಂಬ ಅಪ್ಪಣೆ ಅತಿಶಯೋಕ್ತಿಯೊಂದಿಗೆ ಒಳಗೊಂಡಿದೆ. "ಇದು ಖಚಿತವಾಗಿ ಯಜ್ಞಪೀಠದ ಮುಂದೆ ತುಂಬಾ ಕಾರ್ಯನಿರತವಾಗಿರುವಾಗ ಧಾನ್ಯದಿವಸದ ಕಾಣಿಕೆ ಬಿಟ್ಟು ಹೋಗುವದು ಸಾಧ್ಯವಾಗುವದಿಲ್ಲ, ಎರಡು ಪಾರಿವಾಳ ತೆಗೆದುಕೊಳ್ಳಲು ಅಥವಾ ಎರಡು ಆಡುಗಳನ್ನು ತೆಗೆದುಕೊಳ್ಳಲಿ!"[9]

ಇದು ಮಾತ್ರವಲ್ಲದೆ, ನಿಂದಿಸಲ್ಪಟ್ಟ ಸಹೋದರರನು ಅದೇ ದಿನ ಸಹ ಯೆರೂಸಲೇಮಿನ ದೇವಾಲಯಕ್ಕೆ ಪ್ರಯಾಣ ಮಾಡಿ ಬಂದಿರದೆ ಇರಬಹುದು. ಯೇಸು ಇಲ್ಲಿ ಅತಿಶಯೋಕ್ತಿಯಾಗಿರುವ ಸಂಗತಿ ಹೇಳಿದ್ದಾನೆ. ಒಬ್ಬನು ತನ್ನ ಸಹೋದರರನೊಂದಿಗೆ ಒಂದಾಗುವಾಗ ದೇವರೊಂದಿಗೆ ಒಂದಾಗಲು ಸಾಧ್ಯವಾಗುತ್ತದೆ. "ಒಬ್ಬ ಮನುಷ್ಯ ಮತ್ತು ಇನ್ನೊಬ್ಬ ಮನುಷ್ಯ ಮಧ್ಯ ಸರಿ ಇರದೆ ಇರುವಾಗ ಕೇವಲ ಒಬ್ಬ ವ್ಯಕ್ತಿ ಇನ್ನೊಬ್ಬ ಆ ವ್ಯಕ್ತಿಯ ಒಳ್ಳೆಯ ಮನಸ್ಸನ್ನು ಗೆಲ್ಲುವುದಾದರೆ ಪಶ್ಚಾತ್ತಾಪವು ಸಂದಾನವಾಗಿ ಅದೇ ದಿನ ಪರಿಹಾರವಾಗುತ್ತದೆ"[10] ಎಂದು ಯೆಹೂದ್ಯರ ಸಂಪ್ರದಾಯ ಹೇಳುತ್ತದೆ. The Didache ಎಂಬ ಹಿಂದಿನ ಕಾಲದ ಕ್ರೈಸ್ತರ ಒಂದು ಬರವಣಿಗೆ ಹೀಗೆ ಹೇಳುತ್ತದೆ, "ಆದರೆ ಜಗಳವಾಡಿಕೊಂಡಿರುವ ಇವರಲ್ಲಿ ಯಾರೋಬ್ಬನು [ಸಭೆಗೆ] ಕೂಡುವಿಕೆಗೆ ಬಾರದಿರಲಿ ಅವರು ಒಂದಾಗುವವರೆಗೆ ಬಾರದಿರಲಿ ಅದರಿಂದ ನಿಮ್ಮ ಅರ್ಪಣೆಯು ಮಲಿನವಾಗುವುದಿಲ್ಲ."[11]

**ವಚನಗಳು 25, 26.** ಯೇಸು ಉಪಯೋಗಿಸಿರುವ ಎರಡನೆಯ ಅನ್ವಯಿಸುವಿಕೆ ತಪ್ಪು ಮಾಡಿದವನು ನಿಜವಾಗಿ ಮೊದಲು ಯಾರಿಗೆ ತಪ್ಪುಮಾಡಿದನೋ ಅವನಿಗೆ ಅಧಿಕೃತವಾಗಿ ಈತನೇ ಆ ಕೆಲಸ ಪ್ರಾರಂಭಮಾಡಬೇಕು ಆ ಸಂದರ್ಭವನ್ನು ಈ ರೀತಿಯಲ್ಲಿ ಆತನು ಬಣ್ಣಿಸಿದ್ದಾನೆ. ತಪ್ಪು ಮಾಡಿದವನು ಅವರಿಬ್ಬರು ನ್ಯಾಯಲಕ್ಕೆ ಬರುವದಕ್ಕಿಂತ ಮುಂಚೆಯೇ ಅದನ್ನು ಸರಿಪಡಿಸಿಕೊಳ್ಳಬೇಕು: **ಇಲ್ಲದಿದ್ದರೆ ಆ ವಾದಿಯು ನಿನ್ನನ್ನು ನ್ಯಾಯಾಧಿಪತಿಗೆ ಒಪ್ಪಿಸಾನು;** ಆ ಸಂದರ್ಭದ ಅವಸರವನ್ನು ಒತ್ತಿ ಹೇಳಿದೆ, ಒಂದಾಗದೆ ಬಿಟ್ಟು ಬಿಟ್ಟು ಇರುವುದಾದರೆ ಸನ್ನಿವೇಶ ಇನ್ನು ಕೆಟ್ಟದಾಗುತ್ತದೆ. ವಿರೋಧಿಯು **ನ್ಯಾಯದೀಶನ** ಮುಂದೆ **ಕೈ** [ತಪ್ಪಿಗಸ್ತನಿಗೆ] ತೋರಿಸಬಹುದು. ತಪ್ಪನ್ನು ಕಂಡುಹಿಡಿದ ಮೇಲೆ, ಅವನನ್ನು **ಅಧಿಕಾರಿಗೆ** ಒಪ್ಪಿಸಬಹುದು ಮತ್ತು ಅಂತ್ಯದಲ್ಲಿ **ಅವನಿಗೆ ಸೆರೆಮನೆಯಲ್ಲಿ ಹಾಕುವರು.** ದೇವರು ಇಸ್ರಾಯೇಲರಿಗೆ ಸೂಚನೆ ಕೊಟ್ಟು ಎಲ್ಲಾ ಊರುಗಳಲ್ಲಿ "ನ್ಯಾಯಾಧಿಶರುಗಳನ್ನು" ಮತ್ತು "ಅಧಿಕಾರಿಗಳನ್ನು" ನೇಮಿಸಬೇಕೆಂದು ಹೇಳಿದನು (ಧರ್ಮೋಪದೇಶಕಾಂಡ 16:18). ನ್ಯಾಯಾಧೀಶರ ಮಾತುಗಳನ್ನು ಅಧಿಕಾರಿಗಳು ನಡಿಸಿಕೊಡುವರು.

ಈ ಸನ್ನಿವೇಶದಲ್ಲಿ ವಿಷಯವು ಹಣಕಾಸಿಗೆ ಸಂಬಂಧಿಸಿದ ದೃಶ್ಯಕ್ಕೆ ಹೋಗುತ್ತದೆ: **ನೀನು ಒಂದು ಕಾಸನ್ನಾದರೂ ನಿಲ್ಲಿಸಿಕೊಳ್ಳದೆ ಎಲ್ಲಾ ಸಲ್ಲಿಸುವ ತನಕ ಅಲ್ಲಿಂದ ಬರುವದೇ ಇಲ್ಲ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ.** ಈ ಶಬ್ದ "cent" (*kodrantēs*) ಎಂದು ಸೂಚಿಸುತ್ತದೆ. *Quadrans* ಅಂದರೆ ರೋಮನ್ನರ ಒಂದು ಚಿಕ್ಕ ನಾಣ್ಯ. ಇದನ್ನು ವಿದುವೆಯು ಕೊಟ್ಟರು "ಎರಡು ಕಾಸು" ಇದರ ಬೆಲೆಗೆ ಸಮವಾಗಿದೆ (ಮಾರ್ಕ 12:42; KJV). ಹಿಂದಿನ ಕಾಲದ *ಅನ್ಯರಲ್ಲಿ* ಸಾಲಕ್ಕಾಗಿ ಸೆರೆಮನೆಯಲ್ಲಿ ಹಾಕುವದು ಸಾಮಾನ್ಯ ಅಭ್ಯಾಸವಾಗಿತ್ತು (18:34; ಲೂಕ 12:57-59). ಯೆಹೂದ್ಯರ ಹಿನ್ನಲೆಯಲ್ಲಿ, ಸಾಲಗಾರರನ್ನು ಸೆರೆಮನೆಯಲ್ಲಿ ಹಾಕುವ ಅನ್ಯರ ಆಚಾರವನ್ನು ಸೂಚಿಸುತ್ತದೆ, ಅವರು ಸಾಲ ಮರುಪಾವತಿಸಲು ಹಣ ಸಂಪಾದನೆ ಮಾಡಲು ಯಾವ ಮಾರ್ಗವು ಇಲ್ಲ, ಅದು ಸಾಲ ಮೊತ್ತವನ್ನು ಮರುಪಾವತಿಸುವ ಪ್ರಾಮುಖ್ಯತೆಯನ್ನು ತೋರಿಸುತ್ತದೆ. ಇದು ನ್ಯಾಯತೀರ್ಪಿನ ರೂಪಚಿತ್ರವನ್ನು ಕೇಳುಗರ ಮನಸ್ಸಿನಲ್ಲಿ ಪರಿಣಾಮಕರವಾದ ಎಚ್ಚರಿಕೆಯನ್ನು ಕೊಡುತ್ತದೆ.[12]

## ವ್ಯಭಿಚಾರಕ್ಕೆ ಸಂಬಂಧಿಸಿದ ವಿಷಯ (5:27-30)

**27ವ್ಯಭಿಚಾರ ಮಾಡಬಾರದೆಂದು ಹೇಳಿಯದೆ ಎಂಬುದಾಗಿ ನೀವು ಕೇಳಿದ್ದಿರಷ್ಟೆ. 28ಆದರೆ ನಾನು ನಿಮಗೆ ಹೇಳುವುದೇನೆಂದರೆ - ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು. ನಿನ್ನ ಬಲಗಣ್ಣು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಿತ್ತು ಬಿಸಾಟುಬಿಡು; 29ನಿನ್ನ ದೇಹವೆಲ್ಲಾ ನರಕದಲ್ಲಿ**

**ಬೀಳುವದಕ್ಕಿಂತ ಅವಯವಗಳಲ್ಲಿ ಒಂದು ಹೋಗುವದು ನಿನಗೆ ಹಿತವಲ್ಲವೇ. ³⁰ನಿನ್ನ ಬಲಗೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಡಿದು ಬಿಸಾಟುಬಿಡು; ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವದಕ್ಕಿಂತ ಅವಯುವಗಳಲ್ಲಿ ಬಂದು ಹೋಗುವದು ನಿನಗೆ ಹಿತವಲ್ಲವೇ.**

**ವಚನ 27.** ದೈಹಿಕವಾಗಿ ವ್ಯಭೀಚಾರ ಮಾಡುವದು ಪಾಪವೆನ್ನುವ ಯೆಹೂದ್ಯರ ಬೋಧನೆಗೆ ಯೇಸು ಬೆಂಬಲಕೊಟ್ಟನು. ಆತನ ಬೋಧನೆ ಕೇಳುವವರು ಏಳನೆಯ ಆಜ್ಞೆಗೆ ಚಿರಪರಿಚಿತರಾಗಿದ್ದರು. **ನೀವು ವ್ಯಭಿಚಾರ ಮಾಡಬಾರದು** (ವಿಮೋಚನಕಾಂಡ 20:14; ಧರ್ಮೋಪದೇಶಕಾಂಡ 5:18). ಮೋಶೆಯ ಧರ್ಮಶಾಸ್ತ್ರದಲ್ಲಿ ವ್ಯಭಿಚಾರವು ಪಾಪವಾಗಿತ್ತು, ಮತ್ತು ಕ್ರಿಸ್ತನ ನಿಯಮದ ಪ್ರಕಾರ ಅದು ಪಾಪವಾಗಿತ್ತು. ಹಳೆ ಒಪ್ಪಂದದಂತೆ ಇದಕ್ಕೆ ಶಿಕ್ಷೆ ಮರಣದಂಡನೆಯಾಗಿತ್ತು (ಯಾಜಕಕಾಂಡ 20:10; ಧರ್ಮೋಪದೇಶಕಾಂಡ 22:22), ಮತ್ತು ಹೊಸ ಒಪ್ಪಂದದಡಿಯಲ್ಲಿ ಇದಕ್ಕೆ ಶಿಕ್ಷೆ ಆತ್ಮೀಯ ಮರಣವಾಗಿತ್ತು (1 ಕೊರಿಂಥ 6:9; ಪ್ರಕಟಣೆ 21:8; 22:15).

**ವಚನ 28.** ಹಾಗಿದ್ದರೂ, ವ್ಯಭಿಚಾರ ಮಾಡಬಾರದು ಎಂಬ ಆಜ್ಞೆಯನ್ನು ಯೇಸು ಹಳೆ ಒಡಂಬಡಿಕೆಗಿಂತಲೂ ಹೆಚ್ಚಾಗಿ ವಿಸ್ತರಿಸಿ ಮಾತಾಡಿದನು: **ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾಗಿದ್ದಾನೆ.** ದೈಹಿಕವಾಗಿ ಕೃತ್ಯವೆಸಗಿದರೆ ಪಾಪ ಮಾಡಿದಂತೆ ಎಂದು ಕೆಲವು ಯೆಹೂದ್ಯ ರಬ್ಬಿಗಳು ಪರಿಗಣಿಸಿರುವಾಗ ದುರಾಶೆಗೆ ಅಲ್ಲಿ ಅವಕಾಶವಾಯಿತು, ಆ ಯೋಚನೆಯು ಬರುವದು ಸಹ ಪಾಪವೆಂದು ಯೇಸು ಸ್ಪಷ್ಟಪಡಿಸಿದ್ದಾನೆ.[13]

ಈ ದುರಾಶೆಯನ್ನು ಯೇಸು ವಿರೋಧಿಸಿದಂತೆ ಇತರೆ ಯೆಹೂದ್ಯ ಬೋಧಕರು ವಿರೋಧಿಸಿದರು, ಉದಾಹರಣೆಗೆ, "ಒಬ್ಬನು ತನ್ನ ದೇಹದ ಕೃತ್ಯದಿಂದ ದುಷ್ಟಕಾರ್ಯ ಮಾಡಿದರೆ ಮಾತ್ರ ಅವನನ್ನು ವ್ಯಭಿಚಾರ ಎಂದು ಕರೆಯಬಾರದು." ತರುವಾಯ "ಒಬ್ಬನು ತನ್ನ ಕಣ್ಣಿನಿಂದ ವ್ಯಭಿಚಾರ ಮಾಡಿದರೂ ಅವನನ್ನು ವ್ಯಭಿಚಾರಿ ಎಂದು ಕರೆಯಬೇಕು."[14] ಒಂದು ಮೂಲವು ಹೇಳುತ್ತದೆ. ಈ ಒಂದು ಎಚ್ಚರಿಕೆ ಒಂದು ಅಪ್ರಮಾಣಿಕ ಗ್ರಂಥದಲ್ಲಿ ನೋಡುತ್ತೇವೆ: ಅಂದವಾದ ಸ್ತ್ರೀಯನ್ನು "ನಿನ್ನ ಕಣ್ಣುಗಳಿಂದ ನೋಡದೆ ಸ್ತ್ರೀ ಕಡೆಯಿಂದ ಕಣ್ಣುಗಳನ್ನು ತಿರುಗಿಸು, ಮತ್ತು ಇನ್ನೊಬ್ಬರಿಗೆ ಸೇರಿದ ಆ ಸುಂದರವನ್ನು ಅಳೆಯಬೇಡ, ಮತ್ತು ಅನೇಕರು ಸ್ತ್ರೀಯರ ಸೌಂದರ್ಯದಿಂದಲೇ ಕೆಟ್ಟಮಾರ್ಗದಲ್ಲಿ ಬಿದ್ದಿದ್ದಾರೆ, ಇಂಥಹ ಭಾವೋದ್ರೇಕ ಬೆಂಕಿಯಂತೆ ಕಿಡಿಯನ್ನು ಹಚ್ಚುತ್ತದೆ."[15]

ದುರಾಶೆಯ ಪಾಪವು, ಇತರೆ ಪಾಪದಂತೆ, ಎಲ್ಲಾ ವಿಷಯಗಳಲ್ಲಿ ಕೊಲ್ಲುತ್ತದೆ. ದುರಾಶೆಯ ನೋಟ ಕೆಟ್ಟಕಾರ್ಯಕ್ಕೆ ನಡೆಸಬಹುದು. "ನೋಟದ" ಕುರಿತು ಉಪಯೋಗಿಸಿರುವ ಪದ ಗ್ರೀಕ್ ಶಬ್ದವು ಇದನ್ನು ಒಂದೆ ವಸ್ತುವನ್ನು ನಿರಂತರವಾಗಿ ನೋಡುವದು ಎಂದು ಗುರುತಿಸಲಾಗಿದೆ, ಅದನ್ನು ಒಂದೇ ಚಿತ್ತದಿಂದ ನೋಡುತ್ತಾ ಇರುವದು ಆಗಿದೆ. ಇದು ದುರಾಶೆ ಒಳಗೊಂಡಿರುತ್ತದೆ, ಅದೆ ಭ್ರಮೆಯಲ್ಲಿರುವದು, ಮತ್ತು ಆಲೋಚನೆಯಲ್ಲಿ ಮಾನಸಿಕವಾಗಿ ಕೆಟ್ಟದಾಗಿ ಕಾನೂನು ಬಾಹಿರ ಸಂಬಂಧದಲ್ಲಿ ನಿರತರಾಗಿರುವದು (ನೋಡಿರಿ 2 ಪೇತ್ರನು 2:14; 1 ಯೋಹಾನ 2:16). "ಸ್ತ್ರೀಗಾಗಿ ಪುರುಷನ ಸಹಜ ಆಶಿಸುವಿಕೆಯನ್ನು ಯೇಸು ಇಲ್ಲಿ ಖಂಡಿಸುತ್ತಿಲ್ಲ. ಆದರೆ ಧರ್ಮಸಮ್ಮತವಾದ ಹಕ್ಕಿಲ್ಲದ ಸ್ತ್ರೀಯನ್ನು ದುರಾಶೆಯಿಂದ ಆಶಿಸುವುದನ್ನು ಖಂಡಿಸಿದ್ದಾರೆ."[16]

ಹಳೆ ಒಡಂಬಡಿಕೆಯಲ್ಲಿ ಎದ್ದು ಕಾಣುವ ವ್ಯಭಿಚಾರಕ್ಕೆ ಉದಾಹರಣೆ, ದಾವೀದ ಮತ್ತು ಬೆತ್ಸೆಬೆ ಸೇರಿರುವದು, ಆಕೆಯು ಸ್ನಾನ ಮಾಡುತ್ತಿರುವಾಗ ಆತನ ದುರಾಶೆಯು ಪ್ರಾರಂಭವಾಗಿತ್ತು (2 ಸಮುವೇಲ 11:2-4). "ನನ್ನ ಕಣ್ಣುಗಳೊಡನೆ ನಿಬಂದನೆಯನ್ನು ಮಾಡಿಕೊಂಡಿದ್ದೇನೆ ಯುವತಿಯ ಮೇಲೆ ಹೇಗೆ ಕಣಿಟ್ಟೆನು?" ಎಂದು ಯಾವುದೇ

ದೂಷಣೆಯಿಲ್ಲದ ಯೋಬನು ಒಂದು ಸಾರಿ ಗಟ್ಟಿಯಾಗಿ ಹೇಳಿದ್ದಾನೆ (ಯೋಬ 31:1). ಆತನು ಮುಂದೆ ಹೀಗೆ ಹೇಳಿದ್ದಾನೆ ಒಂದು ವೇಳೆ ನನ್ನ ಹೃದಯವು ಪರಸ್ತ್ರೀಯಲ್ಲಿ ಮರಳುಗೊಂಡು ಮತ್ತು ಆ ಸಂದರ್ಭಕ್ಕೆ ಹೊಂದಿಕೊಂಡು ತಪ್ಪುಕಾರ್ಯಮಾಡದೆ ಇದ್ದೆನು ಎಂದು ಹೇಳಿದನು (ಯೋಬ 31:9-12).

ದುರಾಶೆಯು ಮಾನಸಿಕ ವ್ಯಭಿಚಾರ ಎನ್ನುವದು ಯೇಸು ಹೇಳಿರುವ ಮಾತುಗಳು ಸೂಚಿಸುತ್ತವೆ. ಮಾನಸಿಕವಾಗಲಿ ಇಲ್ಲವೆ ದೈಹಿಕವಾಗಿಯಾಗಲಿ ಜನರು ತಮ್ಮ ಸ್ವಂತ ಸಂತೋಷಕ್ಕಾಗಿ ಉಪಯೋಗಿಸುವ ಉದ್ದೇಶ ಹೊಂದಿರಬಾರದು. ಲೈಂಗಿಕವಾದ ವಿಷಯ ದೇವರು ಕೊಟ್ಟಿರುವ ಬಹುಮಾನವಾಗಿದ್ದರು ಅದು ತಪ್ಪಾಗಿ ಉಪಯೋಗಿಸಿ ದುಷ್ಟಕಾರ್ಯಮಾಡುತ್ತಾರೆ. ಅದಕ್ಕೆ ಸಂಬಂಧಿಸಿದ ದೇವರ ಆಜ್ಞೆಗಳನ್ನು ಕೈಕೊಂಡು ನಡೆದಾಗ ಮಾತ್ರ ಲೈಂಗಿಕದ ಸಂಪೂರ್ಣ ಸಂತೋಷವನ್ನು ಕಂಡುಕೊಳ್ಳಬಹುದು.

**ವಚನಗಳು 29, 30.** ಪಾಪವು ಅದರ ಮೂಲಸ್ಥಾನದಿಂದಲೇ ತೆಗೆದುಹಾಕಬೇಕು. ಇಂಥಹ ಒಂದು ಗಂಭೀರವಾದ ಕಾರ್ಯಮಾಡದೆ ಹೋದರೆ, ಮಾನಸಿಕ ವ್ಯಭಿಚಾರ ಹೇಗೆ ತಡೆಯುತ್ತಿರಿ? **ನಿನ್ನ ಬಲಗಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಿತ್ತು ಬಿಸಾಟುಬಿಡು** ಎಂದು ಯೇಸು ಹೇಳಿದನು, Robert H. Mounce ಹೀಗೆ ಹೇಳುತ್ತಿದ್ದಾರೆ, “ಕಣ್ಣುಗಳೆ ಹಾಸ್ಯಾಸ್ಪದವಾಗಿವೆ, ಬಿದ್ದು ಹೋಗುವದನ್ನು ತಡೆಯೊಡ್ಡುವ ಕಣ್ಣುಗಳೇ ಬೀಳುವದಕ್ಕೆ ಕಾರಣವಾಗಿವೆ”[17] ಎಂದು ಆರೋಪಿಸುವಂತಾಗಿದೆ.

ಸಭೆಯು ಪ್ರಾರಂಭದ ದಿನಗಳಲ್ಲಿ, ಯೇಸುವಿನ ಹೇಳಿಕೆಯು ಅಕ್ಷಾರಾರ್ಥವಾಗಿ ತೆಗೆದುಕೊಳ್ಳಲಾಗಿದೆ. ಅದೇ ವಿಧವಾಗಿ Origen ರವರು (c. 185-254). “ಅಂದು ಮೊದಲಿನ ಸಭೆಯ ಪಾಲಕರಲ್ಲಿ ಒಬ್ಬರು,” ಮತ್ತಾಯ 19:12ರಲ್ಲಿ ಯೇಸು ಬೋಧಿಸಿರುವ ಪ್ರಕಾರ ಪರಲೋಕ ರಾಜ್ಯಕ್ಕೋಸ್ಕರ ತನ್ನಷ್ಟಕ್ಕೆ ತಾನೇ ನಪುಂಸಕನನ್ನಾಗಿ ಮಾಡಿಕೊಂಡನು ಎಂದು ಹೇಳಿದ್ದಾರೆ.[18] ಹಾಗಿದ್ದರೂ, ಯೇಸು ಸ್ವಂತ ಅಂಗಹೀನತೆ ಮಾಡಿಕೊಳ್ಳುವದಕ್ಕೆ ಸಲಹೆ ಕೊಡುವುದಿಲ್ಲ; ಆತನು ತನ್ನ ಅಂಶವನ್ನು ಸ್ಪಷ್ಟಪಡಿಸಲು ಅತಿಶಯೋಕ್ತಿ ಅಥವಾ ಅತ್ಯೋಕ್ತಿ ಯನ್ನು ಉಪಯೋಗಿಸಿದ್ದಾನೆ. ಆತನು ವಚನ 29 ಮತ್ತು 30ರಲ್ಲಿ ಅದರ ಮೂಲದಿಂದಲೆ ಶಸ್ತ್ರಚಿಕಿತ್ಸೆ ಮಾಡಬೇಕೆಂದು ಆಜ್ಞಾಪಿಸಲಿಲ್ಲ, ಆದರೆ ಆತನು ತನ್ನ ಹಿಂಬಾಲಕರು ತಮ್ಮ ಜೀವಿತದಲ್ಲಿರುವ ಪಾಪವನ್ನು ತೆಗೆದುಹಾಕಬೇಕೆಂದು ಒತ್ತಿ ಹೇಳುತ್ತಿದಾನೆ. ಸ್ವಾಭಾವಿಕವಾಗಿ ಇರುವ ಮೋಹದ ಆಸೆ, ಇವುಗಳನ್ನು ಹತೋಟಿಗೆ ತರುವುದಕ್ಕೆ ಅವಶ್ಯಕವಾಗಿ ತೆಗೆದುಕೊಳ್ಳುವ ಕ್ರಮಗಳು ತೆಗೆದುಕೊಂಡು ಹಿಡಿತದ ಜೀವಿತದಲ್ಲಿರಬೇಕೆಂದು ಈ ಅಲಂಕಾರವು ಒತ್ತಾಯ ಪಡಿಸುತ್ತದೆ.[19]

**ನಿನ್ನ ಬಲಗೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಡಿದು ಬಿಸಾಟುಬಿಡು**, ಎಂದು ಯೇಸು ಕೂಡ ತಿಳಿಸಿದ್ದಾನೆ. “ಕಣ್ಣು” ಮತ್ತು “ಕೈ” ಇವೆರಡು ವಿಷಯಗಳಲ್ಲಿ ಬಲಭಾಗವೆಂದು ಸೂಚಿಸಲಾಗಿದೆ ಬಲಗೈಯನ್ನು ಪ್ರಬಲವಾದದ್ದೆಂದು, ಅವಲೋಕಿಸದ್ದರಿಂದ, ಇದು ಅಚ್ಚುಮೆಚ್ಚಿನ ಕೈಯೆಂದು ಅಭಿಪ್ರಾಯ ಹೊಂದಲಾಗಿದೆ. ಯೇಸು ಈ ಪ್ರತ್ಯೇಕ ಪರಿಗಣನೆ ಕಣ್ಣಿಗೂ ಸಹ ಸಂಬಂಧಿಸಿದೆ ಎಂದು ಹೇಳಿದ್ದಾನೆ.

ಒತ್ತಿ ಹೇಳುವ ಕಾರಣಕ್ಕಾಗಿಯೇ, ಯೇಸು ಎರಡು ಸಾರಿ ಎಚ್ಚರಿಕೆ ಕೊಟ್ಟಿದ್ದಾನೆ: “ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವದಕ್ಕಿಂತ ಅವಯವಗಳಲ್ಲಿ ಒಂದು ಹೊಗುವುದು ನಿನಗೆ ಹಿತವಲ್ಲವೆ.” ಮತ್ತಾಯ 18:8, 9ರಲ್ಲಿ ಇಂಥಹ ಒಂದು ಸಮನಾಂತರವಾದ ಮಾತು ಹೇಳಿದ್ದಾನೆ ಅದರಲ್ಲಿ ಕಣ್ಣು ಮತ್ತು ಕೈ ಮಾತ್ರವಲ್ಲದೆ ಕಾಲನ್ನು ಆ ವಚನಗಳಲ್ಲಿ ಸೇರಿಸಿದ್ದಾನೆ. “ನಿನ್ನ ಕೈಯಾಗಲಿ ನಿನ್ನ ಕಾಲಾಗಲಿ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಡಿದು ಬಿಸಾಟುಬಿಡು; ಎರಡು ಕೈ ಎರಡು ಕಾಲು ಉಳ್ಳವನಾಗಿದ್ದು ನಿತ್ಯವಾಗಿರುವ

ಬೆಂಕಿಯಲ್ಲಿ ಹಾಕಿಸಿಕೊಳ್ಳುವದಕ್ಕಿಂತ ಕೈಕಾಲು ಕಳಕೊಂಡವನಾಗಿ ಜೀವದಲ್ಲಿ ಸೇರುವದು ನಿನಗೆ ಉತ್ತಮ" ಎಂದು ಆತನು ಮುಕ್ತಾಯಮಾಡಿದ್ದಾನೆ. ಚಿಕ್ಕದ್ದನು ದೊಡ್ಡದಾಗಿ ಮಾಡಿ ಹೇಳಿರುವ ಈ "ಅತಿಶಯೋಕ್ತಿಯು ವಿಕೃತಿಯ ಕಾರ್ಯಗಳು ಮುಂದಿನ ಪ್ರಪಂಚದಲ್ಲಿಯೂ ಮುಂದುವರಿಯಬಹುದು ಅದು ಯೆಹೂದ್ಯ ರಬ್ಬಿಗಳ ಚರ್ಚೆಯ ಬೆಳಕಿನಲ್ಲಿ ಹೆಚ್ಚಾಗಿ ಗುರುತಿಸಲಾಗಿದೆ" ಎಂದು Jack P. Lewis ಆಲೋಚಿಸಿದ್ದಾರೆ.[20]

ತರುವಾಯ, ಎಲ್ಲಾ ಪಾಪಗಳು ಹುಟ್ಟುವದು ಹೃದಯದಲ್ಲಿಯೇ ಎಂದು ಯೇಸು ಹೇಳಿದರು (15:18-20). ಮುಖ್ಯವಾದ ಜೀಗದ ಕೈ ಹೃದಯ. ಸ್ತ್ರೀಯನ್ನು ದುರಾಶೆಯಿಂದ ನೋಡುವದು ಸಮಸ್ಯೆಯಲ್ಲ ಎಂದು ಆತನ ಟೀಕೆ ಮತ್ತಾಯ 5:28ರಲ್ಲಿ ದೃಢಪಡಿಸಿದೆ. ಇದು ಕಣ್ಣಿನ ಸಮಸ್ಯೆಯಲ್ಲ, ಆದರೆ ಅದು ಹೃದಯದ ಸಮಸ್ಯೆ. ದುರಾಶೆಯಿಂದ ನೋಡುವದು ಪಾಪವನ್ನುಂಟು ಮಾಡುವದಿಲ್ಲ, ಆದರೆ ಇದಕ್ಕಿಂತ ಮೊದಲೆ ಹೃದಯದಲ್ಲಿ ಪಾಪ ಇರುವದರಿಂದ ಆ ದುರಾಶೆಯ ನೋಟಕ್ಕೆ ಕಾರಣವಾಗಿದೆ. ಅಕ್ಷಾತಾರ್ಥವಾಗಿ ಯೇಸುವಿನ ಆಜ್ಞೆ ತೆಗೆದುಕೊಳ್ಳುವದಾದರೆ, ಕಣ್ಣನ್ನು ತೆಗೆಯುವದಕ್ಕಿಂತಲೂ ಇಲ್ಲವೆ ಕೈಯನ್ನು ಕಡಿದು ಹಾಕುವದಕ್ಕಿಂತಲೂ ತಲೆಯನ್ನು ಕಡಿಯುವದೆ ಹೆಚ್ಚಿನ ಅರ್ಥವುಳ್ಳದ್ದಾಗಿದೆ. ಮೆದುಳು ಕಣ್ಣು ಮತ್ತು ಕೈಯನ್ನು ನಿಯಂತ್ರಣ ಮಾಡುತ್ತದೆ. ಒಬ್ಬ ವ್ಯಕ್ತಿಯ ಕಣ್ಣುಗಳು ಮತ್ತು ಕೈಗಳು ಪಾಪದಲ್ಲಿ ಜೀಳಿಸುವುದಾದರೆ ಆತನು ತನ್ನ ಮೆದುಳಿಗೆ ಕೆಟ್ಟದಾಗಿ ಯೋಚಿಸುವದು ಮತ್ತು ಅತಿಕೆಟ್ಟ ಆಸೆಗಳನ್ನು ನಿಲ್ಲಿಸು ಎಂದು ಕಟ್ಟಪ್ಪಣೆ ಮಾಡಲೇಬೇಕು.

## ವಿಚ್ಛೇದನಕ್ಕೆ ಸಂಬಂಧಪಟ್ಟಿರುವ ವಿಷಯ (5:31, 32)

**31ಇದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟುಬಿಡುವವನು ಆಕೆಗೆ ತ್ಯಾಗಪತ್ರವನ್ನು ಕೊಡತಕ್ಕದ್ದೆಂದು ಹೇಳಿಯದೆಯಷ್ಟೆ. 32ಆದರೆ ನಾನು ನಿಮಗೆ ಹೇಳುವುದೇನೆಂದರೆ - ಹಾದರದ ಕಾರಣದಿಂದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟು ಬಿಡುವವನು ಅವಳು ವ್ಯಭಿಚಾರ ಮಾಡುವದಕ್ಕೆ ಕಾರಣನಾಗುತ್ತಾನೆ. ಮತ್ತು ಗಂಡಬಿಟ್ಟವಳನ್ನು ಮದುವೆ ಮಾಡಿಕೊಳ್ಳುವವನು ವ್ಯಭಿಚಾರ ಮಾಡಿದವನಾಗಿದ್ದಾನೆ.**

**ವಚನ 31.** ವಿಚ್ಛೇದನದ ಕುರಿತಾಗಿ ಮಾತಾಡುವಾಗ, ಯೇಸು ಧರ್ಮಶಾಸ್ತ್ರದ ಮುಖ್ಯವಾದ ಭಾಗವನ್ನು ಅಲಕ್ಷ್ಯಮಾಡಿದ ಯೆಹೂದ್ಯರ ನೈತಿಕ ವ್ಯಾಖ್ಯಾನದೊಂದಿಗೆ ವ್ಯವರಿಸುತ್ತಿದ್ದಾನೆ. ನಿರ್ದಿಷ್ಟವಾದ ಪ್ರಶ್ನೆ ಧರ್ಮೋಪದೇಶಕಾಂಡ 24:1-4 ರಿಂದ ತೆಗೆದುಕೊಳ್ಳಲಾಗಿದೆ:

> "ಒಬ್ಬನು ಮದುವೆ ಮಾಡಿಕೊಂಡ ನಂತರ, ಆತನ ಕಣ್ಣಿಗೆ ಅವಳ ಪರವಾಗಿ ಯಾವುದೇ ಒಳ್ಳೆ ಲಕ್ಷಣ ಕಾಣುವುದಿಲ್ಲ *ಯಾಕೆಂದರೆ* ಅವಳಲ್ಲಿ ಅವಲಕ್ಷಣವನ್ನು ಕಂಡು ಅವಳಲ್ಲಿ ಸಂತೋಷಪಡದೆ ಆಕೆಗೆ ತ್ಯಾಗ ಪತ್ರವನ್ನು ಬರೆದು ಕೊಟ್ಟು ಅವಳನ್ನು ಮನೆಯಿಂದ ಕಳುಹಿಸಿದನು ಅವಳು ಮತ್ತೊಬ್ಬನನ್ನು ಮದುವೆಯಾಗುತ್ತಾಳೆ, *ನಂತರ* ಅವನಿಂದಲೂ ತಿರಸ್ಕರಿಸಲ್ಪಟ್ಟು ತ್ಯಾಗಪತ್ರವನ್ನು ಕೊಟ್ಟು ಕಳುಹಿಸಲ್ಪಟ್ಟರೆ ಅಥವಾ ಈ ಎರಡನೆಯ ಗಂಡನು ಸತ್ತರೆ ಅವಳನ್ನು ಕಳುಹಿಸಿಬಿಟ್ಟ ಮೊದಲನೆಯ ಗಂಡನು ಅವಳನ್ನು ಪುನಃ ಪರಿಗ್ರಹಿಸಬಾರದು; ಅವಳು ಅಶುದ್ಧಳಾದಳು; ಅವಳನ್ನು ಪುನಃ ಪರಿಗ್ರಹಿಸುವದು ಯೆಹೋವನಿಗೆ ಹೇಯಕಾರ್ಯ. ನಿಮ್ಮ ದೇವರಾದ ಯೆಹೋವನು ನಿಮಗೆ ಸ್ವದೇಶವಾಗುವದಕ್ಕೆ ಕೊಡುವ ದೇಶಕ್ಕೆ ದೋಷವುಂಟಾಗುವಂತೆ ಅವಕಾಶ ಕೊಡಬಾರದು ಆ ನೆಲದ ಮೇಲೆ ಪಾಪವು ತೆಗೆದುಕೊಂಡು ಬರಬಾರದು" (ಒತ್ತಿ ಹೇಳಿದ್ದು ನನ್ನದು).

ಈ ವಾಕ್ಯ ಭಾಗವು ಷರತ್ತಿನಿಂದ ಕೂಡಿದೆ. ಮೊದಲಿನ ಮೂರು ವಚನಗಳು ಪೀಠಿಕಾ, ಪರಿಚಯದ ಅಂಶಗಳನ್ನು (ಅಥವಾ "if" ಆಗಿದ್ದ ಪಕ್ಷದಲ್ಲಿ ಎಂದರ್ಥ) ಹೊಂದಿದೆ, ಮತ್ತು ನಾಲ್ಕನೆ ವಚನ ಆಗ ಎಂಬ ಅರ್ಥ ("Then" ತರುವಾಯ) ಹೊಂದಿದೆ.[21] ಇದು ವಿಚ್ಛೇದನಕ್ಕೆ *ಆಜ್ಞೆಯಲ್ಲ,* ಆದರೆ ವಿಚ್ಛೆದನದ ನಿಯಮವಾಗಿದೆ (ಈಗಾಗಲೇ ಇದು ನಡೆಯುತ್ತಿದೆ). ವಿಚ್ಛೆದನ ಹೊಂದಿದ ಸ್ತ್ರೀ ಮರು ಮದುವೆಯಾದವಳನ್ನು ಮೊದಲಿನ ಗಂಡನು ಆಕೆಯನ್ನು ಪುನಃ ಸೇರಿಸಿಕೊಳ್ಳಬಾರದು. ಈ ಶಬ್ದವನ್ನು Christopher Wright, ರವರ ಮಾತಿನಲ್ಲಿ ಹೇಳುವಾಗ "ಇಲ್ಲಿ ಪ್ರಾಯೋಗಿಕ ಪರಿಣಾಮದಿಂದ ನತದೃಷ್ಟ ಮಹಿಳೆ ಮದುವೆಗೆ ಸಂಬಂಧಿಸಿದ ಒಂದು ಕಾಲಚೆಂಡು ಓಡಾಡಿಸಿದಂತೆ ಅವರ ಮಧ್ಯದಲ್ಲಿ ಒಡಾಡಿಸಬಾರದು."[22] ಈ ಮೂಲ ವಾಕ್ಯಕ್ಕೆ ಸಂಬಂಧಿಸಿದಂತೆ, ಜನರ ಹೃದಯ ಕಠಿಣವಾಗಿದ್ದರಿಂದ ಮೋಶೆ ಮಾತ್ರ ವಿಚ್ಛೇದನಕ್ಕೆ ಅವಕಾಶಕೊಟ್ಟನು ಮತ್ತು ಅದನ್ನು ಮಾಡಿದನು ಎಂದು ಯೇಸು ಹೇಳಿದನು (19:8).

**ಇದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟು ಬಿಡುವವನು ಆಕೆಗೆ ತ್ಯಾಗಪತ್ರವನ್ನು ಕೊಡತಕ್ಕದೆಂದು ಹೇಳಿಯದೆಯೆಷ್ಟೆ;** ಎಂಬ ಮಾತು ಧರ್ಮೋಪದೇಶಕಾಂಡ 24:1ರ ಆಧಾರದಲ್ಲಿ, ಇದು ನೇರವಾಗಿ ಹೇಳಿರುವ ಉಲ್ಲೇಖವಲ್ಲ. ಧರ್ಮೋಪದೇಶಕಾಂಡದ ಈ ವಾಕ್ಯ ಭಾಗದಲ್ಲಿ ವಿಚ್ಛೇದನ ಪತ್ರಕೊಡಬೇಕೆಂದು ಭಾವಿಸಲಾಗಿದೆ, ಇದನ್ನು ಹೇಳುವಾಗಲೂ ಸಹ ತ್ಯಾಗಪತ್ರ ಕೊಡುವದು ಆಜ್ಞೆಯಾಗಿದೆ ಎಂದು ಇದು ತಿಳಿಸುತ್ತದೆ (ನೋಡಿರಿ 19:7).

**"ತ್ಯಾಗಪತ್ರವನ್ನು" "ಸಂಪರ್ಕ ಕಡಿದುಕೊಳ್ಳುವ ಬೆಲೆಪಟ್ಟಿ,"** "ಹೊರದೂಡುವ ಪಟ್ಟಿ," "ಸಲಕರಣೆ," "ತೆಗೆದು ಹಾಕುವ ಸಾಧನ," ಮತ್ತು "ಬಿಟ್ಟುಬಿಡುವ ಪತ್ರ"[23] ಎಂದು ಕರೆಯಲಾಗುತ್ತದೆ. ಒಬ್ಬ ಗಂಡನು ತುಂಬಾ ಸಿಟ್ಟಿನಿಂದ ಆತುರದಿಂದ ತನ್ನ ಹೆಂಡತಿಯನ್ನು ಬಿಟ್ಟುಬಿಡಲು ವಿಚ್ಛೇದನ ಪತ್ರ ಕೊಡುವ ಪದ್ಧತಿ ತಡೆಯುತ್ತದೆ. ಇದು ಒಬ್ಬ ಹೆಂಡತಿ ವ್ಯಭಿಚಾರಿಯೆಂದು ಅವಲೋಕಿಸುವದರಿಂದ ಕಾಪಾಡುತ್ತದೆ ಮತ್ತು ಆಕೆ ಇನೊಬ್ಬನಿಗೆ ಮದುವೆ ಆಗುವದಕ್ಕೆ ಸ್ವತಂತ್ರ್ಯಳಾಗಿರುತ್ತಾಳೆ.

ಮೊದಲನೆ ಶತಮಾನದಲ್ಲಿ ಯೆಹೂದ್ಯ ಮತದಲ್ಲಿ ವಿಚ್ಛೇದನ ಪುರುಷರಿಗೆ ಒಂದು ವಿಶೇಷ ಹಕ್ಕು ಹೊಂದಿದಂತೆ ಇತ್ತು;[24] ಮತ್ತು ಪುರುಷರು ತಮ್ಮ ಹೆಂಡತಿಗೆ ವಿಚ್ಛೇದನ "ಯಾವುದೇ ಕಾರಣಗಳಿಗಾಗಿ" (19:3), ಕೊಡುವತನಕ ಅವರು ನ್ಯಾಯವಾಗಿ ಅದನ್ನು ಸಮರ್ಥಿಸಿಕೊಳ್ಳುತ್ತಿದ್ದರು, Josephus ಹೀಗೆ ಬರೆದಿದ್ದಾರೆ,

> ಅವನು ತನ್ನ ಹೆಂಡತಿಯಿಂದ ಯಾವುದೇ ಕಾರಣದಿಂದ ಏನೇಯಾಗಿದ್ದರೂ ವಿಚ್ಛೇದನ ತೆಗೆದುಕೊಳ್ಳಲು ಆಶೆಯುಳ್ಳವನಾಗಿದ್ದು (ಅನೇಕ ಇಂಥಹ ಕಾರಣಗಳು ಪುರುಷರ ಮಧ್ಯದಲ್ಲಿ ಆಗುತ್ತಿರುತ್ತವೆ), ಅವನು ಬರವಣಿಗೆಯಲ್ಲಿ ಎಂದಿಗೂ ಇನ್ನು ಮೇಲೆ ಆಕೆಯನ್ನು ತನ್ನ ಹೆಂಡತಿಯಾಗಿ ಉಪಯೋಗಿಸುವುದಿಲ್ಲ ಎಂದು ಬರವಣಿಗೆಯಲ್ಲಿ ಕೊಡಬೇಕು; ಇದರಿಂದ ಆಕೆಯು ಇನ್ನೊಬ್ಬನನ್ನು ಮದುವೆ ಆಗಲು ಸ್ವತಂತ್ರ್ಯಳಾಗಿರುತ್ತಾಳೆ.[25]

ಹಾಗಿದ್ದರೂ, ಎಲ್ಲರೂ ಇಂಥಹ ಮನೋಭಾವನೆಗೆ ಹೊಂದಿಕೊಡಿರುವದಿಲ್ಲ. ಎರಡು ರಬ್ಬಿಯರ ಮತ ಬೋಧಕರ ಸಂಪ್ರಾದಾಯಿಕ ವರ್ಗಗಳು ಈ ವಿಷಯದ ಕುರಿತು ಬಿಸಿ - ಬಿಸಿಯಾಗಿ ಚರ್ಚೆ ಮಾಡಿದ್ದಾರೆ, "ಅಶ್ಲಿಲ" ಎನ್ನುವ ಪದವು - ಧರ್ಮೋಪದೇಶ ಕಾಂಡ 24:1ರಲ್ಲಿ ಹೇಳಿದಂತೆ ಅಕ್ಷಾರಾರ್ಥವಾಗಿ "ಬೆತ್ತಲ್ಲೆಯಾಗಿರುವದು" ಎಂಬ ಅರ್ಥದ ಮೇಲೆ ಕೇಂದ್ರಿಕರಿಸಿದರು.[26] ಯೆಹೂದ್ಯ ಧರ್ಮಗುರು Rabbi Shammai ಅವರು ಅದನ್ನು ಸಂಪ್ರದಾಯ ನಿಷ್ಟೆಯ ಸ್ಥಾನವನ್ನು ತೆಗೆದುಕೊಂಡರು, ಅವರು "ಅಶ್ಲಿಲ" ಅಂದರೆ ಅನೈತಿಕವಾಗಿದೆ ಎಂಬುದಾಗಿ ಹೇಳಿದ್ದಾರೆ. ಹಾಗಿದ್ದರೂ, ಇದು ಸಂಪೂರ್ಣವಾದ ವ್ಯಭೀಚಾರವಾಗಿದೆ, ಹೇಗೆಂದರೆ ತಪ್ಪು ಮಾಡಿದವನು ಮರಣ ಶಿಕ್ಷೆಯನ್ನು ಧರ್ಮಶಾಸ್ತ್ರದ

ಪ್ರಕಾರ ಹೊಂದಬೇಕಾಗಿತ್ತು (ಯಾಜಕಕಾಂಡ 20:10-14; ಧರ್ಮೋಪದೇಶಕಾಂಡ 22:22). ಯೆಹೂದ್ಯ Rabbi Hillel ರವರು ಹೆಚ್ಚಿನ ಸ್ವಾತಂತ್ರ್ಯ ತೆಗೆದುಕೊಂಡು ಹೀಗೆ ಹೇಳಿದ್ದಾರೆ, "ಅಶ್ಲಿಲ" ಮುಖ್ಯವಾಗಿ ಅದು ಗಂಡನಿಗೆ ಮನನೋಯಿಸುವದು ಅಥವಾ ಪಿಡಿಸುವಂಥದ್ದಾಗಿದೆ - "ಆಕೆಯು ಆತನಿಗೆ ಸರಿಯಾದ ಅಡುಗೆ ಮಾಡದೆ ಹೋಗ ಬಹುದು ಎಂದು ಸಹ ಹೇಳಲಾಗಿದೆ."[27] ನಿರೀಕ್ಷಿಸಿದಂತೆಯೆ, Hillel ರವರು ಮೃದು ಸ್ವಾಭಾವವುಳ್ಳವರಾಗಿದ್ದರಿಂದ ಜನರ ಮಧ್ಯದಲ್ಲಿ ತುಂಬಾ ಪ್ರಸಿದ್ಧಿಯಾಗಿದ್ದರು.

**ವಚನ 32.** ಗಂಡನು ತನ್ನ ಹೆಂಡತಿಯನ್ನು ಹೊರಗೆ ಕಳುಹಿಸಿಬಿಟ್ಟವನಿಗೆ - ತ್ಯಾಗಪತ್ರ ಕೊಟ್ಟರು ಸಹ - ಅವಳು ಪಾಪಮಾಡುವದಕ್ಕೆ ಅವನೆ ಕಾರಣವಾಗಿದ್ದಾನೆಂದು ಯೇಸು ಸೂಚಿಸಿದ್ದಾನೆ. **ನಾನು ನಿಮಗೆ ಹೇಳುವುದೇನೆಂದರೆ ತನ್ನ ಹೆಂಡತಿಯನ್ನು ಬಿಟ್ಟು ಬಿಡುವವನು ... ಅವಳು ವ್ಯಭಿಚಾರ ಮಾಡುವದಕ್ಕೆ ಕಾರಣನಾಗುತ್ತಾನೆ; ಮತ್ತು ಗಂಡ ಬಿಟ್ಟವಳನ್ನು ಮದುವೆಮಾಡಿಕೊಳ್ಳುವವನು ವ್ಯಭಿಚಾರ ಮಾಡಿದವನಾಗಿದ್ದಾನೆ** ಎಂದು ಯೇಸು ನೇರವಾಗಿ ಹೇಳಿದ್ದಾನೆ. ಗಂಡನಾದವನು "ಯಾವುದೇ ಕಾರಣಕ್ಕೂ" ವಿಚ್ಛೆದನ ಕೊಡಲು ನಿರ್ಭಂದವಿಲ್ಲ, ಗಂಡನು ಮದುವೆಯ ಒಡಂಬಡಿಕೆಗೆ ನಂಬಿಗಸ್ತನಾಗಿರಬೇಕೆಂದು ಯೇಸು ಹೇಳಿದನು.

ಯೇಸುವಿನ ಬೋಧನೆಯು Shammaites ರವರ ಬೋಧನೆಗೆ ತುಂಬಾ ಹತ್ತಿರವಾದ ಅಂಶಗಳನ್ನು ಹೊಂದಿವೆ, ಆತನ ದಿನದಲ್ಲಿ ಅದನ್ನು ಕೈಕೊಂಡು ನಡೆಯುವದಕ್ಕಿಂತಲು ಅದು ಕಟುನಿಟ್ಟಾಗಿತ್ತು. ಆತನ ಸಂಪೂರ್ಣ ಉದ್ದೇಶವು ದೇವರ ಮೂಲ ಉದ್ದೇಶಕ್ಕೆ ಶುದ್ಧಿ ಕರಣವು ಪುನಃ ಸ್ಥಾಪಿಸಲ್ಪಡಬೇಕು ಮತ್ತು ಮದುವೆಯನ್ನು ಸ್ಥಿರಪಡಿಸುವಂಥಾಗಬೇಕು ಎನ್ನುವದಾಗಿತ್ತು (ಆದಿಕಾಂಡ 2:18-25; ಮಲಾಕಿ 2:13-16; ಮತ್ತಾಯ 19:4-6, 9). Hagner ಗುರಿತಿಸಿರುವ ಸತ್ಯ ಹೀಗಿದೆ, "ಪರಲೋಕ ರಾಜ್ಯದ ನೀತಿಯ ಮೂಲ ಗುಣಮಟ್ಟ ಎದೇನ್ ತೋಟದಲ್ಲಿದ್ದಂತ ನಿರ್ದಿಷ್ಟಮಟ್ಟಕ್ಕೆ ಹಿಂದಿರುಗಲು ಕೋರಲಾಗಿದೆ."[28] ಮದುವೆಯ ಒಡಂಬಡಿಕೆ ಕಟ್ಟುಬದ್ಧತೆಗೆ ಮತ್ತೆ ಹಿಂದಕ್ಕೆ ಹೋಗುವವರಾಗಿ ಯೇಸುವನ್ನು W. F. Albright ಮತ್ತು C. S. Mann ಸೂಚಿಸಿದ್ದಾರೆ:

> ಯೇಸು ಒತ್ತಿ ಹೇಳುತ್ತಿರುವ ಸೂತ್ರ ಮದುವೆಯ ಅಸ್ತಿವಾರ. ನಿಯಮದ ಪ್ರಕಾರ, ವಿಚ್ಛೇದನ ಹೊಂದಿದ ಸ್ತ್ರೀ ಇನ್ನು ಆಕೆ ಆತನ ಗಂಡನಿಗೆ ಹೆಂಡತಿಯಾಗಿದ್ದಾಳೆ, ಮತ್ತು ವಿಚ್ಛೆದನ ಕೊಟ್ಟಿರುವ ಗಂಡನು ಆಕೆಯನ್ನು ವ್ಯಭಿಚಾರಿಯನ್ನಾಗಿ ಮಾಡುತ್ತಿದ್ದಾನೆ. ಆ ಭಾವನೆಯ ಮೇಲೆ ಆಕೆ ಪುನಃ ಮದುವೆ ಆಗುತ್ತಾಳೆ. ಆಕೆಗೆ ಮದುವೆ ಆಗುವವನು ಮತ್ತು ವಿಚ್ಛೇದನ ಕೊಟ್ಟಿರುವವನು ಇಬ್ಬರು ಆಕೆಯ ವ್ಯಭಿಚಾರದಲ್ಲಿ ಪಾಲುಗಾರರಾಗಿದ್ದಾರೆ, ಮತ್ತು ಅಪರಾಧ ಮಾಡಿದವರಾಗಿದ್ದಾರೆ, ಯಾಕೆಂದರೆ ಸೂತ್ರದಲ್ಲಿ - ನ್ಯಾಯವಾದಿಲ್ಲದಿದ್ದರೂ - ವಿಚ್ಛೆದನ ಹೊಂದಿದ ಮಹಿಳೆ ಇನ್ನು ಮೊದಲಿನ ಗಂಡನಿಗೆ ಮದುವೆ ಮಾಡಿಕೊಂಡಿದ್ದವಳಾಗಿದ್ದಾಳೆ.[29]

ವಿಚ್ಛೆದನ ಹೊಂದಿದ ಸ್ತ್ರೀ ಇಂಥಹ ಸಂದರ್ಭದಲ್ಲಿ ಆಕೆ ಪುನಃ ಮದುವೆ ಮಾಡಿಕೊಳ್ಳಬಹುದು ಎಂದು ಯೇಸು ಭಾವಿಸಿದನು. ಯಾಕೆಂದರೆ ಒಬ್ಬಂಟಿ ಮಹಿಳೆಯು ಮೊದಲನೆ ಶತಮಾನದ ಸಂಸ್ಕೃತಿಯಲ್ಲಿ ಆಕೆಯು ಸ್ವಸಂತ್ರ್ಯವಾಗಿ ಜೀವಿಸುವದು ಬಹಳ ಕಠಿಣವಾಗಿತ್ತು.

ಹಾಗಿದ್ದರೂ, ಯೇಸು ಸಾಮಾನ್ಯ ನಿಯಮಕ್ಕೆ ವಿನಾಯಿತಿ ನೀಡಿದ್ದಾನೆ: **ಹಾದರದ ಕಾರಣದಿಂದಲ್ಲದೆ** (ನೋಡಿರಿ 19:9). ಈ ಶಬ್ದ "unchastity" ಎಂಬುದು *porneia* ಗ್ರೀಕ್ ಶಬ್ದದಿಂದ ಬಂದಿದೆ, ಅದನ್ನು "ಹಾದರ" ಎಂದು (KJV) "ದಾಂಪತ್ಯ ಅಪನಂಬಿಕೆ" (NIV) ಎಂದು ಅನುವಾದಿಸಲಾಗಿದೆ. ಈ ಸಂಧರ್ಭದಲ್ಲಿ ಎಲ್ಲಾ ರೀತಿಯ ಅನೈತಿಕವಾದ ಲೈಂಗಿಕ

ಕ್ರಿಯೆಗಳು ಒಂದೆ ಕೊಡೆಯ ಕೆಳಗೆ ಸೇರಿ ಬರುವದಕ್ಕಾಗಿ ಈ ಪದವನ್ನು ಉಪಯೋಗಿಸಲಾಗಿದೆ. ಹೆಂಡತಿಯು ವ್ಯಭಿಚಾರ[30] ಮಾಡಿದ್ದರೆ, ಗಂಡನು ವಿಚ್ಛೇದನ ಕೊಡುತ್ತಾನೆ ಇದರಲ್ಲಿ ಅವನದು ಯಾವುದೇ ತಪ್ಪು ಇಲ್ಲ ಎನ್ನುವ ಅಂಶ ಇಲ್ಲಿದೆ. ಅವರ ಹೆಂಡತಿಯರು ಅಪನಂಬಿಗಸ್ತರು ಎಂದು ಕಂಡುಬಂದಾಗ, ಈ ವಿನಾಯಿತಿ ಪುರುಷರಿಗೆ ಕೊಡಲಾಗಿದೆ. ಆದರೆ ಇದನ್ನು ಮಾಡಲು ಅವರಿಗೆ *ಅಪ್ಪಣೆ* ಕೊಟ್ಟಿಲ್ಲ. ಬಹುಶಃ ಸ್ತ್ರೀಯ ಪಶ್ಚಾತ್ತಾಪ, ಪುರುಷನ ಕ್ಷಮಾಪಣೆಯು ಪುನಃ ಅವರು ದಾಂಪತ್ಯದಲ್ಲಿ ಒಂದಾಗಬಹುದು. ಇದಕ್ಕೆ ಭಿನ್ನವಾಗಿ ಯೆಹೂದ್ಯ ಗುರುಗಳ ನಿಯಮದ ಪ್ರಕಾರ, ಪುರುಷನು ತನ್ನ ಅವಲಕ್ಷಣ ಹೊಂದಿದ ತನ್ನ ಹೆಂಡತಿಗೆ ವಿಚ್ಛೇದನ ಕೊಡುತ್ತಾನೆ ಯಾಕೆಂದರೆ ಅವಳು ಅಪವಿತ್ರವಾದಳು ಎಂದು ಅಭಿಪ್ರಾಯ ಹೊಂದಲಾಗಿದೆ.[31]

ಈ ಭಾಗದಲ್ಲಿ ಮತ್ತು ಇದರ ಸಮನಾಂತರಗಳಲ್ಲಿ (19:1-12; ಮಾರ್ಕ 10:1-12; ಲೂಕ 16:18), ಯೇಸು ವಿಚ್ಛೇದನಕ್ಕೆ ವಿರೋಧವಾಗಿ ಬೋಧಿಸುತ್ತಿದ್ದನು. ಹಾಗಿದ್ದರೂ, 1 ಕೊರಿಂಥ 7ನೇ ಅಧ್ಯಾಯದಲ್ಲಿ ಪೌಲನಿಂದ ಪ್ರತಿಪಾದಿಸಿರುವ ಕೆಲವು ವಿಷಯಗಳನ್ನು ಯೇಸು ಸ್ಪಷ್ಟವಾಗಿ ಚರ್ಚಿಸಲಿಲ್ಲ ಅಥವಾ ವಿಷಾಧೀಕರಿಸಲಿಲ್ಲ.

## ಆಣೆ ಇಡುವದು (5:33-37)

**[33]ಮತ್ತು - ನೀನು ಸುಳ್ಳಾಣೆಯಿಡಬಾರದು; ನೀನು ಇಟ್ಟುಕೊಂಡ ಆಣೆಗಳನ್ನು ಕರ್ತನಿಗೆ ಸಲ್ಲಿಸಬೇಕೆಂದು ಹಿರಿಯರಿಗೆ ಹೇಳಿಯದೆ ಎಂದು ಕೇಳಿದ್ದೀರಷ್ಟೆ. [34]ಆದರೆ ನಾನು ನಿಮಗೆ ಹೇಳುವದೇನೆಂದರೆ - ಆಣೆಯನ್ನೇ ಇಡಬೇಡ ಆಕಾಶದ ಮೇಲೆ ಆಣೆ ಇಡಬೇಡ; ಅದು [35]ದೇವರ ಸಿಂಹಾಸನವು. ಭೂಮಿಯ ಮೇಲೆ ಆಣೆ ಇಡಬೇಡ; ಅದು ಆತನ ಪಾದಪೀಠವು. ಯೆರೂಸಲೇಮಿನ ಮೇಲೆ ಆಣೆ ಇಡಬೇಡ; ಅದು ಆ ದೊಡ್ಡ ಅರಸನ ಪಟ್ಟಣವಾಗಿದೆ. [36]ನಿನ್ನ ತಲೆಯ ಮೇಲೆ ಕೂಡ ಆಣೆ ಇಡಬೇಡ; ನೀನು ಒಂದು ಕೂದಲನ್ನಾದರೂ ಬೆಳ್ಳಗೆ ಅಥವಾ ಕಪ್ಪಗೆ ಮಾಡಲಾರಿ. [37]ಆದರೆ ನಿಮ್ಮ ಮಾತು ಹೌದಾದರೆ ಹೌದು, ಅಲ್ಲವಾದರೆ ಅಲ್ಲ, ಎಂದಿರಲಿ; ಇದಕ್ಕಿಂತ ಹೆಚ್ಚಾದದ್ದು ಸೈತಾನನಿಂದ ಬಂದದ್ದು.**

**ವಚನ 33.** ವಚನ 21ರಲ್ಲಿ ಆಣೆ ವಿಷಯಕ್ಕೆ ಸಂಬಂಧಿಸಿದ ವಿಷಯಗಳ ಸಂಪೂರ್ಣ ತತ್ವದೊಂದಿಗೆ ಯೇಸು ಪರಿಚಯಿಸಿದ್ದಾನೆ: **ಪುನಃ, ನೀವು ಹಿರಿಯರಿಗೆ ಹೇಳಿಯದೆ ಎಂದು ಕೇಳಿದ್ದಿರಷ್ಟೆ.** ಹಳೆ ಒಡಂಬಡಿಕೆಯ ಒಂದು ನಿರ್ದಿಷ್ಟ ವಾಕ್ಯ ಭಾಗದಿಂದ ಹೇಳುವದರ ಬದಲಾಗಿ, ಆತನು ಈ ಶಿರೋನಾಮ ಮೇಲೆ ಬೋಧಿಸುತ್ತಾ ವಿವರಿಸಿದ್ದಾನೆ: **ನೀನು ಸುಳ್ಳಾಣೆಯಿಡಬಾರದು; ನೀನು ಇಟ್ಟುಕೊಂಡ ಆಣೆಗಳನ್ನು ಕರ್ತನಿಗೆ ಸಲ್ಲಿಸಬೇಕು.** ಧರ್ಮಶಾಸ್ತ್ರವು ಪ್ರಮಾಣವಾಗಲಿ ಮತ್ತು ಆಣೆಯಾಗಲಿ ಖಂಡಿಸುವುದಿಲ್ಲ ಆದರೆ ಸುಳ್ಳಾಗಿ ಇಡುವವುಗಳನ್ನು ಖಂಡಿಸುತ್ತದೆ. ವಾಸ್ತವವಾಗಿ ಆಣೆ ಇಡುವದು ಕೆಲವು ನಿಬಂದನೆಗಳ ಅಡಿಯಲ್ಲಿ ಇಡಬೇಕಾಗುತ್ತದೆ (ವಿಮೋಚನಕಾಂಡ 22:10-13; ಅರಣ್ಯತಕಾಂಡ 5:16-22). ಇಷ್ಟು ಮಾತ್ರವಲ್ಲದೆ, ದೇವರ ಹೆಸರಿನಲ್ಲಿ ಮಾತ್ರ ಆಣೆ ಇಡಬೇಕು ವಿಗ್ರಹಗಳ ಮೇಲೆ ಆಣೆ ಇಡಬಾರದು ಎಂದು ಜನರಿಗೆ ಆಜ್ಞಾಪಿಸಲಾಗಿದೆ (ಧರ್ಮೋಪದೇಶಕಾಂಡ 6:13, 14; 10:20). ಹಾಗಿದ್ದರೂ, ಅವರು ಮಾಡುವ ಆಣೆ ಮತ್ತು ಪ್ರಮಾಣಗಳು ಸುಳ್ಳಾಗಿ ಮಾಡುವವರ ವಿಷಯದಲ್ಲಿ ಭಯಂಕರ ಪ್ರತಿಫಲವಿದೆ, ಇದು ದೇವರ ನಾಮವನ್ನು ವ್ಯರ್ಥವಾಗಿ ತೆಗೆದುಕೊಳ್ಳುವದಕ್ಕೆ ಸಮವಾಗಿದೆ ಎಂದು ಧರ್ಮಶಾಸ್ತ್ರವು ಹೇಳುತ್ತದೆ (ವಿಮೋಚನಕಾಂಡ 20:7, 16; ಯಾಜಕಕಾಂಡ 19:11, 12; ಅರಣ್ಯಕಾಂಡ 30:2; ಧರ್ಮೋಪದೇಶ ಕಾಂಡ 5:11; 19:15-20; 23:21-23).

**ವಚನಗಳು 34, 35.** ಯೇಸು ಮತ್ತೊಂದಾವರ್ತಿ ಬಹುಶಃ ಅತಿಶಯೋಕ್ತಿಯೊಂದಿಗೆ ಎಲ್ಲಾ ಆಣೆಗಳು ನಿಷೇಧಿಸಿದ್ದಾನೆ: **ಆದರೆ ನಾನು ನಿಮಗೆ ಹೇಳುವದೇನೆಂದರೆ ಆಣೆಯನ್ನೇ ಇಡಬೇಡ** ಯೇಸುವಿನ ಆ ದಿನದಲ್ಲಿ ಯೆಹೂದ್ಯರು ದೇವರ ಹೆಸರನ್ನು ತೆಗೆದುಕೊಳ್ಳುವದು ತಪ್ಪಿಸುತ್ತಿದ್ದರು, ಆದರೆ ಅವರು **ಪರಲೋಕ**, **ಭೂಮಿ**, **ಯೆರೂಸಲೇಮ**, ದೇವಾಲಯ, ದೇವಾಲಯದ ಬಂಗಾರ, ಬಲಿಪೀಠ, ಬಲಿಪೀಠದ ಕಾಣಿಕೆ, ಬಲಿಪೀಠದ ಸಾಮಾನುಗಳು ಮತ್ತು ಇತರೆ ಇಂಥಹ ವಸ್ತುಗಳ ಮೇಲೆ ಪ್ರಮಾಣ ಮಾಡುತ್ತಿದ್ದರು.[32] ಹಾಗಿದ್ದರೂ, ಅವರೆಲ್ಲರು ಈ ಎಲ್ಲಾ ಆಣೆಗಳಿಗೆ ಬದ್ಧರಾಗಿರಬೇಕು ಎನ್ನುವದು ಅವರು ನಂಬುವದಿಲ್ಲ. ಮತ್ತಾಯ 23:16-22ರ ಪ್ರಕಾರವಾಗಿ, ಒಬ್ಬನು ದೇವಾಲಯದ ಬಂಗಾರದ ಮೇಲೆ ಅಥವಾ ಯಜ್ಞವೇದಿಯ ಕಾಣಿಕೆ ಮೇಲೆ ಆಣೆಗಳನ್ನು ಇಟ್ಟಾಗ ಅದಕ್ಕೆ ಅವರು ಬದ್ಧರಾಗಿರುತ್ತಾರೆ ಆದರೆ ದೇವಾಲಯದ ಮೇಲೆ ಅಥವಾ ಕೇವಲ ಯಜ್ಞವೇದಿಯ ಮೇಲಿನ ಆಣೆಗಳಿಗೆ ಅವರು ಬದ್ಧರಾಗಿರುವುದಿಲ್ಲ ಎಂದು ಯೆಹೂದ್ಯರ ನಂಬಿಕೆಯಾಗಿತ್ತು. Mishnahದಲ್ಲಿ ಒಬ್ಬನು ಪರಲೋಕದ ಮೇಲೆ ಮತ್ತು ಭೂಮಿಯ ಮೇಲೆ ಪ್ರಮಾಣ ಮಾಡಿದರೆ ಅದಕ್ಕೆ ಅವರು ಬದ್ಧ ರಾಗಿರುವದಿಲ್ಲ, ಆದರೆ ಅವನು ದೇವರ ಹೆಸರು "Adonai" "Yahweh" ಅಥವಾ "the Almighty" ಅಥವಾ ಯಾವುದೇ ದೇವರಿಗಾಗಿ ಉಪಯೋಗಿಸುವ ಹೆಸರುಗಳು ("ಆತನು ಕರುಣಾಮಯನು ಮತ್ತು ಕೃಪಾಮಯನು ಇಂಥವುಗಳು ಉಪಯೋಗಿಸಿಕೊಂಡು ಆಣೆ ಇಡುವಾಗ ಅವರು ಅದಕ್ಕೆ ಬದ್ಧರಾಗಿರುತ್ತಾರೆ") ಎಂದು ಹೇಳಲಾಗಿದೆ.[33]

ಎಲ್ಲಾ ರೀತಿಯ ಆಣೆಗಳು ಬಂಧನಕೊಳ್ಳಪಟ್ಟಿವೆಯೆಂದು ಖಚಿತಪಡಿಸಿ ಯೇಸು ಭೂಟಾಟಿಕೆ ಮತ್ತು ಮೋಸಕರವಾಗಿರುವ ಆಚರಣೆಗಳನ್ನು ದೂಷಿಸಿದ್ದಾನೆ. ಯೆಹೂದ್ಯರು ಯಾವಾಗಲು ದೇವರ ಹೆಸರಿನಲ್ಲಿ ಪ್ರಮಾಣಮಾಡುತ್ತಿರಲಿಲ್ಲ, ಅವರು ಆತನಿಗೆ ಸಂಬಂಧಿಸಿದ ವಸ್ತುಗಳ ಮೇಲೆ ಆಣೆಯಿಡುತ್ತಿದ್ದರು. "ಪರಲೋಕ"ವು **ದೇವರ ಸಿಂಹಾಸನ**, ಮತ್ತು "ಭೂಮಿ" **ಆತನ ಪಾದ ಪೀಠವು** (ಯೆಶಾಯ 66:1). ಅದು ಅಲ್ಲದೆ, "ಯೆರೂಸಲೇಮ" **ಮಹಾರಾಜನ ಪಟ್ಟಣ** (ಕೀರ್ತನೆ 48:2), ಮತ್ತು "ದೇವಾಲಯ" ಆತನ ನಿವಾಸಿಸುವ ಸ್ಥಳ (23:21). ಅವರ ಆಣೆಗಳನ್ನು ಮುರಿಯುವದರಿಂದ ಅಪರೋಕ್ಷವಾಗಿ ದೇವರ ಹೆಸರನ್ನು ಅಪವಿತ್ರಗೊಳಿಸುತ್ತಿದ್ದರು.

**ವಚನ 36.** ಇಳಿಕೆ ಕ್ರಮವು (ಪರಲೋಕ, ಭೂಮಿ, ಯೆರೂಸಲೇಮ) ಒಬ್ಬ ವ್ಯಕ್ತಿಯೊಂದಿಗೆ ಮುಗಿಯುತ್ತದೆ: **ನಿನ್ನ ತಲೆಯ ಮೇಲೆ ಕೂಡ ಆಣೆ ಇಡಬೇಡ.** "ನಿಮ್ಮ ಜೀವನದ ತಲೆಯಿಂದ" ನೀನು ಆಣೆ ಇಡುತ್ತಾ ಇದ್ದಿ ಎಂದು Mishnah ಸೂಚಿಸುತ್ತದೆ, ಮತ್ತು ಯೆಹೂದ್ಯ ರಬ್ಬಿಯರು ಅದನ್ನು ಹಿಂತೆಗೆದುಕೊಳ್ಳಬೇಕೋ ಬೇಡವೋ ಎಂದು ಚರ್ಚಿಸಿದರು.[34] ಇಂಥಹಾ ಆಣೆಗಳು ಮನುಷ್ಯನ ಬಲಹೀನತೆಯಿಂದ ಮೂರ್ಖತನದವುಗಳಾಗಿವೆ ಎಂದು ಯೇಸು ಗಮನಿಸಿದ್ದಾನೆ: **ನೀನು ಒಂದು ಕೂದಲನ್ನಾದರೂ ಬೆಳ್ಳಗೆ ಅಥವಾ ಕಪ್ಪಗೆ ಮಾಡಲಾರಿ.** ಅದಕ್ಕೆ ಭಿನ್ನವಾಗಿ, ದೇವರು ಮನುಷ್ಯರ ಮೇಲೆ ಸರ್ವ ನಿಯಂತ್ರಣ ಹೊಂದಿದ್ದಾನೆ, ಒಬ್ಬನ ತಲೆಯಲ್ಲಿ ಎಷ್ಟು ಕೂದಲುಗಳು ಇವೆ ಎಂದು ದೇವರಿಗೆ ತಿಳಿದಿದೆ (10:30).

**ವಚನ 37. ಆದರೆ ನಿಮ್ಮ ಮಾತು ಹೌದಾದರೆ ಹೌದು, ಅಲ್ಲವಾದರೆ ಅಲ್ಲ ಎಂದಿರಲಿ** ಎಂದು ಯೇಸು ತನ್ನ ಶಿಷ್ಯರಿಗೆ ಬುದ್ಧಿವಾದವನ್ನು ಹೇಳಿದ್ದಾನೆ. NIVಯಲ್ಲಿ "ಹೌದು ಅಂದರೆ ಹೌದು ಮತ್ತು ಇಲ್ಲ ಅಂದರೆ ಇಲ್ಲ" ಎಂದು ಸರಳವಾಗಿ ಅನುವಾದಿಸಲಾಗಿದೆ. ಯೇಸು ತನ್ನ ಶಿಷ್ಯರಿಗೆ ಪ್ರಮಾಣಿಕವಾಗಿ ಮತ್ತು ನಂಬಿಗಸ್ತರಾಗಿ ಉತ್ತರಿಸಲು ಸೂಚಿಸಿದನು (2 ಕೊರಿಂಥ 1:17-24; ಯಾಕೋಬ 5:12). ವೈಯಕ್ತಿಕವಾಗಿ ಸತ್ಯವನ್ನು ಹೇಳುವುದಾದರೆ, ಯಾವುದೇ ಆಣೆ ಇಡುವ ಅವಶ್ಯಕತೆಯಿರುವುದಿಲ್ಲ.

ಈ ಪ್ರಮಾಣ ಮತ್ತು ಆಣೆಗಳ ವಿಷಯದಲ್ಲಿ ಯೇಸುವಿನ ಮನೋಭಾವನೆಯು ಎಸ್ಸೀನಿ

ತಂಡದವರು ಹಂಚಿಕೊಂಡಿರುವರು. ಅದಕ್ಕೆ ಸಂಬಂಧಿಸಿರುವದನ್ನು Josephus ರವರು ಹೀಗೆ ಬರೆದಿದ್ದಾರೆ,

> ಅವರು ಸ್ವಾಮಿ ಭಕ್ತಿಗೆ ಶ್ರೇಷ್ಠರು, ಅವರು ಸಮಾಧಾನದ ಸೇವಕರು; ಅವರು ಏನಾದರೂ ಹೇಳಿದರೂ ಅದು ಆಣೆಗಿಂತಲೂ ದೃಢವಾಗಿರುತ್ತಿತ್ತು; ಆದರೆ ಪ್ರಮಾಣ ಅವರಿಂದ ದೂರವಿಡಲಾಗಿತ್ತು, ಮತ್ತು ಅವರು ಸುಳ್ಳು ಪ್ರಮಾಣಕ್ಕಿಂತಲೂ ಅದು ಕೆಟ್ಟದ್ದು ಎಂದು ಗೌರವಿಸುತ್ತಿದ್ದರು; ಯಾರೊಬ್ಬರು ದೇವರನ್ನು [ದೇವರಲ್ಲಿ ಪ್ರಮಾಣ ಮಾಡಿದವರು] ನಂಬುವುದಿಲ್ಲವೋ ಅವರು ಈಗಾಗಲೇ ಖಂಡಿಸಲ್ಪಟ್ಟಿದ್ದಾರೆಂದು ಹೇಳುವರು.[35]

ಹಾಗಿದ್ದರೂ, ಯಾರು "ದೇವರಿಗೆ ಶ್ರದ್ಧೆಯಿಂದಿರಲು" ಮತ್ತು "ಮನುಷ್ಯನಿಗೆ ನ್ಯಾಯವಾದದ್ದನು"[36] ಮಾಡುವನೆಂದು "ಮಹತ್ತರವಾದ ಆಣೆಗಳು" ತೆಗೆದುಕೊಳ್ಳುವರೋ ಅಂಥಹಾವರನ್ನು ಈ ಎಸ್ಸೀನಿ ತಂಡದ ಭಾಗಕ್ಕೆ ಸೇರಿಸುತ್ತಾರೆ.

"ಇದಕ್ಕಿಂತ [ಸರಳವಾಗಿರುವ ಮಾತು 'ಹೌದು' ಅಥವಾ 'ಇಲ್ಲ'] ಹೆಚ್ಚಾದದ್ದು ಸೈತಾನನಿಂದ ಬಂದದ್ದು" ಎಂದು ಯೇಸು ಹೇಳಿದ್ದಾನೆ. "ಕೇಡು" ಎಂಬ ಗ್ರೀಕ್‌ನ ವಿಶೇಷವಾಚಕ "ಸೈತಾನನು" ಎಂದು ಸೂಚಿಸುತ್ತದೆ (5:37; 6:13; 13:19, 38; NIV). ಯೆಹೂದ್ಯರ ಆಣೆಯಲ್ಲಿ ಮೊಸತನವು "ಸುಳ್ಳಿಗೆ ತಂದೆ"ಯಾಗಿರುವ ಸೈತಾನನಿಂದ ಬಂದಿದೆ (ಯೋಹಾನ 8:44). ಆತನ ಶಿಷ್ಯರು ತಂದೆಯಂತೆ ಪ್ರಮಾಣಿಕತೆ ಹಿಂಬಾಲಿಸಬೇಕೆಂದು ಯೇಸುವಿನ ಇಚ್ಛೆಯಾಗಿತ್ತು (5:48). ಅಷ್ಟು ಮಾತ್ರವಲ್ಲದೆ, ತನನ್ನು "ಸತ್ಯ"ವೆಂದು ವರ್ಣಿಸಿಕೊಂಡಾತನಾಗಿರುವ ಯೇಸುವನ್ನು (ಯೋಹಾನ 14:6), "ಆತನ ಬಾಯಲ್ಲಿ ಯಾವ ವಂಚನೆಯು ಸಿಕ್ಕದೆ ಇರುವಾತನನ್ನು ಹಿಂಬಾಲಿಸುವವರಾಗಿದ್ದರು" (1 ಪೇತ್ರ 2:22).

ಆಣೆಗಳು ವಿಶೇಷವಾದ ನಿಯಮವೆನ್ನುವದಕ್ಕಿಂತಲೂ ಅದು ಸಾಮಾನ್ಯವಾದದ್ದು ಎಂದು ಹೇಳಿ ಯೇಸು ಅದನ್ನು ನಿಷೇಧಿಸುತ್ತಾ ಇದ್ದಾನೋ? 5:34, 37 ರಲ್ಲಿ ಯೇಸುವಿನ ವ್ಯಾಖ್ಯಾನಗಳು ತನ್ನ ಕೇಳುಗರಿಗೆ ಅವು ಪರಿಣಾಮಕಾರಿಯಾಗಿ ಒಂದು ಅತಿಶಯೋಕ್ತಿ ಯಾಗಿರಲೇಬೇಕು. ಅಂತಿಮವಾಗಿ, ಕ್ರಿಸ್ತನ ಮೇಲೆ ಆಣೆಯನ್ನು ಇಟ್ಟ ಮಹಾಯಾಜಕನಿಗೆ ಸರಿಯಾಗಿ ಉತ್ತರಿಸಿದನೆಂದು ಅದು ತೋರಿಸುತ್ತದೆ ("ನಿನಗೆ ಜೀವ ಸ್ವರೂಪನಾದ ದೇವರ ಆಣೆಯನ್ನು ಇಡುತ್ತೇನೆ"; 26:63, 64). ಪೌಲನ ಆತ್ಮ ಪ್ರೇರಿತವಾದ ಪತ್ರಿಕೆಯಲ್ಲಿ ನಂಬಿಕೆಯಿಂದ ಕೂಡಿರುವ ಆಣೆಗಳನ್ನು ನೋಡುತ್ತೇವೆ (ರೋಮಾಪುರ 1:9; 1 ಕೊರಿಂಥ 15:31; 2 ಕೊರಿಂಥ 1:23; ಗಲಾತ್ಯ 1:20; ಫಿಲಿಪ್ಪಿ 1:8; 1 ಥೆಸಲೋನಿಕ 5:27). ದೇವರು ಆಣೆಯಿಟ್ಟು ತನ್ನ ಮಾತನ್ನು ಸ್ಥಿರಪಡಿಸಿಡಿದನು ಎಂದು ಇಬ್ರಿಯ ಬರಹಗಾರನು ಹೇಳುತ್ತಾನೆ (ಇಬ್ರಿಯ 6:17, 18).

## ಪ್ರತಿಕಾರಕ್ಕೆ ಸಂಬಂಧಿಸಿರುವ ವಿಷಯ (5:38-42)

**38ಕಣ್ಣಿಗೆ ಪ್ರತಿಯಾಗಿ ಕಣ್ಣನ್ನು ಹಲ್ಲಿಗೆ ಪ್ರತಿಯಾಗಿ ಹಲ್ಲನ್ನು ತೆಗಿಸು ಅಂತ ಹೇಳಿಯದೆ ಎಂದು ಕೇಳಿದ್ದೀರಷ್ಟೆ. 39ಆದರೆ ನಾನು ನಿಮಗೆ ಹೇಳುವದೇನೆಂದರೆ - ಕೆಡುಕನನ್ನು ಎದುರಿಸಬೇಡ. ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನೂ ಒಡ್ಡು. 40ನಿನ್ನ ಸಂಗಡ ವ್ಯಾಜ್ಯವಾಡಿ ನಿನ್ನ ಒಳಂಗಿಯನ್ನು ತಕ್ಕೊಳ್ಳಬೇಕೆಂದಿ ರುವವನಿಗೆ ಮೇಲಂಗಿಯನ್ನೂ ಬಿಡು. 41ಒಬ್ಬನು - ಒಂದು ಮೈಲು ದೂರ ಬಾ ಎಂದು ನಿನ್ನನ್ನು ಬಿಟ್ಟೀ ಹಿಡಿದರೆ ಅವನ ಸಂಗಡ ಎರಡು ಮೈಲು ಹೋಗು. 42ನಿನ್ನನ್ನು ಬೇಡುವವನಿಗೆ ಕೊಡು; ನಿನ್ನಲ್ಲಿ ಕಡಾ ಈಸಿಕೊಳ್ಳಬೇಕೆಂದು ಬಂದವನಿಗೆ ಮುಖತಿರುವಿಕೊಳ್ಳಬೇಡ.**

**ವಚನ 38.** ಯೇಸು ಹೇಳಿರುವ ಒಂದು ಉಲ್ಲೇಖನ ಉಪಯೋಗಿಸಿರುವುದು - **ಕಣ್ಣಿಗೆ ಪ್ರತಿಯಾಗಿ ಕಣ್ಣನ್ನು ಮತ್ತು ಹಲ್ಲಿಗೆ ಪ್ರತಿಯಾಗಿ ಹಲ್ಲನ್ನು** - ಇದು ಹಳೆ ಒಡಂಬಡಿಕೆಯಿಂದ

ತೆಗೆದುಕೊಳ್ಳಲಾಗಿದೆ (ವಿಮೋಚನಕಾಂಡ 21:24; ಯಾಜಕಕಾಂಡ 24:20; ಧರ್ಮೋಪದೇಶ ಕಾಂಡ 19:21). ಇದನ್ನು ಕೆಲವು ಸಾರಿ ಶಬ್ದಗಳ ಪ್ರತಿಕಾರ ಅಥವಾ ಪ್ರತಿಕಾರದ ಧರ್ಮವೆಂದು ಸೂಚಿಸಲಾಗಿದೆ. ಇಂಥಹ ಶಾಸನವು ಮೊದಲಬಾರಿಗೆ Hammurabiಯಲ್ಲಿ ದಾಖಲಾಗಿದೆ,[37] ಹಳೆ ಬಾಬೇಲ್ ರಾಜ್ಯದಲ್ಲಿ ಕಿರ್ತೀಯುಳ್ಳ ಅರಸ (ಹೋಲಿಸಿ. 1800 ಕ್ರಿ.ಪೂ.). ಇದು ಪ್ರಾರಂಭದಲ್ಲಿ ಅನಾಗರೀಕತೆ ಮತ್ತು ಕ್ರೂರವಾಗಿ ಕಂಡರೂ, ಇದು ನಿಜವಾಗಿಯೂ ಕರುಣೆಯ ನಿಯಮವಾಗಿತ್ತು. ಮೊದಲನೆಯದಾಗಿ, ಇದು ಕೊಡಬೇಕಾಗಿರುವ ಶಿಕ್ಷೆಗಿಂತ ಹೆಚ್ಚಾದದ್ದನ್ನು ತಡೆಯುತ್ತದೆ. ಎರಡನೆಯದಾಗಿ, ''ನ್ಯಾಯವೆಂದು'' ಅವಲಿಗೆನಿಸುವ ಶಿಕ್ಷೆಯನ್ನು ಕಾರ್ಯನಿರ್ವಹಿಸಲು ಅಲೆದಾಡುವವರನ್ನು ತಡೆಯುತ್ತದೆ (ಯಾಜಕಕಾಂಡ 19:18; ಜ್ಞಾನೋಕ್ತಿ 20:22; 24:29). ಮೋಶೆಯ ಧರ್ಮಶಾಸ್ತ್ರದಲ್ಲಿ, ನ್ಯಾಯಸ್ಥಾನದಿಂದ ಪ್ರತಿಕಾರ ಮಾಡುವದನ್ನು ನಿರ್ಬಂದಿಸಲಾಗಿತ್ತು. ಸರಿಯಾದ ಅಧಿಕೃತವಾದ ರಕ್ಷಣೆಯೊಂದಿಗೆ ನಿರ್ಧಾರಗಳು ಸಾರ್ವಜನಿಕವಾಗಿ ಮಾಡುತ್ತಿದ್ದರು (ಧರ್ಮೋಪದೇಶಕಾಂಡ 19:15-21). ಧರ್ಮಶಾಸ್ತ್ರದ ಪ್ರಕಾರ ಒಬ್ಬ ವ್ಯಕ್ತಿ ತಪ್ಪಿಗಸ್ತನೆಂದು ನಿರ್ಣಯಿಸಲು ಕೊನೆಪಕ್ಷ ಇಬ್ಬರು ಸಾಕ್ಷಿಗಳು ಬೇಕು (ಧರ್ಮೋಪದೇಶಕಾಂಡ 17:6). ಮೂರನೆಯದು, ಇಂಥಹ ನಿಯಮಗಳು ಅಪರಾಧಿಗೆ ಶಿಕ್ಷೆಕೊಡಲು ಸಮ್ಮತ್ತಿಸುತ್ತಿದ್ದರು.

ಮನುಷ್ಯನಿಗೆ ಒಳ್ಳೆಯದನ್ನು ಮಾಡಲು ದೇವರು ಉದ್ದೇಶಿಸಿರುವದನ್ನು ತೆಗೆದುಕೊಂಡು ಶಾಸ್ತ್ರಿಗಳು ಮತ್ತು ಫರಿಸಾಯರು ಕೆಟ್ಟದ್ದನ್ನು ಮಾಡಿದರು. ಧರ್ಮಶಾಸ್ತ್ರವನ್ನು ರಕ್ಷಿಸಿ ಕಾಪಾಡಲು ಉಪಯೋಗಿಸುವ ಬದಲು, ಅವರು ತಮ್ಮ ವೈರಿಗಳ ವಿರುದ್ಧವಾಗಿ ಪ್ರತಿಹಿಂಸೆ ಮಾಡಲು ಇದನ್ನು ದುರುಪಯೋಗ ಮಾಡಿಕೊಂಡರು. ಈ ದುರ್ಮಾರ್ಗವು ಪ್ರತಿಕಾರ ತೀರಿಸಲು ಮನುಷ್ಯನ ಸ್ವಾಭಾವಿಕ ದೋರಣೆಗೆ ತೃಪ್ತಿಕೊಡುತ್ತದೆ. ದೇವರು ತನ್ನ ಜನರ ಮೇಲಿಟ್ಟ ಯಾವುದೇ ನಿಯಂತ್ರಣವಿಲ್ಲದಿದ್ದರೆ ಅವರು ನಿರಾಪರಾಧಿಗಳನ್ನು ಶಿಕ್ಷಿಸುತ್ತಿದ್ದರು. ಯೇಸು ಈ ನಿಯಮದ ಅಪಪ್ರಯೋಗದ ಕುರಿತು ಹೇಳುವದು ಮಾತ್ರವಲ್ಲದೆ, ಆತನು ದೇವರ ಆತ್ಮೀಕ ಅಂಶದ ಮೂಲ ಉದ್ದೇಶವನ್ನು ತೋಲಿಸಿದನು. ಮಾನವನ ಹುಟ್ಟು ಸ್ವಭಾವವಾದ ಪ್ರತಿಕಾರವನ್ನು ಬಿಡಬೇಕೆಂದು ಮತ್ತು "ಒಳ್ಳೆತನದಿಂದ ಕೆಟ್ಟತನವನ್ನು ಸೋಲಿಸು" ಎಂದು ತನ್ನ ಶಿಷ್ಯರಿಗೆ ಆತನು ಕಲಿಸಿದನು (ನೋಡಿರಿ ರೋಮಾಪುರ 12:21). ಮುಯ್ಯಿಗೆ ಮುಯ್ಯಿ ತೀರಿಸುವದು ದೇವರ ಕೆಲಸವಾಗಿದೆ (ರೋಮಾಪುರ 12:19; ಇಬ್ರಿಯ 10:30).

ಕ್ರಿಸ್ತನ ಸಮಯದಲ್ಲಿ ಈ ನಿಯಮ ಎಲ್ಲೊ ಕೆಲವು ಕಡೆಗಳಲ್ಲಿ ಅಕ್ಷರಾರ್ಥವಾಗಿ ಅಳವಡಿಕೆ ಮಾಡಿಕೊಳ್ಳಲಾಗಿದೆ. ಕೇಡಿಗೆ ಪ್ರತಿಕೇಡಾಗಿ ಜನರು ತಮ್ಮ ವೈರಿಗಳ ಹಲ್ಲುಗಳನ್ನು ಮುರಿಯಲಿಲ್ಲ ಅಥವಾ ಕಣ್ಣುಗಳನ್ನು ಹೊರಗೆ ತೆಗೆಯಲಿಲ್ಲ. ಒಮ್ಮತಕ್ಕಾಗಿ ವಿಚಾರ ವಿನಿಮಯ ಪದ್ಧತಿ ಕಾರ್ಯಗತಗೊಳಿಸಲಾಗಿತ್ತು, ಇದರಿಂದ ಒಂದು ಹಲ್ಲಿನ ಅಥವಾ ಒಂದು ಕಣ್ಣಿನ ಬೆಲೆಯನ್ನು ನ್ಯಾಯಾಧಿಪತಿಯು ನಿರ್ದಲಿಸುತ್ತಿದ್ದನು.[38] ಒಂದು ಕಣ್ಣಿನ ಬೆಲೆ ಬಹುಶಃ ಒಂದು ವರ್ಷದ ಕೂಲಿಯ ಹಣದಷ್ಟು ಅಥವಾ ಅದಕ್ಕಿಂತಲೂ ಜಾಸ್ತಿ, ಮತ್ತು ಹಲ್ಲು ಸಹ ಸಾಕಷ್ಟು ಹಿಟ್ಟಿನ ಬೆಲೆಗೆ ಸಮವಾಗಿರಬಹುದು. ವೈಯಕ್ತಿಕ ಗಾಯಗಳಿಗೆ ಇಂದಿನ ನ್ಯಾಯಾಲಯಗಳಲ್ಲಿ ನಷ್ಟವಾಗಿರುವದನ್ನು ತುಂಬಿಸಿಕೊಡುವದು ಮತ್ತು ಹಾಳಾಗಿರುವದನ್ನು ಅವಲಿಗೆ ಕೊಡಿಸುವಂಥದ್ದಕ್ಕೆ ಇದ ಸಮಾನಾಂತರವಾಗಿದೆ. ಅದಾಗ್ಯೂ ಅನೇಕ ಸನ್ನಿವೇಶದಲ್ಲಿ, ಯೇಸು ಮೊದಲೆ ನಿಷೇಧಿಸಿರುವದನ್ನು ಹಾಗೆಯೇ ಜನರು ಕಾನೂನು ವ್ಯವಸ್ಥೆಯನ್ನು ನಿಂದಿಸಿದರು. ಪ್ರತಿಕಾರದ ವ್ಯವಸ್ಥೆಯು ವೈರಸಾದಕವೆಂಬಂತೆ ಉಪಯೋಗಿಸಲಾಗಿದೆ. ನಷ್ಟವಾಗಿರುವದಕ್ಕೆ ಪರಿಹಾರ ಸ್ವಿಕಲಿಸುವ ಬದಲಾಗಿ, ನ್ಯಾಯವಾಗಿ ತೆಗೆದುಕೊಳ್ಳುವದಕ್ಕಿಂತಲೂ ಹೆಚ್ಚಿನ ಪ್ರತಿಕಾರವನ್ನು ತೆಗೆದುಕೊಳ್ಳಲು ಹುಡುಕುವವರು ಅಥವಾ ಪ್ರತಿಕಾರ ಮಾಡಲು ಜನರು ಬೇಡಿಕೆ ಇಡುವರು. ಜನರು ಇದನ್ನು ಬಂಡವಾಳವಾಗಿ ಉಪಯೋಗಿಸಿಕೊಂಡು ಹಣದ ರೂಪದಲ್ಲಿ ಲಾಭವನ್ನು ಹೊಂದುವದಕ್ಕಾಗಿ ಇದೆಲ್ಲವನ್ನು ಅವರು ಮಾಡುತ್ತಾರೆ.

**ವಚನ 39. ಕೆಡುಕನನ್ನು ಎದುರಿಸಬೇಡ** ಎಂಬ ಯೇಸುವಿನ ಆಜ್ಞೆ "ನ್ಯಾಯವನ್ನು ಹುಡುಕಬೇಡ" ಎನ್ನುವದಕ್ಕೆ ಸಮವಲ್ಲ. ಆತನ ಮೂಲ ಟೀಕೆಗೆ ವಿರುದ್ಧವಾದದ್ದೆಂದು ಈ ಹೇಳಿಕೆಯನ್ನು ಪರಿಗಣಿಸಲಾಗಿದೆ. "ಎದುರಿಸು" ಎನ್ನುವ ಸಮಾನಾರ್ಥಕೊಡುವ ಗ್ರೀಕ್ ಭಾಷೆಯ ಶಬ್ದವು ಶಿಷ್ಯರನ್ನು ಸೂಚಿಸಿ ದುಷ್ಟ ವ್ಯಕ್ತಿಯಿಂದ ಅವರಿಗೆ ಕೆಡಾಗುವದನ್ನು ತಡೆಯಬೇಕು ಎನ್ನುವದನ್ನು ಸೂಚಿಸುತ್ತದೆ. ನಷ್ಟವಾಗುವಾಗ ಮತ್ತು ಅದರ ಪ್ರತಿಕಾರವನ್ನು ಮತ್ಸರವನ್ನು ಅಸಮಾನದಾನವನ್ನು ಹೇಗೆ ತಡೆಯಬೇಕೆಂದು ಯೇಸುವಿನ ಸೂಚನೆಗಳು ವೈಯಕ್ತಿಕವಾಗಿ ಹೇಳುತ್ತವೆ. ಅನೇಕ ಸಂದರ್ಭಗಳಲ್ಲಿ ಆತನು ತನ್ನಷ್ಟಕ್ಕೆ ತಾನೇ ಮಾಡಿದಂತೆ ನಾವು ಅನ್ಯಾಯದ ವಿರುದ್ಧ ಮಾತಾಡಬಾರದೆಂದು ಅದರ ಅರ್ಥವಲ್ಲ (21:12; ಯೋಹಾನ 2:15). "ಸೈತಾನನನ್ನು ಎದುರಿಸಿರಿ" ಎಂದು ಯಾಕೋಬನು ಹೇಳಿದ್ದಾನೆ (ಯಾಕೋಬ 4:7); ಆದುದರಿಂದ ಆತನು ಪ್ರಾರಂಭಿಸುವ ಎಲ್ಲಾ ಕೆಟ್ಟ ತನವನ್ನು ನಾವು ಎದುರಿಸಬಹುದು (6:13; ರೋಮಾಪುರ 12:9; 1 ಥೆಸಲೋನಿಕ 5:22; 2 ತಿಮೋಥೆ 4:18). ಕ್ರಿಸ್ತನ ಹಿಂಬಾಲಕರು ಸೈತಾನನನ್ನು ಎದುರಿಸುವದರ ಕುರಿತಾಗಿ ಪಾಲಿಸಬೇಕಾದ ಅಂಶಗಳನ್ನು John MacArthur, Jr., ಹೀಗೆ ಹೇಳಿದ್ದಾರೆ:

> ಕೆಟ್ಟದ್ದನ್ನು ಹತೋಟಿಯಲ್ಲಿಡುವದು ನ್ಯಾಯವೋ ಅಥವಾ ಕನಿಕರವೋ ಆಗಿರುವದಿಲ್ಲ. ಯಥಾರ್ಥವಾಗಿರುವವರನ್ನು ಅದು ಕಾಪಾಡುವದಿಲ್ಲ ಮತ್ತು ದುಷ್ಟಕಾರ್ಯದಲ್ಲಿ ದುಷ್ಟರಿಗೆ ಪ್ರೋತ್ಸಾಹ ಕೊಡುವಂತದ್ದಾಗಿರುತ್ತದೆ. ಹಾಗಿದ್ದರೂ, ಕೆಟ್ಟದ್ದನ್ನು ನಿಯಂತ್ರಣ ಮಾಡುವದು ನ್ಯಾಯಸಮ್ಮತವಾದದ್ದು ಮಾತ್ರವಲ್ಲದೇ, ಅದರಿಂದ ಪ್ರಯೋಜನಕರವಾಗಿರಬೇಕು ...
>
> ದೇವರ ನ್ಯಾಯದ ಪ್ರಮಾಣವನ್ನು ಕಡಿಮೆಮಾಡುವಾಗ ದೇವರ ನೀತಿಯ ಪ್ರಮಾಣವು ಕಡಿಮೆಯಾಗುತ್ತದೆ - ಅದಕ್ಕಾಗಿ ಯೇಸು ನೆರವೇರಿಸಲು ಮತ್ತು ಸ್ಪಷ್ಟವಾಗಿ ತಿಳಿಸಲು ಬಂದನು ಆದರೆ ಅದನ್ನು ನಾಶಮಾಡುವದಕ್ಕೆ ಅಥವಾ ತೆಗೆದು ಹಾಕಲಿಕ್ಕೆ ಬರಲಿಲ್ಲ.[39]

ಯೇಸು ವೈಯಕ್ತಿಕ ಪ್ರತಿಕಾರಕ್ಕೆ ವಿರುದ್ಧವಾಗಿ ಮೂಲ ತತ್ವಗಳನ್ನು ಏರ್ಪಾಟುಮಾಡಿದ ನಂತರ, ತಪ್ಪಾಗಿ ನಡೆಸಿಕೊಂಡಿರುವದನ್ನು ತಿಳಿಸಿ ಹೇಳಲು ಆತನು ಐದು ಘಟನೆಗಳನ್ನು ವಿವರಿಸಿದ್ದಾನೆ. ಮೊದಲನೆಯ ಕಾರ್ಯ ದೈಹಿಕ ಆಕ್ರಮಣಕ್ಕೆ ಸಂಬಂಧಿದೆ: **ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನು ಒಡ್ಡು.** ಒಬ್ಬನು ಕೈಮುಷ್ಟಿಯಿಂದ ಇನ್ನೊಬ್ಬನ ಮುಖಕ್ಕೆ ಗುದ್ದಿರುವದನ್ನು ಸೂಚಿಸುತ್ತಿಲ್ಲ; ಹೊರತಾಗಿ, ಒಬ್ಬನು ತನ್ನ ಕೈಯಿಂದ ಮುಖದ ಮೇಲೆ ನಮ್ರತೆಯಿಂದ ಎಳೆಯುವದರ ಕುರಿತಾಗಿ ಆತನು ಮಾತಾಡುತ್ತಿದ್ದಾನೆ. ಯೆಹೂದ್ಯರು ಅದನ್ನು ಗಂಭೀರ ಅವಮಾನವೆಂಬತೆ ಪರಿಗಣನೆಗೆ ತೆಗೆದುಕೊಂಡಿದ್ದರು (ನೋಡಿರಿ ಯೋಬನು 16:10; ಪ್ರಲಾಪಗಳ 3:30; ಮತ್ತಾಯ 26:67, 68; ಮಾರ್ಕ 14:65; ಯೋಹಾನ 18:22; 2 ಕೊರಿಂಥ 11:20). ನಿಜವಾಗಿ, ಮುಖದ ಮೇಲೆ ಗುದ್ದುವದು ಕೀಳಾಗಿ ವರ್ತಿಸಿದಂತೆ ಮತ್ತು ಅಗೌರವಿಸಿದಂತೆ ಆಗುವದು. ಯೆಹೂದ್ಯ ನಿಯಮವು ಇದಕ್ಕೆ ಪ್ರತಿಕಾರವಾಗಿ ಹೆಚ್ಚಿನ ಮಟ್ಟದಲ್ಲಿ ಪರಿಹಾರ ಕೊಡಬೇಕಾಗಿತ್ತು ಒಬ್ಬನು ತನ್ನ ಕೈಯಿಂದ ಇನ್ನೊಬ್ಬನ ಮುಖಕ್ಕೆ ಗುದ್ದಿದರೆ ಒಬ್ಬನು ಮುಷ್ಟಿಯಿಂದ ಗುದ್ದಿದರೆ ಅದಕ್ಕೆ ಎರಡು ಪಟ್ಟು ಪರಿಹಾರಕೊಡಬೇಕಾಗಿತ್ತು.[40]

ಮುಖದ ಮೇಲೆ ಆಗಿರುವ ಕೈ ಏಟಿಗೆ ಆಗಿರುವ ಅವಮಾನದ ಪ್ರತಿಕಾರಕ್ಕೆ ಇನ್ನೊಂದು ಕೆನ್ನೆಯನ್ನು ತಿರುಗಿಸು ಎಂದು ಯೇಸು ಹೇಳಿದನು. ಆದರೂ ಸ್ವಾಭಾವಿಕವಾದ ಪ್ರತಿಕ್ರಿಯೆ ಹಿಂದಕ್ಕೆ ಏಟನ್ನು ಕೊಡುವದಾಗಿತ್ತು, ಯೇಸು ಅದಕ್ಕೆ ತದ್ವಿರುದ್ಧವಾಗಿ ಹೇಳಿದ್ದಾನೆ. ಇಂಥಹ ಪ್ರತಿಕ್ರಿಯೆ ಸೌಮ್ಯದಿಂದ ಮತ್ತು ದೀನತೆಯ ಆತ್ಮದಿಂದ ಕೂಡಿತ್ತು ಇದನ್ನು ಯೇಸು ತನ್ನ ಹಿಂಬಾಲಕರಿಗಾಗಿ ಆಗಲೇ ಅದನ್ನು ಪ್ರಕಟಿಸಿದ್ದಾನೆ. ಇನ್ನೊಂದು ಕೆನ್ನೆ ತೋರಿಸುವುದು

ಅದು ಯಥಾರ್ಥತೆ, ಉದಾರತೆಯನ್ನು ಪ್ರದರ್ಶಿಸುತ್ತದೆ. ಅವಮಾನವಾಗುವಾಗ ಅಥವಾ ನೋವಾಗುವಾಗ ಹಿಂದಕ್ಕೆ ಹೊಡೆದು ಪ್ರದರ್ಶಿಸುವದು ಗುಣನಡತೆಯ ಗೌರವ ಮತ್ತು ಬಲವಲ್ಲ. ನಮಗೆ ತಪ್ಪಾಗಿ ನಡೆಸಿಕೊಂಡಿರುವದಕ್ಕೆ ಪ್ರತಿಯಾಗಿ ನಮ್ಮ ಪ್ರತಿಕ್ರಿಯೆ ಕರುಣೆ ದಯೆಯಿಂದ ಕೂಡಿದ್ದರೆ, "ಅವನ ತಲೆಯ ಮೇಲೆ ಕೆಂಡಗಳನ್ನು ಕೂಡಿಸಿಟ್ಟಂತಾಗುವದು" ಎಂದು ಪೌಲನು ಹೇಳಿದ್ದಾನೆ (ರೋಮಾಪುರ 12:20). ಆ ರೀತಿಯಲ್ಲಿ ಕೆಟ್ಟದ್ದಾಗಿ ನಡೆಸಿಕೊಂಡಿದ್ದಕ್ಕೆ ಈ ರೀತಿ ಪ್ರತಿಕ್ರಿಯಿಸಿದರೆ ತಪ್ಪುಮಾಡಿದವನು ನಾಚಿಕೆಯೊಂದಿಗೆ ಸುಟ್ಟುಹೋಗುವನು - ಮತ್ತು ಬಹುಶಃ ತನ್ನ ದುಷ್ಟ ಕಾರ್ಯಕ್ಕಾಗಿ ಆ ವ್ಯಕ್ತಿ ಪಶ್ಚಾತ್ತಾಪಪಡಬಹುದು.

**ವಚನ 40.** ಯೇಸು ಎರಡನೆಯ ಸಾಮ್ಯ ಹೀಗೆ ಚಿತ್ರಿಸಿದ್ದಾನೆ, ಒಬ್ಬ ವ್ಯಕ್ತಿಯು ನ್ಯಾಯಲಯದಲ್ಲಿ ಪಿರ್ಯಾದಿಯೊಂದಿಗೆ ತನ್ನ ತಪ್ಪಿಗಸ್ಥನಿಂದ ಬಟ್ಟೆಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದಾನೆ: **ನಿನ್ನ ಒಳಂಗಿಯನ್ನು ತಕ್ಕೊಳ್ಳಬೇಕೆಂದಿರುವವನಿಗೆ ಮೇಲಂಗಿಯನ್ನು ಬಿಡು.** ನಿನ್ನ ಪ್ರತಿವಾದಿಯು ಸಾಕಷ್ಟು ಹಣ ಅವನಿಗೆ ಇರದೆ ಇರಬಹುದು ಸಾಲವನ್ನು ಅವರು ಬಟ್ಟೆ ರೂಪದಲ್ಲಿ ಹಿಂತಿರುಗಿಸುತ್ತಿದ್ದರು ಅಥವಾ ಜಾಮೀನಿಗಾಗಿ ವಸ್ತ್ರಗಳನ್ನು ತೆಗೆದುಕೊಳ್ಳುತ್ತಿದ್ದರು. ಇಲ್ಲಿಯೂ ಯೇಸು ಅತಿಶಯೋಕ್ತಿಯನ್ನು ಮುಂದುವರಿಸಿದ್ದಾನೆ, ಹೇಗೆಂದರೆ, "ಒಳಂಗಿಯನ್ನು" ಮತ್ತು "ಮೇಲಂಗಿಯನ್ನು" ಕೊಟ್ಟುಬಿಡುವಾಗ ಅವನು ಹೆಚ್ಚು ಕಡಿಮೆ ಬೆತ್ತಲೆಯಾಗುವನು (ಅವನಿಗೆ ಒಂದೇ ಒಂದು ಜೊತೆ ಬಟ್ಟೆಯಿತ್ತು ಎಂದು ಊಹಿಸಿಕೊಳ್ಳೋಣ).

"ಅಂಗಿ" ಅಥವಾ "ಕವಚ" (ಮೇಲಿನ ವಸ್ತ್ರ) (NIV) "ಇದು ಮೂಲ ವಸ್ತ್ರವಾಗಿತ್ತು, ಉದ್ದ ವಾದ ತೊಳು ನಿಲುವಂಗಿ ಅದು ರಾತ್ರಿಯ ಅಂಗಿಗೆ ಸಮವಾಗಿ ಅದನ್ನು ಹಾಕಿಕೊಂಡಿರುತ್ತಿದ್ದರು. ಇದನ್ನು ಕೆಲವು ಸಾರಿ ಚಿಕ್ಕದಾಗಿರುವುದು ಪುರುಷರು ಹಾಕಿಕೊಳ್ಳುತ್ತಿದ್ದರು ಮತ್ತು ಪಾದದವರೆಗೆ ಜೋಡಿಸುವ ನಿಲುವಂಗಿ ಉದ್ದವಾಗಿರುವದು ಹೆಂಗಸರು ಹಾಕಿಕೊಳ್ಳುತ್ತಿದ್ದರು."[41] ಅತಿಮುಖ್ಯವಾದ ಮತ್ತು ಬೆಲೆಬಾಳುವ ವಸ್ತ್ರ "ಮೇಲಂಗಿ" ಅಥವಾ "ಕುಂಚಿಗೆ" (NIV) ಆಗಿತ್ತು. ಇದು ಒಳಂಗಿಯ ಮೇಲೆ ಹಾಕುವ ಉದ್ದವಾದ ನಿಲುವಂಗಿಯಾಗಿತ್ತು. ಯಾವಾಗ ಶಿಷ್ಯನು ತನ್ನ ಒಳಂಗಿಯನ್ನು ಕೊಡಲು ಕೇಳುವನೋ ಅವನು ಮೇಲಂಗಿಯನ್ನು ಸ್ವತಃ ತಾನೇ ಕೊಡಬೇಕೆಂದು ಯೇಸು ಅವರಿಗೆ ಹೇಳಿದನು. ಈ ಅಂಗಿಯ ಕುರಿತು ಮೇಲಂಗಿಗಾಗಿ ಕೇಳುತ್ತಿಲ್ಲ ಅವನು ದರೋಡೆ ಮಾಡುತ್ತಿದ್ದಾನೆಂದು ಲೂಕ ಸುವಾರ್ತೆಯಲ್ಲಿ ವ್ಯತಿರಿಕ್ತವಾಗಿ ಹೇಳಿದ್ದಾನೆ (ಲೂಕ 6:29).

ಇದು ಮಾತ್ರವಲ್ಲದೆ, ಇದನ್ನು ಗಾಳಿಯನ್ನು ತಡೆಯಲು ಇದನ್ನು ಹೊದ್ದುಕೊಳ್ಳುತ್ತಿದ್ದರು, ಮೇಲಂಗಿಯನ್ನು ಕಂಬಳಿಯಂತೆ ಅವರು ಚಳಿಗಾಲದಲ್ಲಿ ಮತ್ತು ಬೇಸಿಗೆಯಲ್ಲಿ ತಲೆದಿಂಬಿನಂತೆ ಉಪಯೋಗಿಸುತ್ತಿದ್ದರು. ಸಾಲವಿರುವಾಗ ಒಬ್ಬನು ಮೇಲಂಗಿಯನ್ನು ತನ್ನ ಸಾಲದ ಭದ್ರತೆಗಾಗಿ ಅದನ್ನು ಆತನಿಗೆ ಒಪ್ಪಿಸುತ್ತಿದ್ದನು, ಅದು ರಾತ್ರಿಯ ಸಮಯದಲ್ಲಿಯೆ ಹಿಂತಿರುಗಿಸಲಾಗುತ್ತಿತ್ತು (ವಿಮೋಚನಕಾಂಡ 22:26, 27; ಧರ್ಮೋಪದೇಶಕಾಂಡ 24:12, 13; ಯೋಬ 22:5, 6). ಒಬ್ಬನು ತನ್ನ ಮೇಲಂಗಿಯನ್ನು ಇನ್ನೊಬ್ಬನಿಗೆ ಶಾಸ್ವತವಾಗಿ ಕೊಟ್ಟುಬಿಡಬೇಕೆಂದು ನ್ಯಾಯಲಯ ಕೋರಲಿಲ್ಲ ಆದರೆ, ಇದನ್ನು ಸ್ವಯಂ ಪ್ರೇರಿತವಾಗಿ ಕೊಡಬಹುದಾಗಿತ್ತು. ದಾವೆಹೂಡಿ ಅದನ್ನು ತೆಗೆದುಕೊಳ್ಳುವದಕ್ಕಿಂತ ಕೊಡುವದೆ ಉತ್ತಮವಾಗಿದೆ ಕಹಿಯಾದ ಅನುಭವ ಮತ್ತು ತೀವ್ರ ಅಸಮಾಧಾನ ಇಬ್ಬರಿಗೂ ಅದು ಕೆಟ್ಟ ಅನುಭವವಾಗುತ್ತದೆಂದು ಯೇಸು ಹೇಳುತ್ತಿದ್ದಾನೆ. ತರುವಾಯ, ಒಬ್ಬ ಕ್ರೈಸ್ತನು ಇಂಥಹ ವಿಷಯವನ್ನು ನ್ಯಾಯಲಯಕ್ಕೆ ಅನ್ಯಜನಗಳ ಬಳಿಗೆ ತೆಗೆದುಕೊಂಡು ಹೋಗುವದಕ್ಕಿಂತಲೂ ಮೋಸ ಮಾಡದೆ ಇರುವದು ಒಳ್ಳೆಯದು ಎಂದು ಪೌಲನು ಬರೆದಿದ್ದಾನೆ (1 ಕೊರಿಂಥ 6:1-8).

**ವಚನ 41.** ಯೇಸು ಹೇಳಿರುವ ಮೂರನೆಯ ಸಾಮ್ಯವು ರೋಮಾ ಅಧಿಕಾರಿಗಳಿಗೆ

ಸಂಬಂಧಿಸಿರುವದು ಅಧಿಕಾರಿಗಳ ಬಾರವು ಯೆಹೂದ್ಯರು ಹೊತ್ತು ತರಬೇಕಾಗಿತ್ತು: **ಒಬ್ಬನು - ಒಂದು ಮೈಲು ದೂರ ಬಾ ಎಂದು ನಿನ್ನನ್ನು ಬಿಟ್ಟೀ ಹಿಡಿದರೆ ಅವನ ಸಂಗಡ ಎರಡು ಮೈಲು ಹೋಗು.** "ಬಿಟ್ಟಿ ಹಿಡಿದರೆ" ಎಂಬ ಕ್ರಿಯಾ ಪದವು ಪರ್ಷಿಯನ್ ಭಾಷೆಯಿಂದ ತೆಗೆದುಕೊಳ್ಳಲಾಗಿದೆ ಇದರ ಅರ್ಥ "ಬಲವಂಥ ಮಾಡು" ಅಥವಾ "ಸೇವೆಗೆ ಒತ್ತಾಯ ಪಡಿಸು." ಸಹಜವಾಗಿ, ಪರ್ಷಿಯಾ ರಾಜವೈಭವದ ಅಂಚೆ ಸೇವೆ ಈ ಶಬ್ದದ ಹಿನ್ನೆಲೆ ಹೊಂದಿದೆ. ರಾಜನಾದ Cyrus ನಿಜವಾಗಿಯೂ ತನ್ನ ಸಂದೇಶಗಳನ್ನು ತನ್ನ ಸಾಮ್ರಾಜ್ಯಕ್ಕೆಲ್ಲ ತಲುಪಿಸಲು ಇಂಥಹ ಸೇವಾ ಪದ್ಧತಿಯನ್ನು ಉಪಯೋಗಿಸಿದನು, ಆತನು ಮಹಾ ಹೆದ್ದಾರಿಗಳಲ್ಲಿ ಅಂಚೆ ಕಛೇರಿಗಳನ್ನು ಸ್ಥಾಪಿಸಿದನು. ಪ್ರತಿಯೊಂದು ಅಂಚೆ ಕಛೇರಿಯು ಇನ್ನೊಂಂದು ಅಂಚೆ ಕಛೇರಿಗೆ ಒಂದು ದಿನದ ಪ್ರಯಾಣದಷ್ಟು ದೂರವಿದ್ದವು. ಕುದುರೆ ಸವಾರರು ಸಂದೇಶಗಳನ್ನು ಒಂದು ಅಂಚೆ ಕಛೇರಿಯಿಂದ ಇನ್ನೊಂದು ಅಂಚೆ ಕಛೇರಿಗೆ ತೆಗೆದುಕೊಂಡು ಹೋಗುತ್ತಿದ್ದರು. ಮೊದಲನೆಯ ಕಛೇರಿ ಎರಡನೆಯ ಕಛೇರಿಗೆ ಎರಡನೆಯ ಕಛೇರಿಯು ಮೂರನೆಯ ಕಛೇರಿಗೆ ತಲುಪಿಸುತ್ತಿದ್ದರು ಮತ್ತು ಹೀಗೆಯೇ ಮುಂದುವರಿಯುತ್ತಿತ್ತು. ಈ ಸಂದೇಶಗಳನ್ನು ತೆಗೆದುಕೊಂಡು ಹೋಗುವವರನ್ನು *"angaros"* ಎಂದು ಮತ್ತು ಅಂಚೆ ಸವಾರನನ್ನು *"angarēion"* ಎಂದು ಕರೆಯಲಾಗುತಿತ್ತು.[42] *Angareuō* ಎಂದರೆ ಅರ್ಥ "ಸಂದೇಶ ಮುಟ್ಟಿಸುವವನು." ಅದೇ ರೀತಿಯಾಗಿ "ಸೇವೆ ಮಾಡಲು ಒತ್ತಾಯಮಾಡು" ಎಂಬ ಅರ್ಥವಾಗಿದೆ. ರಾಜನ ಅನೇಕ ಒತ್ತಡದ ಕಾರ್ಯಗಳಿಗೆ ಅವರು ಕುದುರೆಗಳನ್ನು ಉಪಯೋಗಿಸುವದು ಮತ್ತು ಅವರ ಸೇವೆಯಲ್ಲಿ ಅವಶ್ಯವಾಗುವ ವಸ್ತುಗಳನ್ನು ಉಪಯೋಗಿಸಲು ಅವರಿಗೆ ಅಧಿಕಾರವಿತ್ತು.

ತರುವಾಯ, ರೋಮನ್ನರು ಅವರ ಬಾರವಾದ ಕೆಲಸಗಳನ್ನು ವಸ್ತುಗಳನ್ನು ಹೊರುವದು ಇತರರಿಗೆ ಒತ್ತಾಯ ಮಾಡುವದು ಜಾರಿಗೆ ತಂದರು. ಗ್ರೀಕ್ ತತ್ವಜ್ಞಾನಿಯಾದ Epictetus ನಾಗರಿಕರೆಗೆ ಹೀಗೆ ಸಲಹೆ ಮಾಡಿದ್ದಾನೆ,

> ನೀವು ನಿಮ್ಮ ದೇಹವನ್ನು ಒಂದು ಬಡ ಕತ್ತೆ ಬಾರವನ್ನು ಹೊತ್ತುಕೊಂಡಿರುವಂತೆ ನಡಿಸಿಕೊಳ್ಳಿರಿ, ಅದು ಸಾಧ್ಯವಾಗುವವರೆಗೆ, ಅದು ಅವಕಾಶ ನೀಡುವವರೆಗೆ ನಡಿಸಿಕೊಳ್ಳಿರಿ; ಮತ್ತು ಸೈನ್ಯಕ್ಕೆ ಸೇರುವಂತೆ ಮಾಡಿದ್ದರೆ ಸೈನಿಕರು ಅದನ್ನು ಹಿಡಿದು ಹಾಕುತ್ತಾನೆ, ಅದು ಹೋಗುವದಕ್ಕೆ ಬಿಡು, ತಡೆಯಬೇಡ ಇಲ್ಲವೆ ಗುಣಗುಟ್ಟಬೇಡ. ನೀನು ಮಾಡಿದರೆ, ನಿನಗೆ ಏಟುಗಳು ಬೀಳುತ್ತವೆ ಅದು ಮಾತ್ರವಲ್ಲ ನಿನ್ನ ಚಿಕ್ಕ ಕತ್ತೆಯನ್ನು ಸಹ ಕಳೆದುಕೊಳ್ಳುತ್ತಿ.[43]

ಈ ವ್ಯವಸ್ಥೆಯು ಕುರೇನೆ ಪಟ್ಟಣದ ಸೀಮಿಯೋನ್‌ನ್ನು ಕ್ರಿಸ್ತನ ಶಿಲುಬೆ ಹೊರುವದಕ್ಕೆ ಸೈನಿಕರು ಬಲವಂತ ಮಾಡಲು ಅವಕಾಶ ನೀಡಿತು (27:32). ನಾಗರೀಕರು ಒಬ್ಬ ಸೈನಿಕನ ಸಾಮಾನುಗಳನ್ನು ರೋಮನ್ ಲೆಕ್ಕದಲ್ಲಿ ಒಂದು ಮೈಲು ತೆಗೆದುಕೊಂಡು ಹೋಗಲು ಸೈನಿಕನಿಗೆ ಬೇಕಾಗುತ್ತದೆ. Wilkins ರವರ ಪ್ರಕಾರ, "ಗ್ರೀಕ್ ಪದವಾಗಿರುವ ಇದರ ಅರ್ಥ ಒಂದು 'ಸಾವಿರ ಹೆಜ್ಜೆಗಳು,' ಇದರ ದೂರ ಸುಮಾರು 4,854 ಅಡಿಗಳಾಗಿರುತ್ತವೆ (ಇದನ್ನು ಸದ್ಯದ U.S. ನಲ್ಲಿ ದೂರ ಅಳೆಯುವ ನವಯುಗದ ಮೈಲುಗಳಿಗೆ ಸ್ವಲ್ಪ ಕಡಿಮೆಯಾಗಿದೆ).[44]

ಒಬ್ಬ ರೋಮಾ ಅಧಿಕಾರಿಯು ಬಾರವನ್ನು ಹೊರಲು ಒತ್ತಾಯ ಮಾಡುವಾಗ ಅವರು ಆತನ ಶಿಷ್ಯರ ಅದನ್ನು ಅವರು ಎದುರಿಸಬೇಕೆಂದು ಬೋಧಿಸುವ ಬದಲಾಗಿ, ಯೇಸು ಅವರಿಗೆ ಎರಡನೆಯ ಮೈಲು ಸಹ ಹೋಗಲು ಮನಸ್ಸು ಮಾಡಿರಿ ಎಂದು ಅವರನ್ನು ಪ್ರೋತ್ಸಾಹ ಮಾಡಿದನು. ಆ ರೀತಿಯಾಗಿ ಮಾಡುವಾಗ ಒಬ್ಬ ಕ್ರೈಸ್ತನು ದೈವಿಕ ಪ್ರಭಾವವನ್ನು ಅದು ಸೈನಿಕರ ಮೇಲೆ ಬೀಳಲು ಸಹಾಯವಾಗಬಹುದು. ಆತನ ಹಿಂಬಾಲಕರು -

ಪ್ರೀತಿಯಿಂದ ಮತ್ತು ಮರ್ಯಾದೆಯಿಂದ ಅದಕ್ಕಿಂತಲೂ ಹೆಚ್ಚಿನ ಕಾರ್ಯ ಮಾಡಲು ಹೋಗಬೇಕು. ತರುವಾಯ, "ನಿಮಗೆ ಅಪ್ಪಣೆಯಾಗಿರುವದನೆಲ್ಲಾ ಮಾಡಿದ ಮೇಲೆ - ನಾವು ಆಳುಗಳು, ಪ್ರಯೋಜನವಿಲ್ಲದ, ಮಾಡಬೇಕಾದದ್ದನ್ನೇ ಮಾಡಿದ್ದೇವೆ ಅನ್ನಿರಿ" ಎಂದು ಆತನು ಹೇಳಿದನು (ಲೂಕ 17:10).

**ವಚನ 42.** ಒಬ್ಬನು ಹಣವನ್ನು ಹಿಂದಕ್ಕೆ ಕೊಡದೆ ಇರುವ ಉದ್ದೇಶದಿಂದ ಹಣವನ್ನು ಕೇಳುವ ದೃಶ್ಯವು ನಾಲ್ಕನೆಯ ಉದಾಹರಣೆಯಾಗಿದೆ: **ನಿನ್ನನ್ನು ಬೇಡುವವನಿಗೆ ಕೊಡು**. ಕಳೆದ ಎರಡು ಉದಾಹರಣೆಗಳಲ್ಲಿ ತಪ್ಪಾಗಿ ನಡೆಸಿಕೊಂಡಿರುವದಕ್ಕಾಗಲಿ ಅಥವಾ ಒತ್ತಾಯಮಾಡಿದ್ದಕ್ಕಾಗಲಿ ಯಾವ ಪ್ರತಿಕ್ರಿಯೆ ಇಲ್ಲ, ಆದರೆ ಇಲ್ಲಿ ಒಬ್ಬ ಬಡವನು ನೇರವಾಗಿ ಕೇಳುತ್ತಿರುವ ವಿಷಯವು ಇದೆ.[45] ಅವರ ಮಧ್ಯದಲ್ಲಿದ್ದ ಬಡವರಿಗೆ, ಗತಿಯಿಲ್ಲದವರಿಗೆ ಕೈ ನೀಡಿ ಉದಾರ ಮನಸ್ಸಿನಿಂದ ಕೊಡಬೇಕೆಂದು ಧರ್ಮಶಾಸ್ತ್ರವು ಇಸ್ರಾಯೇಲರಿಗೆ ಕೋರಿದೆ (ಧರ್ಮೋಪದೇಶಕಾಂಡ 15:7-11). Leon Morris ಅವರು ಲೂಕ 6:30ರ ಭಾಗದಲ್ಲಿ ಇದಕ್ಕೆ ಸಮಾನಾಂತರ ವಿಷಯದ ಮೇಲೆ ಹೀಗೆ ವ್ಯಾಖ್ಯಾನಿಸಿದ್ದಾನೆ:

> ಮತ್ತೊಂದಾವರ್ತಿ ಆತ್ಮವು ಹೇಳುವದು ಮುಖ್ಯವಾಗಿದೆ. ಇದನ್ನು ಕ್ರೈಸ್ತರು ಅಕ್ಷಾರಾರ್ಥವಾಗಿ ತೆಗೆದುಕೊಂಡರೆ ಉತ್ತಮವಾದ ಪುಣ್ಯ ಮಾಡಿದ ಬಡವರು ಇರುತ್ತಾರೆ, ಅವರಿಗೆ ಸ್ವಂತದ್ದೇನು ಇಲ್ಲ, ಮತ್ತು ಇನ್ನೊಂದು ಅಭಿವೃದ್ಧಿ ಹೊಂದಿದ ಸೋಮಾರಿಗಳು ಮತ್ತು ಕಳ್ಳರು ಎಂಬ ವರ್ಗದವರಾಗುವರು. ಯೇಸು ಹುಡುಕುತ್ತಿರುವದು ಇದಲ್ಲ, ಆದರೆ ಆತನ ಹಿಂಬಾಲಕರಲ್ಲಿ ಕೊಡುವದಕ್ಕೆ ಸಿದ್ಧತೆ, ಕೊಡುವದಕ್ಕೆ ಮತ್ತು ಕೊಡುವದಕ್ಕೆ ಸಿದ್ಧತೆ ಆತನು ಹುಡುಕುತ್ತಿದ್ದಾನೆ.[46]

ಇತರರ ಅವಶ್ಯಕತೆ ನಮ್ಮ ಅನೂಕೂಲತೆಗಳಿಗಿಂತ ಮುಂದೆ ಬರುತ್ತವೆಂದು ಯೇಸು ಸೂಚಿಸುತ್ತಿದ್ದಾನೆ.[47]

ಐದನೆಯ ಉದಾಹರಣೆಯು ಬಹಳ ಹತ್ತಿರವಾಗಿ ಹಿಂದೆ ಹೇಳಿರುವದಕ್ಕೆ ಸಂಪರ್ಕಕಲ್ಪಿಸುತ್ತದೆ ಆದರೆ ಈ ಸನ್ನಿವೇಶ ಒಬ್ಬನು ಇನ್ನೊಬ್ಬನಿಗೆ ಸಾಲವನ್ನು ಕೇಳುವದರ ಕುರಿತಾಗಿ ಇದೆ: **ನಿನ್ನನ್ನು ಬೇಡುವವನಿಗೆ ಕೊಡು; ನಿನ್ನಲ್ಲಿ ಕಡಾ ಈಸಿಕೊಳ್ಳಬೇಕೆಂದು ಬಂದವನಿಗೆ ಮುಖತಿರುವಿಕೊಳ್ಳಬೇಡ.** ಒಬ್ಬ ಯೆಹೂದ್ಯನು ಇನ್ನೊಬ್ಬನಿಗೆ ಯಾವುದೇ ಬಡ್ಡಿ ತೆಗೆದುಕೊಳ್ಳದೆ ಸಾಲವನ್ನು ಕೊಡಬೇಕೆಂದು ಧರ್ಮಶಾಸ್ತ್ರವು ಒಂದು ಕರಾರು ಮಾಡಿದೆ (ವಿಮೋಚನಕಾಂಡ 22:25; ಯಾಜಕಕಾಂಡ 25:35-37; ಧರ್ಮೋಪದೇಶಕಾಂಡ 23:19, 20). ಇಂಥಹ ಒಂದು ಸನ್ನಿವೇಶದಲ್ಲಿ, ಹಿಂತಿರುಗಿಸುವ ಸಾಲವನ್ನು ಹಿಂತಿರುಗಿಸದೆ ಇದ್ದರೆ ಅದನ್ನು ಏಳು ವರ್ಷಗಳ ನಂತರ ತಾನಾಗಿಯೇ ಕ್ಷಮಿಸಿಬಿಡಬೇಕು. ಈ ಕಾರ್ಯವು ಸಾಲ ತೆಗೆದುಕೊಂಡವನಿಗೆ ಒಳ್ಳೆಯ ಸಂದರ್ಭವಾದರೆ ಸಾಲಕೊಟ್ಟವನಿಗೆ ಉತ್ತಮ ಸಂದರ್ಭವಾಗಿರುವುದಿಲ್ಲ.

ಯೇಸು ಸಾಲಕೊಟ್ಟಿರುವ ಹಣ ವ್ಯವಹಾರದ ಉದ್ದೇಶಕ್ಕಾಗಿ ಯೇಸು ಇಲ್ಲಿ ಚರ್ಚಿಸುತ್ತಿಲ್ಲ. ಅಂಥಹ ಸಾಲಗಳು ಅಂದಿನ ದಿನಗಳಲ್ಲಿ ಇರಲಿಲ್ಲ. ಅದರ ಬದಲಾಗಿ, ವೈಯಕ್ತಿಕವಾಗಿ ನ್ಯಾಯಸಮ್ಮತವಾದ ಹಣಕಾಸಿನ ಕುರಿತಾಗಿ ಆತನು ಮಾತಾಡುತ್ತಿದ್ದಾನೆ. ಅಂಥಹ ಸಂದರ್ಭದಲ್ಲಿ, ಜೊತೆಯಾಗಿರುವ ಯೆಹೂದ್ಯನು ಯಾವುದೇ ಲಾಭದಾಯಕವನ್ನು ನೋಡದೆ ಸಹಾಯ ಮಾಡಬೇಕು. ಯೇಸು ಇಂಥಹದ್ದೆ ಉದಾರತೆಗೆ ಲೂಕ 6:34ರಲ್ಲಿ ಕರೆಯುತ್ತಿದ್ದಾನೆ: "ಅವರು ನಮಗೂ ಸಾಲಕೊಟ್ಟಾರೆಂದು ನೀವು ಯಾರಿಗಾದರೂ ಸಾಲಕೊಟ್ಟರೆ, ನಿಮಗೆ ಏನು ಹೊಗಳಿಕೆ ಬಂದೀತು? ಪಾಪಿಷ್ಠರು ಸಹ ತಾವು ಕೊಟ್ಟಷ್ಟು ತಮಗೆ ತಿರಿಗಿ ಸಿಕ್ಕೀತೆಂದು ಪಾಪಿಷ್ಠರಿಗೆ ಸಾಲ ಕೊಡುತ್ತಾರಲ್ಲಾ." ಯಾವುದೇ ಪ್ರತಿಫಲ ನೋಡದೆ ತೋರಿಸುವ ಉದಾಹರತೆಯು ಕ್ರಿಸ್ತನ ಆತ್ಮವನ್ನು ಪ್ರದರ್ಶಿಸುತ್ತದೆ ಮತ್ತು ದೇವರ ಬೆಳಕನ್ನು ಲೋಕವು ನೋಡುವಂತೆ ಮಾಡುತ್ತದೆ.

## ವೈರಿಗಳ ವಿಷಯಕ್ಕೆ ಸಂಬಂಧಪಟ್ಟದು (5:43-48)

**[43]ನಿನ್ನ ನೆರೆಯವನನ್ನು ಪ್ರೀತಿಸಿ ನಿನ್ನ ವೈರಿಯನ್ನು ಹಗೆಮಾಡಬೇಕೆಂದು ಹೇಳಿದೆ ಎಂಬುದಾಗಿ ಕೇಳಿದ್ದೀರಷ್ಟೆ. [44]ಆದರೆ ನಾನು ನಿಮಗೆ ಹೇಳುವದೇನೆಂದರೆ - ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆ ಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ. [45]ಹೀಗೆ ಮಾಡಿದರೆ, ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ; ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆಸುರಿಸುತ್ತಾನೆ. [46]ನಿಮಗೆ ಪ್ರೀತಿ ತೋರಿಸುವವರನ್ನೇ ನೀವು ಪ್ರೀತಿಸಿದರೆ ಫಲವೇನು? ಭ್ರಷ್ಟರೂ ಹಾಗೆ ಮಾಡುವದಿಲ್ಲವೇ. [47]ನಿಮ್ಮ ಸಹೋದರರಿಗೆ ಮಾತ್ರ ನೀವು ಮರ್ಯಾದೆ ಕೊಟ್ಟರೆ ಏನು ಹೆಚ್ಚು ಮಾಡಿದ ಹಾಗಾಯಿತು? ಅನ್ಯ ಜನಗಳು ಸಹ ಹಾಗೆ ಮಾಡುವದಿಲ್ಲವೇ. [48]ಆದದರಿಂದ ಪರಲೋಕ ದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷ ವಿಲ್ಲದವರಾಗಿರ್ರಿ.**

**ವಚನ 43.** ಅವರಿಗೂ ಮತ್ತು ಅನ್ಯಜನರಿಗೂ ಮಧ್ಯ ಇರುವ ಸಂಬಂಧಕ್ಕೆ ಸಂಬಂಧಿಸಿದ ಯೆಹೂದ್ಯರು ನಂಬುತ್ತಿದ್ದ ವಿಷಯಗಳ ಕುರಿತು ಯೇಸು ಪುನರ್ವಿಮರ್ಶಿಸಿದನು. ಒಂದು ಕಡೆ, **ನಿನ್ನ ನೆರೆಯವನನ್ನು ಪ್ರೀತಿಸಬೇಕು** ಎಂದು ಜನರಿಗೆ ಬೋಧಿಸಿದನು. ಈ ಸಂಕ್ಷಿಪ್ತ ಮಾಡಿರುವ ಹೇಳಿಕೆಯು ಯಾಜಕಕಾಂಡ 19:18ರಿಂದ ತೆಗೆದುಕೊಳ್ಳಲಾಗಿದೆ: "ನಿಮ್ಮ ಸ್ವಜನರಲ್ಲಿ ಯಾರಿಗಾದರೂ ಕೇಡಿಗೆ ಕೇಡನ್ನು ಮಾಡದೆ ಮನಸ್ಸಿನಲ್ಲಿ ಮತ್ಸರ ಇಟ್ಟುಕೊಳ್ಳದೆ ನಿಮ್ಮ ನೆರೆಯವರನ್ನು ನಿಮ್ಮಂತೆಯೇ ಪ್ರೀತಿಸಬೇಕು. ನಾನು ಯೆಹೋವನು." ಯೇಸು ಇದನ್ನು - "ನಿನ್ನ ದೇವರಾಗಿರುವ ಕರ್ತನನ್ನು ಪೂರ್ಣಹೃದಯದಿಂದಲೂ, ನಿನ್ನ ಪೂರ್ಣಪ್ರಾಣದಿಂದಲೂ, ನಿನ್ನ ಪೂರ್ಣಶಕ್ತಿಯಿಂದಲೂ, ನಿನ್ನ ಪೂರ್ಣಬುದ್ಧಿಯಿಂದಲೂ ಪ್ರೀತಿಸಬೇಕು ..." ಆಜ್ಞೆಗೆ ತರುವಾಯವೇ (ಲೂಕ 10:27; ನೋಡಿರಿ ಮತ್ತಾಯ 22:34-39; ಧರ್ಮೋಪದೇಶ ಕಾಂಡ 6:5) - ಎರಡನೆಯ ಮಹಾ ಆಜ್ಞೆ ಎಂದು ಗುರುತಿಸಿದ್ದಾನೆ. ದುರ್ದೈವದಿಂದ, ಯೆಹೂದ್ಯರು "ನೆರೆಯವರು" ಎಂದರೆ ಅವರನ್ನು ಬಹಳ ಹತ್ತಿರವಾಗಿರುವವರು, ಹತ್ತಿರದಿಂದ ಪ್ರೀತಿಸುವವರು - ಅವರಿಗೆ ಹತ್ತಿರವಾಗಿರುವ ಸ್ನೇಹಿತರು, ಹತ್ತಿರವಾಗಿರುವ ಕುಟುಂಬದವರು, ಮತ್ತು ಅವರಿಗೆ ಪರಿಚಯವಿರುವವರನ್ನು ಪ್ರೀತಿಸುವದು ಎಂದು ತೀರ್ಮಾನಿಸಿಕೊಂಡಿದ್ದರು (ಲೂಕ 10:29-37).

ಇನ್ನೊಂದು ಕಡೆಯಲ್ಲಿ, "[ನೀವುಗಳು] **ನಿನ್ನ ವೈರಿಯನ್ನು ಹಗೆಮಾಡಬೇಕೆಂದು**" ಜನರು ತಪ್ಪಾಗಿ ಬೋಧಿಸಲ್ಪಡುತ್ತಿದ್ದರು. ಸಂಭವನೀಯವಾಗಿ ಹಿಂದಿನ ಆಜ್ಞೆ ಪ್ರೀತಿಸು ಎಂದು ಇರುವಂತೆ, ಇಸ್ರಾಯೇಲರು ತಮ್ಮ ವೈರಿಗಳನ್ನು ದ್ವೇಷಿಸಬೇಕೆಂದು ಸೂಚಿಸಿ ಕೊಟ್ಟಿರುವ ಹೇಳಿಕೆ ಹಳೆ ಒಡಂಬಡಿಕೆಯಲ್ಲಿ ಇಲ್ಲ.[48]

ಯೆಹೂದ್ಯರು ತಮ್ಮ ವೈರಿಗಳನ್ನು ದ್ವೇಷಿಸುತ್ತಿದ್ದರು ಎನ್ನುವ ಆಲೋಚನೆ ಸ್ಪಷ್ಟವಾಗಿ Qumran ಪಂಥದಿಂದ ತೋರಿಸಲಾಗಿದೆ. ಮೃತ ಸಮುದ್ರದ ಸುರಳಿಯಲ್ಲಿ *ಸಮೂಹದ ನಿಯಮ* ಸದಸ್ಯರುಗಳಿಗೆ ಪ್ರತಿಯೊಬ್ಬರನ್ನು ದೇವರು ಅವರನ್ನು ರೂಪಿಸಿರುವ ಪ್ರಕಾರ, "ಬೆಳಕಿನ ಎಲ್ಲಾ ಮಕ್ಕಳನ್ನು ಪ್ರೀತಿಸಬೇಕೆಂದು, ಕತ್ತಲೆಗೆ ಸಂಬಂಧಿಸಿದ ಪ್ರತಿಯೊಬ್ಬ ಮಕ್ಕಳನ್ನು ಅವರ ದೋಷದ ಪ್ರಕಾರ ದೇವರು ಮಾಡುವ ಪ್ರತಿಕಾರದಂತೆ ಅದೆಲ್ಲ ಮಾಡಬೇ ಕೆಂಬ ನಿಮಯ ಅವರಿಗಿತ್ತು."[49] ಸಾಮಾನ್ಯವಾಗಿ ಯೆಹೂದ್ಯರು "ಮನುಷ್ಯರನ್ನು ದ್ವೇಷಿ ಸುವವರು" ಎಂಬ ಹೆಸರು ಪಡೆದಿದ್ದರು ಎಂದು Josephus ಗುರುತಿಸಿದ್ದಾನೆ. ಆದರೆ ಆತನು ಈ ಆರೋಪಕ್ಕೆ (ಯೆಹೂದ್ಯನು ತಾನಾಗಿಯೇ) ಸಮ್ಮತಿ ಸೂಚಿಸಿರುವದಿಲ್ಲ.[50]

**ವಚನ 44. ನಿನ್ನ ನೆರೆಯವನನ್ನು ಪ್ರೀತಿಸು** ಎಂಬ ಆಜ್ಞೆಗೆ ಯೇಸು ಇನ್ನಷ್ಟು ಸೇರಿಸಿ

“ನಿನ್ನ ವೈರಿಯನ್ನು ಪ್ರೀತಿಸು” ಎಂದು ಹೇಳಿದ್ದಾನೆ. “ಪ್ರೀತಿಸು” ಎಂದು ಅರ್ಥಕೊಡುವ ಗ್ರೀಕ್ ಕ್ರಿಯಾಪದವು ನಾಮಪದಕ್ಕೆ ಸಂಬಂಧಿಸಿದೆ ಅದನ್ನು ಇದು ಶ್ರೇಷ್ಟವಾದ ಪ್ರೀತಿಯನ್ನು ಸೂಚಿಸುತ್ತದೆ. ಈ ಪದವು ಭಾವನಾಪೂರ್ವಕ ಕಲ್ಪನೆ ಅನಿಸಿಕೆ, ಸೂಚಿಸುವುದಕ್ಕಿಂತಲೂ ಇನ್ನೊಬ್ಬನ ಶ್ರೇಷ್ಠ ಒಳ್ಳೆಯ ತನ ಇದು ಸೂಚಿಸುತ್ತದೆ. ಇನ್ನೊಬ್ಬರ ಒಳತಿಗಾಗಿ ಉತ್ತಮವಾಗಿರುವದನ್ನು ವೈರಿಯಾಗಿರಲಿ ಅಥವಾ ಸ್ನೇಹಿತನಾಗಿರಲಿ ಅವರಿಗೆ ಮಾಡಬೇಕೆಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು. ಇದಕ್ಕೆ ಸರಿಸಮವಾಗಿರುವದನ್ನು ಲೂಕ ಸುವಾರ್ತೆಯಲ್ಲಿ “ನಿಮ್ಮ ವೈರಿಯನ್ನು *ಪ್ರೀತಿಸಿರಿ,* ನಿಮ್ಮನ್ನು ಹಗೆಮಾಡುವವರನ್ನು *ಉಪಕಾರ* ಮಾಡಿರಿ” ಎಂದು ಯೇಸು ಹೇಳಿದನು (ಲೂಕ 6:27; ಒತ್ತಿ ಹೇಳಿದ್ದು ನನ್ನದು).

ಯೇಸು **ನಿನ್ನನ್ನು ಹಿಂಸೆ ಮಾಡುವವರಿಗಾಗಿ ಪ್ರಾರ್ಥಿಸು** ಎಂದು ಸಹ ಹೇಳಿದ್ದಾನೆ (ನೋಡಿರಿ 5:10-12). ಇದು ವೈರಿಯೊಂದಿಗೆ ಉತ್ತಮ ಅನಿಸಿಕೆಗಳು ಅನುಭವಿಸುವದು ಕಷ್ಟಕರವಾಗಿದೆ, ಅವರು ನಿಮಗೆ ಏನೇನು ಮಾಡಬೇಕೆಂದು ಆಪೇಕ್ಷಿಸುತ್ತಾರೋ ಅದನ್ನೆ ನೀವು ಅವರಿಗೆ ಮಾಡಬೇಕು (7:12). Douglas R. A. Hare ಗಮನಿಸಿರುವ ವಿಷಯ ಹೀಗಿದೆ,

> ನಾವು ಆತನೆಡೆಗೆ ಅವಿಧೇಯತೆ ತೋರಿಸಿದರೂ ಆತನು ನಮ್ಮನ್ನು ದ್ವೇಷಿಸಿ ದೂಷಿಸುವವರನ್ನು ಸಹ ಪ್ರೀತಿಸುವದಕ್ಕೆ ಸಮರ್ಥನಾಗಿದ್ದಾನೆಂದು ನಮ್ಮನ್ನು ನಾವು ಗುರುತಿಸಿಕೊಳ್ಳದೆ ನಮ್ಮ ಶತ್ರುಗಳಿಗಳಿಗಾಗಿ ಎಡಬಿಡದೆ ನಾವು ಪ್ರಾರ್ಥಿಸುವದಿಲ್ಲ. ನಮ್ಮ ಶತ್ರುಗಳನ್ನು ನಾವು ದೇವರ ಪ್ರೀತಿ ಒಂದು ದೃಷ್ಟಿಕೋನದಿಂದ ನೋಡುತ್ತಾ ಸಕರಾತ್ಮಕವಾಗಿರುವ ಕಾರ್ಯವನ್ನು ಅವರು ಆಶ್ಚರ್ಯಗೊಳ್ಳುವಂತೆ ಮಾಡುವದು ಮೊದಲ ಮೆಟ್ಟಿಲು ಆಗಿದೆ.[51]

ತನ್ನನ್ನು ಹಿಂಸೆ ಪಡಿಸಿದವರಿಗಾಗಿ ಸ್ವತಃ ಯೇಸು ಪ್ರಾರ್ಥಿಸಿದನು, ಶಿಲುಬೆ ಮೇಲೆ “ತಂದೆಯೇ ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬುದು ಅರಿಯರು” ಎಂದು ಅವರಿಗಾಗಿ ಕೂಗಿದನು (ಲೂಕ 23:34).

**ವಚನ 45.** ಒಬ್ಬನು ತನ್ನ ವೈರಿಯನ್ನು ಪ್ರೀತಿಸುವಾಗ ದೇವರ ಗುಣಲಕ್ಷಣವು ಪಾಪಿಯಕಡೆಗೆ ಪ್ರತಿಬಿಂಬಿಸುವದು ಎಂದು ಯೇಸು ಸೂಚಿಸಿದ್ದಾನೆ: ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ **ಸೂರ್ಯನು** (ಪ್ರಕಾಶಿಸುವಂತೆ) ಮಾಡುವನು ಮತ್ತು ನೀತಿವಂತರ ಮತ್ತು ಅನೀತಿವಂತರ ಮೇಲೆಯೂ **ಮಳೆ** ಸುರಿಸುತ್ತಾನೆ (ನೋಡಿರಿ ಕೀರ್ತನೆ 19:1-6; 145:9; ಅಪೊಸ್ತಲರ ಕೃತ್ಯಗಳು 14:16, 17). ನಮ್ಮ ವೈರಿಗಳೊಂದಿಗೆ ನಮ್ಮ ಸ್ನೇಹಿತರಂತೆ ಪ್ರತಿಕ್ರಿಯಿಸುವಾಗ ನಾವು ಈಗ ಇರುವದಕ್ಕಿಂತಲೂ ತಂದೆಯಂತೆ ಎಂದಿಗೂ ಇರಲಾರೆವು. **ನಿಮ್ಮ ತಂದೆಗೆ ಮಕ್ಕಳಾಗುವಿರಿ** ಎಂಬ ವಾಕ್ಯಭಾಗವು ತಂದೆಯನ್ನು ಅನುಕರಿಸುವ ಮಕ್ಕಳ ಪಾತ್ರವನ್ನು ಸೂಚಿಸುತ್ತದೆ (ನೋಡಿರಿ ಎಫೆಸ 5:1).

**ವಚನ 46. ನಿಮಗೆ ಪ್ರೀತಿ ತೋರಿಸುವವರನ್ನೇ ನೀವು ಪ್ರೀತಿಸಿದರೆ ಫಲವೇನು?** ಎಂದು ಯೇಸು ಕೇಳಿದನು. ಒಬ್ಬನು ತನ್ನನ್ನು ಪ್ರೀತಿಸುವವನನ್ನು ಪ್ರೀತಿ ಮಾಡುವಾಗ ಯಾವುದೇ ಅಸಾಮಾನ್ಯವಾಗಿರುವದನ್ನು ಅವನಲ್ಲಿ ಕಂಡುಕೊಳ್ಳಲು ಸಾಧ್ಯವಿಲ್ಲ. ಯಾರು ಇಂಥಹ ಅತಿ ಕಡಿಮೆಯಾಗಿ ಪ್ರೀತಿಯನ್ನು ಮಾಡಲು ಪ್ರೋತ್ಸಾಹಗೊಳ್ಳುವರೋ ಅವರು ಯಾವುದೇ ಫಲವನ್ನು ಹೊಂದುವದಿಲ್ಲ, ಯಾಕೆಂದರೇ **ಸುಂಕವಸೂಲಿಗಾರರು** ಅದೇ ರೀತಿಯಾಗಿ ಮಾಡಿದರು.

ಯೆಹೂದ್ಯರಿಂದ ರೋಮಾದ ಸುಂಕವನ್ನು ತೆಗೆದುಕೊಳ್ಳುತ್ತಿದ್ದರಿಂದ ಮತ್ತು ಕೆಲವು ಸಾರಿ ಹೆಚ್ಚಾಗಿ ವಸೂಲಿ ಮಾಡುತ್ತಿದ್ದರಿಂದ ಸುಂಕವಸೂಲಿಗಾರರು ಕಡೆಗಣಿಸಲ್ಪಟ್ಟರು. ಈ ವ್ಯವಸ್ಥೆ ಹಾಗೆಯೇ ಪುನರಾವರ್ತನೆಯಾಯಿತು: ನಿರ್ಧಿಷ್ಟವಾದ ಕ್ಷೇತ್ರದಲ್ಲಿ ಸುಂಕವನ್ನು

ವಸೂಲಿ ಮಾಡವದಕ್ಕಾಗಿ ರೋಮನ್ನರು ಹರಾಜಿಗೆ ಆಹ್ವಾನ ಮಾಡುತ್ತಾರೆ. ಹಾರಜನ್ನು ಗೆದ್ದವನು ಕೆಲಸಗಾರರನ್ನು ತೆಗೆದುಕೊಂಡು ನೇಮಕವಾದ ಸುಂಕವನ್ನು ವಸೂಲಿಮಾಡಲು ಕೆಲಸಕ್ಕೆ ಇಟ್ಟುಕೊಳ್ಳುತ್ತಿದ್ದರು. ಕೆಲಸಗಾರರಿಗೆ ಸಂಬಂಳವನ್ನು ಕೊಡಲು ನೇಮಿಸಿದ ಹಣಕ್ಕಿಂತ ಹೆಚ್ಚಾಗಿ ಸಂಗ್ರಹಿಸುವದು ನ್ಯಾಯವಾದದ್ದಾಗಿತ್ತು. ಆದಾಗ್ಯೂ, ಅಲ್ಲಿರುವ ಕೆಲಸಗಾರರು ಸಮರ್ಥನಿಯವಾದ್ದದಕ್ಕಿಂತ ಹೆಚ್ಚಾಗಿ ವಸೂಲುಮಾಡುವದು ವಿಶಿಷ್ಟವಾಗಿತ್ತು. "ಸುಂಕವಸೂಲಿ ಮಾಡುವವರು ಹೆಚ್ಚಾಗಿ ವಸೂಲಿ ಮಾಡುವಾಗ ಅವರು ಹೆಚ್ಚಾಗಿ ಜನರಿಂದ ದ್ವೇಷಿಸಲ್ಪಡುತ್ತಿದ್ದರು ಅವರು ಹೆಚ್ಚಾಗಿ ದ್ವೇಷಿಸಲ್ಪಡುವಾಗ ಅವರು ಹೆಚ್ಚಾಗಿ ಜನರಿಂದ ಸುಂಕ ವಸೂಲಿ ಮಾಡುತ್ತಿದ್ದರು."[52] ಸುಂಕವಸೂಲಿಗಾರರನ್ನು ಮತ್ತಾಯನು ಅನ್ಯರ (5:46, 47; 18:17), ಪಾಪಿಗಳ (9:10, 11; 11:19), ಮತ್ತು ಸೂಳೆಯರ (21:31, 32) ಗುಂಪಿಗೆ ಸೇರಿಸಿದನು. ಕಳ್ಳರೂ ಮತ್ತು ಕೊಲೆಗಡುಕರೊಂದಿಗೆ ಜೊತೆಗಾರರೆಂದು Mishnah ಹೇಳುತ್ತದೆ.[53]

**ವಚನ 47.** ಹಿಂದಿನ ಪ್ರಶ್ನೆಗೆ ಸರಿಸಮಾನವಾಗಿ, ಯೇಸು ಹೀಗೆ ಕೇಳಿದನು, **ನಿಮ್ಮ ಸಹೋದರರಿಗೆ ಮಾತ್ರ ನೀವು ಮರ್ಯಾದೆ ಕೊಟ್ಟರೆ ಏನು ಹೆಚ್ಚು ಮಾಡಿದ ಹಾಗಾಯಿತು?** Robert H. Gundry ರವರು ಹೀಗೆ ಗುರುತಿಸಿದ್ದಾರೆ, "'ಹಲೋ' ಎಂದು ಸರಳವಾಗಿ ಹೇಳುವದಕ್ಕಿಂತ ವಂದನೆಗಳನ್ನು ಹೇಳುವದು ಉತ್ತಮವಾಗಿದೆ. ಇನ್ನೊಬ್ಬರ ಒಳತಿಗಾಗಿ ಅವರ ಆಸೆಯು ಅದರಲ್ಲಿ ಒಳಗೊಂಡಿರುತ್ತದೆ."[54] ಒಬ್ಬನು ತನ್ನ ವೈರಿಯನ್ನು ದ್ವೇಷಿಸಿದರೆ, ಅವನು ಎಂದಿಗೂ ಅವನಿಗೆ ವಂದನೆಗಳನ್ನು ಹೇಳುವದಿಲ್ಲ.

ಜನರು ಈ ರೀತಿಯಲ್ಲಿ ವರ್ತಿಸಿದರೆ - ಅವರು ನಿರ್ಧಿಷ್ಟವಾಗಿ ಕುಟುಂಬ ಅಥವಾ ಗುಂಪಿಗೆ ಅವರು ವಂದನೆಗಳು ಮಾಡುವದಾದರೆ - **ಅನ್ಯ ಜನಗಳು** ಉತ್ತಮರಾದವರಲ್ಲ. ಯೆಹೂದ್ಯರಿಗೆ ಇಂಥ ಸಂದೇಶ ಕೇಳುವದು ಕಷ್ಟಕರವಾದದ್ದಾಗಿತ್ತು. ತನ್ನ ಶಿಷ್ಯರು ಇತರರಿಗಿಂತಲೂ ಹೆಚ್ಚಾಗಿ ಪ್ರೀತಿಸಬೇಕೆಂದು ಯೇಸುವಿನ ಆಪೇಕ್ಷೆಯಾಗಿತ್ತು. ಅವರಲ್ಲಿರುವ ವ್ಯತ್ಯಾಸವು ಅನ್ಯರನ್ನು ಅಥವಾ ಅತಿ ಕಡುವಾಪಿಗಳನ್ನು ಆಕರ್ಷಿಸುವಂಥದ್ದಾಗಿರಬೇಕು.

**ವಚನ 48.** ಪ್ರೀತಿಯ ಕುರಿತು ಚರ್ಚಿಸಿದ ತರುವಾಯ, ಒಂದು ದೊಡ್ಡದಾದ "ಆದುದರಿಂದ" ಎಂದು ಹೇಳುವ ಶಬ್ದ ಯೇಸುವಿನ ಬಾಯಿಂದ ಬಂತು. **ಆದುದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವು ಇಲ್ಲದವನಾಗಿರುವಂತೆ ನೀವು ದೋಷವಿಲ್ಲದವರಾಗಿರ್ರಿ.** "ಪರಿಪಕ್ವ" ಎಂದು ಅರ್ಥ ಕೊಡುವ *teleios* ಗ್ರೀಕ್ ಶಬ್ದವು ಇದನ್ನು "ಸಂಪೂರ್ಣ" (19:21) ಅಥವಾ "ಪಕ್ವವಾದ" (1 ಕೊರಿಂಥ 2:6; 14:20; ಎಫೆಸ 4:13) ಎಂದು ಅನುವಾದಿಸಬಹುದಾಗಿದೆ. ಇಲ್ಲಿ ಈ ಶಬ್ದವು ದೇವರ ವಿವರಣೆಗೆ ಉಪಯೋಗಿ ಸಿದ್ದರಿಂದ ಇದು ಸಂಪೂರ್ಣತೆಯನ್ನು ಸೂಚಿಸುತ್ತದೆ. ಎಲ್ಲಾ ಶಿಷ್ಯರು ತಮ್ಮನ್ನು ತಾವು ಅಳೆದುಕೊಳ್ಳಬೇಕಾಗಿರುವ ಅಳತೆ ಆತನೇ ಆಗಿದ್ದಾನೆ. ತಕ್ಷಣದ ಸನ್ನಿವೇಶದಲ್ಲಿ, ಈ ಪರಿಪೂರ್ಣಯು ದೇವರು ಈ ಲೋಕದಲ್ಲಿ ಇದ್ದ ಸಮಸ್ತ ಜನರನ್ನು ಪ್ರೀತಿಸಿದಂತೆ ಒಬ್ಬನು (ನೋಡಿರಿ 1 ಯೋಹಾನ 4:7-21) ತನ್ನ ವೈರಿಗಳನ್ನು ಪ್ರೀತಿಸುವುದಕ್ಕೆ ಸಂಬಂಧಿಸಿದೆ.

ಯೇಸುವಿನ ಶಿಷ್ಯರನ್ನು ಸೋಲಿಸಬೇಕೆಂಬ ಉದ್ದೇಶದಿಂದ ಅವರಿಗೆ ಅಸಾಧ್ಯವಾದ ಆಜ್ಞೆಗಳನ್ನು ಕೊಡಲು ಯೇಸು ಉದ್ದೇಶಿಸಲಿಲ್ಲ, ಆದರೆ ಅವರು ದೇವರನ್ನು ಅನುಕರಿಸುವಂತೆ ಪ್ರೋತ್ಸಾಹಿಸುವದಕ್ಕಾಗಿ ಉದ್ದೇಶಿಸಲಾಗಿದೆ. ಈ ಜೀವನದಲ್ಲಿ ಕ್ರೈಸ್ತರು "ಸಂಪೂರ್ಣ" (**"ಪಕ್ವವಾಗು"**; NIV) ವಾದರೆಂಬುದು ಒಂದು ಅರ್ಥವಿದ್ದರೆ, ಇನ್ನೊಂದು ಅರ್ಥದಲ್ಲಿ ಆ ಮುಂದಿನ ಜೀವಿತ ಬರುವವರೆಗೆ ಅವರು "ಸಂಪೂರ್ಣ" ಆಗುವುದಿಲ್ಲ ಎಂಬುದಾಗಿದೆ. ಆದುದರಿಂದ, ಪೌಲನು "ನಾನು ಗುರಿಯ ಕಡೆಗೆ ಗಮನವಿಟ್ಟಿದ್ದೇನೆ" ಎಂದು ಹೇಳಿದ್ದಾನೆ (ಫಿಲಿಪ್ಪಿ 3:12-16). ಒಬ್ಬನಲ್ಲಿ ಕೊರತೆಗಳು ಬರುವಾಗ ಅದು ಎಚ್ಚರಿಕೆ ಕೊಡುತ್ತಾ ಆತನನ್ನು ದೇವರ ಕೃಪೆಯಲ್ಲಿ ಇನ್ನೂ ಆಳವಾಗಿ ನಿಲ್ಲಲು ತೆಗೆದುಕೊಂಡು

ಬರುತ್ತದೆ. ಕೃಪೆ, ಪಾಪವನ್ನು ಗೆಲ್ಲಲು ಅವನಿಗೆ ತಿರುಗಿ ಉತ್ತೇಜನ ನೀಡಿ ಸಹಾಯಮಾಡುತ್ತವೆ (ತೀತ 2:10-14).

"ಸಂಪೂರ್ಣವಾಗಿರು" ಎನ್ನುವ ಆಜ್ಞೆ ವಿಶಿಷ್ಟವಾದ ಸರಿಸಮಾನತೆಯನ್ನು ಸೂಚಿಸುತ್ತದೆ. "ನೀವು ನಿಮ್ಮ ದೇವರಾದ ಯೆಹೋವನ ಸೇವೆಯ ವಿಷಯದಲ್ಲಿ ಸದಾಚಾರವುಳ್ಳವರಾಗಿರಬೇಕು" ಎಂದು ದೇವರು ಇಸ್ರಾಯೇಲರಿಗೆ ಹೇಳಿದನು (ಧರ್ಮೋಪದೇಶಕಾಂಡ 18:13). "ನಿಮ್ಮ ದೇವರಾದ ಯೆಹೋವನೆಂಬ ನಾನು ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರಬೇಕು" ಎಂದು ಸಹ ಆತನು ಹೇಳಿದನು (ಯಾಜಕಕಾಂಡ 19:2), ಪೇತ್ರನು ಕ್ರೈಸ್ತರಿಗೆ ಇದೇ ಬುದ್ಧಿವಾದಗಳನ್ನು ಕೊಟ್ಟಿರುವನು (1 ಪೇತ್ರ 1:15, 16). "ನಿಮ್ಮ ತಂದೆ ಕರುಣವುಳ್ಳವನಾಗಿರುವ ಪ್ರಕಾರವೇ ನೀವು ಕರುಣವುಳ್ಳವರಾಗಿರ್ರಿ" ಎಂದು ಯೇಸು ಸಮನೆಲದ ಪ್ರಸಂಗದಲ್ಲಿ ಹೇಳಿದನು (ಲೂಕ 6:36).

### ಪಾಠಗಳು

## ಎಚ್ಚರಿಕೆ (5:21-26)

ನಾವು ಮೊದಲೇ ಎಚ್ಚರವಾಗಿರದಿದ್ದರೆ, ದೇವರ ನಿಯಮವನ್ನು ಯೆಹೂದ್ಯ ಪಂಡಿತರು ಮಾಡಿದಂತೆಯೇ ನಾವು ಕೂಡ ತಪ್ಪಿಗಸ್ಥ ಮನೋಭಾವನೆ ಹೊಂದುತ್ತೇವೆ. ಕ್ರಿಸ್ತನ ನಿಯಮವನ್ನು ತಿಳಿದುಕೊಳ್ಳುವದು ನಮಗೆ ಸಾಧ್ಯವಾಗುತ್ತದೆ, ಆದರೆ ಇಲ್ಲಿಯವರೆಗೆ ಉದ್ದೇಶಿಸಲಾಗಂತೆ ಅದನ್ನು ವಿವರಿಸಿ ಮತ್ತು ವ್ಯಾಖ್ಯಾನಿಸಲು ಸಾಧ್ಯವಾಗುತ್ತದೆ. ಅದನ್ನು ಕೇವಲ ನಿಯಮದ ಪತ್ರಿಕೆ ಎಂದು ಎಲ್ಲಿಯವರೆಗೆ ಪರಿಗಣನೆಗೆ ತೆಗೆದುಕೊಳ್ಳುತ್ತೇವೋ ಎಲ್ಲಿಯವರೆಗೆ ಅದನ್ನು ಆತ್ಮೀಕವಾಗಿ - ಅದರಲ್ಲಿರುವ ಅಂಶಗಳನ್ನು ಅಥವಾ ಅರ್ಥವನ್ನು ತೆಗೆದುಕೊಳ್ಳುವದಿಲ್ಲವೋ - ಅಲ್ಲಿಯವರೆಗೆ ನಮ್ಮನ್ನು ನಾವೇ ಅದಕ್ಕೆ ವಿಧೇಯರಾಗಿದ್ದೇವೆ ಎಂದು ಪ್ರೋತ್ಸಾಹಮಾಡಿಕೊಳ್ಳುತ್ತಾ ನಿಜವಾಗಿಯು ನಾವು ಅದಕ್ಕೆ ದೂರವಾಗಿರುತ್ತೇವೆ.

## ಕೋಪ ಮತ್ತು ಪಾಪ (5:21, 22)

ಯೇಸು ಎಲ್ಲಾ ರೀತಿಯ ಕೋಪ ಖಂಡಿಸಲಿಲ್ಲ, ಆದರೆ ವೈಯಕ್ತಿಕ ಸಂಬಂಧಗಳಿಂದ ಉಂಟಾಗುವ ಕೋಪವನ್ನು ಖಂಡಿಸಿದನು. ಪಾಪ ಮತ್ತು ಅನ್ಯಾಯ ಇರುವ ಸ್ಥಳದಲ್ಲಿ ಕೋಪ ಮಾಡಿಕೊಳ್ಳಬೇಕು. ನಮ್ಮ ಕೋಪ ಈ ವಿಷಯಗಳ ಕಡೆಗೆ ನೇರವಾಗಿ ಮಾಡದೇ ಇರುವುದೇ ಸಮಸ್ಯೆಯಾಗಿದೆ. ಅದಕ್ಕೆ ಬದಲಾಗಿ, ಅವಮಾನ ಅಥವಾ ಅನ್ಯಾಯ ನಮ್ಮ ಮೇಲೆ ಹಾಕಿಕೊಂಡು ಸುಟ್ಟುಕೊಳ್ಳುತ್ತೇವೆ. ನಮಗೆ ವೈಯಕ್ತಿಕವಾಗಿ ಅನ್ಯಾಯ ಆಗುವಾಗ ನಾವು ಸರಳವಾಗಿ ಕೋಪಗೊಳ್ಳುತ್ತೇವೆ, ಆದರೆ ಇತರರಿಗೆ ಅನ್ಯಾಯವಾಗುವಾಗ ನಾವು ಕೋಪಗೊಳ್ಳುವದರಲ್ಲಿ ನಿಧಾನವಾಗಿರುತ್ತೇವೆ. ಯೇಸು ಕೋಪಗೊಂಡನು (21:12, 13; 23:17; ಮಾರ್ಕ 3:5), ಆದರೆ ಆತನ ಕೋಪವು ಯಾವುದೇ ತನ್ನ ಸ್ವಂತ ಗರ್ವದಿಂದ ಮುಚ್ಚಲ್ಪಟ್ಟಿಲ್ಲ. "ಬೈಯುವವರನ್ನು ಆತನು ಪ್ರತಿಯಾಗಿ ಬೈಯಲಿಲ್ಲ, ಆತನು ಬಾದೆಯನ್ನನುಭವಿಸಿದಾಗ ಯಾರನ್ನು ಬೆದರಿಸಲಿಲ್ಲ ..." ಎಂದು ಪೇತ್ರನು ಬರೆದಿದ್ದಾನೆ (1 ಪೇತ್ರ 2:23).

ಕೆಲವು ಸಾರಿ ನಮ್ಮ ವೈಯಕ್ತಿಕ ಅಹಂ ನ್ಯಾಯಯುತವಾದ ಮತ್ತು ಇತರ ವಿಷಯಗಳ ಪಕ್ಷವಾಗಿ ವಾದಿಸುವದರಲ್ಲಿ ಮುಳುಗುವದು. ಆಗ, ನಮ್ಮ ಸ್ವಂತ ದೃಷ್ಟಿಕೋನದಲ್ಲಿ, ನಮ್ಮ ವಿರೋಧಗಳು ನಮ್ಮ ಮೇಲೆ ಹಾಗೆಯೇ ನಮ್ಮ ಸ್ಥಾನಗಳ ಮೇಲು ದಾಳಿಮಾಡುತ್ತವೆ. ಇದರಿಂದ ನಾವು ಕೋಪದಿಂದ ಪ್ರತಿಕ್ರಿಯಿಸುತ್ತೇವೆ. ವಾಸ್ತವಿಕವಾಗಿ ನಾವು ನಮ್ಮನ್ನು ರಕ್ಷಿಸಿಕೊಳ್ಳುತ್ತಿರುವಾಗ ನಾವು ಸತ್ಯವನ್ನು ಕಾಪಾಡುತ್ತೇವೆಂದು ನಾವು ಯೋಚಿಸುವದರ ಮೂಲಕ ನಾವು ನಮ್ಮನ್ನು ಮೋಸಪಡಿಸಿಕೊಳ್ಳುತ್ತೇವೆ. ನಾವು ಸುವಾರ್ತೆಯನ್ನು

ಕಾಪಾಡಿಕೊಳ್ಳುವರಾದರೇ ನಾವು "ಸ್ವಂತ" ಎನ್ನುವಂಥದ್ದನ್ನು ಸೇರಬಾರದೆಂದು ನಿಶ್ಚಯ ಮಾಡಿಕೊಂಡಿರಬೇಕು.

## ದೇವರ ಪ್ರಮಾಣ (5:23-26)

ಮನುಷ್ಯನಿಂದ ಸ್ಥಾಪಿಸಲ್ಪಟ್ಟಿರುವ ಮತಧರ್ಮದ ಮತ್ತು ನಮ್ಮ ಮಧ್ಯದಲ್ಲಿರುವ ಪ್ರಮಾಣವನ್ನು ಹೋಲಿಸಿಕೊಳ್ಳುವುದು ನಮಗೆ ಸರಿಯಲ್ಲ. ನಾವು ನಮ್ಮ ದೇವರ ಪ್ರಮಾಣ ಮಟ್ಟದ ಇಟ್ಟುಕೊಳ್ಳಲು ಪ್ರಯತ್ನಿಸಬೇಕು (ಯೋಹಾನ 7:24; 2 ಕೊರಿಂಥ 10:12, 13). ನಾವು ಯಾವಾಗಲು ಸಹೋದರ ಸಂಬಂಧದ ಕುರಿತು ಯೋಚಿಸಬಾರದು ನಾವು ಅಪರಾಧ ಮಾಡಿರಬಹುದು ಅಥವಾ ಯಾರಾದರೂ ನಮಗೆ ಮಾಡಿರಬಹುದು, ಆದರೆ ಅಂಥಹ ಹೋರಾಟದಿಂದ ದೇವರೊಂದಿಗೆ ಇರುವ ನಮ್ಮ ಸಂಬಂಧಕ್ಕೆ ಎಂಥ ಪರಿಣಾಮ ಬೀರುತ್ತದೆ ಎಂದು ಆಲೋಚಿಸಬೇಕು (1 ಯೋಹಾನ 3:14-18). ದೇವರ ಪರಿಶುದ್ಧ ವಾಕ್ಯದೆಡೆಗೆ ನಮ್ಮ ನಡತೆ ಈ ಸೂಚನೆಯ ತಳಹದಿ ನಿಜವಾಗಿಯು ಏನಾಗಿದೆ. ದೇವರ ವಾಕ್ಯದೆಡೆಗೆ ಇರುವ ನಮ್ಮ ಮನೋಭಾವನೆ ನಮ್ಮ ಕಾರ್ಯಗಳು ನಿರ್ಧರಿಸುತ್ತವೆ (1 ಯೋಹಾನ 5:2, 3). ನಮ್ಮ ಹೃದಯವು ಸರಿಯಿರದೆ ಇದ್ದರೆ, ತಕ್ಷಣವೇ ಆ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕು (2 ಕೊರಿಂಥ 6:2). ಏಕೆಂದರೆ ದೇವರ ಆರಾಧನೆಯು "ಆತ್ಮೀಯ ಮತ್ತು ಸತ್ಯ" ರೀತಿಯಲ್ಲಿ ಆರಾಧಿಸಬೇಕು (ಯೋಹಾನ 4:23). ನಾವು ಅಂತರಂಗದಲ್ಲಿ ಸರಿಯಾಗಿದ್ದಂತೆಯೇ ಆಚಾರ ಕ್ರಮದಲ್ಲಿಯು ಸಹ ಸರಿಯಾಗಿರಬೇಕು.

## ಸಂಧಾನಮಾಡಿಕೊಳ್ಳುವದು (5:23-26)

ಅಪರಾಧ ಮಾಡಿರುವ ಅಥವಾ ಮಾಡುತ್ತಿರುವ ಸಹೋದರರೊಂದಿಗೆ ವ್ಯವಹರಿಸುವ ಸರಿಯಾದ ಕಾರ್ಯವಿಧಾನಗಳನ್ನು ಬೈಬಲು ಕೊಟ್ಟಿರುತ್ತದೆ. ಈ ವಾಕ್ಯಭಾಗದಲ್ಲಿ, ಒಬ್ಬ ಸಹೋದರನೊಂದಿಗೆ ಇರುವ "ನಿನ್ನ ವಿರೋಧತ್ವವನ್ನು" ಹೋಗಿ ಸಮಾಧಾನ ಪಡಿಸುವದರ ಆತುರತೆಯನ್ನು ಯೇಸು ಒತ್ತಿ ಹೇಳಿದ್ದಾನೆ (5:23, 24). "ನಿನ್ನ ಸಹೋದರ ತಪ್ಪು ಮಾಡಿದ್ದರೆ [ನಂತರದ ಮನುಷ್ಯರ ಕೈ ಬರಹದಲ್ಲಿ ನಿನ್ನ ವಿರುದ್ಧ ಎಂದು ಬರೆಯಲಾಗಿದೆ], ಎಂದು ಗಲಾತ್ಯದವರಿಗೆ ಪೌಲನು ಹೇಳಿದ್ದಾನೆ. ನೀನು ಹೋಗಿ ಆತನೂ ನೀನು ಇರುವಾಗ ಆ ತಪ್ಪನ್ನು ತೋರಿಸು ..." (18:15) ಎಂದು ಇನ್ನೊಂದು ಸಂದರ್ಭದಲ್ಲಿ ಆತನು ಹೇಳಿದ್ದಾನೆ. "ಯಾರಾದರೂ ಯಾವುದೋ ಒಂದು ದೋಷದಲ್ಲಿ ಸಿಕ್ಕಿದರೆ ಅಂಥವನನ್ನು ಆತ್ಮನಿಂದ ನಡಿಸಿಕೊಳ್ಳುವ ನೀವು ಶಾಂತಭಾವದಿಂದ ತಿದ್ದಿ ಸರಿಮಾಡಿರಿ ..." (ಗಲಾತ್ಯ 6:1). ಈ ತತ್ವಗಳನ್ನು ನಾವು ಪಾಲಿಸಿದರೆ, ಸಭೆಯವರಲ್ಲಿ ಎದ್ದಿರುವ ಅನೇಕ ಸಮಸ್ಯೆಗಳನ್ನು ನಾವು ಪರಿಹರಿಸಬಹುದು.

ಮೊದಲನೆಯ ಅನ್ವಯಿಸುವಿಕೆ (5:23, 24), ಕ್ರಿಸ್ತನಲ್ಲಿರುವ ಸಹೋದರನ ಅಥವಾ ಸಹೋದರಿ ಮತ್ತು ನಮ್ಮ ಮಧ್ಯೆದಲ್ಲಿ ಸಮಸ್ಯೆಗಳು ಇರುವದು ನಮಗೆ ತಿಳಿದಿದ್ದರೆ ನಾವು ನಿಜವಾಗಿಯು ಸತ್ಯಕ್ಕೆ ತಕ್ಕ ಆರಾಧನೆ ನಿರಾಕರಿಸಿದ್ದೇವೆಂದು ಯೇಸು ಹೇಳಿದನು. ಒಬ್ಬ ಕ್ರೈಸ್ತನು ಇನ್ನೊಬ್ಬ ಸಭೆಯ ಸದ್ಯಸನ ಕುರಿತು ತನ್ನ ಹೃದಯದಲ್ಲಿ ಸರಿಯಿಲ್ಲದ ಆಲೋಚನೆ ಯೊಂದಿಗೆ ಆರಾಧನೆಗೆ ಹೋಗುವವದಾದರೆ, ಅಂಥಹ ವ್ಯಕ್ತಿ ದೇವರಿಗೆ ಆರಾಧಿಸುವದರಲ್ಲಿ ಯಾವುದೇ ರೀತಿಯ ಫಲವಿಲ್ಲವೆಂದು ದೇವರ ವಾಕ್ಯ ನಮಗೆ ಭರವಸೆ ಕೊಡುತ್ತದೆ. ಹೃದಯ ಸರಿಯಿರದಿದ್ದರೆ ದೇವರಿಗೆ ಪ್ರಾರ್ಥಿಸುವದರಲ್ಲಿ ಯಾವುದೇ ಉಪಯೋಗ ವಿರುವುದಿಲ್ಲ. ದೇವರಿಗೆ ತಿಳಿದಿದೆ (ಲೂಕ 16:15; 1 ಯೋಹಾನ 3:20). "ನಾನು ಕೆಟ್ಟತನದ ಮೇಲೆ ಮನಸಿಟ್ಟಿದ್ದರೆ ಸ್ವಾಮಿಯು ನನ್ನ ವಿಜ್ಞಾಪನೆಯು ಕೇಳುತ್ತಿದ್ದಿಲ್ಲ" ಎಂದು ಕೀರ್ತನೆಗಾರನು ಬರೆದಿದ್ದಾನೆ (ಕೀರ್ತನೆ 66:18). ಸಹೋದರನೊಂದಿಗೆ ತಪ್ಪು ಮನಸ್ಸು

ಇಟ್ಟುಕೊಂಡಿರುವಾಗ ದೇವರೊಂದಿಗೆ ಸರಿಯಾಗಿರಲು ಸಾಧ್ಯವಿಲ್ಲ (1 ಯೋಹಾನ 2:8-11; 4:20, 21). ವಾಸ್ತವವಾಗಿ, ಒಬ್ಬ ಕ್ರೈಸ್ತನು ದ್ರೋಹದ ಮನಸ್ಸು ಹೊಂದಿಕೊಂಡಿರುವದಾದರೆ ಆರಾಧನೆಯಲ್ಲಿ ಇತರರಿಗೆ ಅಡ್ಡಗಾಲು ಹಾಕುವವನಾಗಿದ್ದಾನೆ.

ದುಷ್ಟತನವನ್ನು ಒಳ್ಳೆಯದರೊಂದಿಗೆ ಸರಿದೂಗಿಸುವ ಪ್ರಯತ್ನದ ವಿರುದ್ಧ ಇದು ಎಚ್ಚರಿಕೆ ಕೊಡುತ್ತದೆ. ಫರಿಸಾಯರು ಚಿಕ್ಕ ಚಿಕ್ಕವುಗಳಲ್ಲಿ ಅತಿಜಾಗರೂಕರಾಗಿದ್ದರು (23:23), ಯಾವುದಕ್ಕೂ ಲೆಕ್ಕಿಸದೆ ಇತರರನ್ನು ದುರಾಹಂಕಾರದಿಂದ ಖಂಡಿಸುವದು ಮತ್ತು ತೀರ್ಪುಮಾಡುವದು ಮಾಡುತ್ತಿದ್ದರು. ಅವರಂತೆ, ನಾವು ಸಹ "ಕ್ರೈಸ್ತರ ಸೇವೆ"ಯಲ್ಲಿ ನಿರಂತರಾಗಿದ್ದು ಕ್ರೈಸ್ತರಾಗಿರಲು ಮರತ್ತಿದ್ದೇವೆ. ಈ ರೀತಿಯಾಗಿ ಬಾಹ್ಯಕಾರ್ಯಗಳ ಭಾವನೆಯ ಮುಖಾಂತರ ಹೋಗುವಾಗ, ನಾವು ಕೆಟ್ಟ ಅನಿಸಿಕೆಗಳು, ರೋಷಗೊಳ್ಳುವದು, ಅಥವಾ ಮನಸ್ಸಿನಲ್ಲಿ ಹೊಟ್ಟೆಕಿಚ್ಚು ಇಂಥವುಗಳಿಗೆ ನಾವು ಹಡಗು ನಿಲ್ಲಿಸುವ ಕೇಂದ್ರದಂತೆ ಆಗಬಹುದು. ನಾವು ಸರಿಯಾಗಿರುವದನ್ನು ಮಾಡಲು ಸೋತುಹೋಗುವಾಗ ನಮ್ಮನ್ನು ನಾವೇ ಮೋಸ ಪಡಿಸಿಕೊಳ್ಳುತ್ತೇವೆ. ಆದರೆ ಆರಾಧನೆಯ ಕಾರ್ಯವು ಪರಿಸ್ಥಿತಿಯನ್ನು ಸರಿಮಾಡುತ್ತದೆಂದು ನಾವು ನಂಬಬೇಕು. ನಾವು ದೇವರೊಂದಿಗೆ ಸರಿಯಾಗುವ ಮೊದಲು ಸಹೋದರರೊಂದಿಗೆ ಇಂತಹಾ ವಿಷಯಗಳಲ್ಲಿ ಸರಿಪಡಿಸಿಕೊಳ್ಳಬೇಕೆಂದು ಯೇಸು ಹೇಳುತ್ತಿದ್ದಾನೆ.

ಎರಡನೆಯ ಅನ್ವಯಿಸುವಿಕೆ (5:25, 26), ಸಾಧ್ಯವಾದರೆ, ಸಮಸ್ಯೆಗಳು ನ್ಯಾಯಲಯದ ಹೊರಗಡೆ ಸರಿಪಡಿಸಿಕೊಳ್ಳಬೇಕೆಂದು ಕರ್ತನು ಒತ್ತಿ ಹೇಳಿದ್ದಾನೆ. ಇದು ಎಲ್ಲಾ ವಿಷಯಗಳಲ್ಲಿ ಸತ್ಯವಾಗಿದೆ, ಆದರೆ ವಿಶೇಷವಾಗಿ ಜೊತೆ ವಿಶ್ವಾಸಿಗಳ ಮಧ್ಯೆ ಸತ್ಯವಾಗಿದೆ. ನಮ್ಮ "ಕುಟುಂಬ ಸಮಸ್ಯೆಗಳನ್ನು" ಹೊರಗಡೆ ಪ್ರಪಂಚದ ನ್ಯಾಯಲಯದ ಮುಂದೆ ತೋರಿಸಿಕೊಳ್ಳಬಾರದು ಎಂದು ಪೌಲನು ನಮಗೆ ತಿಳಿಸಿದ್ದಾನೆ (1 ಕೊರಿಂಥ 6:1-8). ಕ್ರಿಸ್ತನಿಗೆ ಗಾಯಪಡಿಸುವದಕ್ಕಿಂತಲೂ ನಾವು ಮೋಸ ಹೋಗುವದೇ ಉತ್ತಮ ಎಂದಿದ್ದಾನೆ. ಒಬ್ಬ ಕ್ರೈಸ್ತನು ಇನ್ನೊಬ್ಬನನ್ನು ನ್ಯಾಯಲಕ್ಕೆ ತರಬಾರದು, ಆದರೆ ನಮ್ಮ ಮುಂದೆ ಯೇಸು ಮತ್ತು ಪೌಲನು ಇಟ್ಟಿರುವ ಸೂತ್ರಗಳನ್ನು ಗಮನಿಸಿರಿ. ನಾವು ಅದನ್ನು ತಡೆಹಿಡಿಯಲು ನಮ್ಮ ಅಧೀನದಲ್ಲಿ ಇದ್ದಿದ್ದರೆ ನಮಗೂ ಇತರರಿಗೂ ಮಧ್ಯೆ ಇಂತಹ ಪರಿಸ್ಥಿತಿ ತಲೆ ಎತ್ತದಂತೆ ಸ್ವಲ್ಪ ಮುಂಜಾಗ್ರತೆ ತೆಗೆದುಕೊಳ್ಳುತ್ತಾ ಅದನ್ನು ಬರಲು ಅವಕಾಶಕೊಡಬಾರದು (ರೋಮಾಪುರ 12:17, 18).

## ಲೈಂಗಿಕದ ಕುರಿತು ಸತ್ಯ (5:27-30)

ದೇವರು ಲೈಂಗಿಕತೆ ಸೃಷ್ಟಿಸಿದ್ದರಿಂದ, ಅದು "ಹೊಲಸಾದದ್ದು" ಅಲ್ಲ. ದೇವರು ಮನುಷ್ಯನನ್ನು ಲೈಂಗಿಕತೆಯುಳ್ಳವನಾಗಿ ಸೃಷ್ಠಿಸಿದನು ಮತ್ತು ಆತನಿಗೆ ಸರಿಹೊಂದುವ ಸಂಗಾತಿಯನ್ನು ಉಂಟುಮಾಡಿದನು. ಮನುಷ್ಯನ ಲೈಂಗಿಕ ಬಲವು ಹೆಚ್ಚಾಗಿರುತ್ತದೆ ಎಂದು ದೇವರಿಗೆ ಗೊತ್ತಿದೆ. ಲೈಂಗಿಕತೆ ಮದುವೆಯ ಹೊರಗಡೆ ಇರುವದು ತಪ್ಪುಕಾರ್ಯವೆಂದು ಆತನಿಗೆ ತಿಳಿದಿರುತ್ತದೆ - ಅಂಥಂಹ ಲೈಂಗಿಕತೆ ವ್ಯಕ್ತಿಯ ಶಾರೀರಿಕವಾಗಿ, ಭಾವಾನಪೂರ್ವಕವಾಗಿ ಮತ್ತು ಆತ್ಮೀಕವಾಗಿ ಉತ್ತಮವಾಗಿರುವದನ್ನು ಅದು ನಾಶಮಾಡುತ್ತದೆ. ಆದದರಿಂದ ಆತನು ನಮ್ಮ ಲೈಂಗಿಕತೆ ಕಾಪಾಡಲು ನಮಗೆ ನಿಯಮಗಳನ್ನು ಕೊಟ್ಟಿದ್ದಾನೆ. ದೇವರು ನಮ್ಮನ್ನು ಪ್ರೀತಿಸುತ್ತಾನೆ, ಮತ್ತು ನಮಗೆ ಯಾವುದು ಉತ್ತಮವಾದದ್ದೆಂದು ಆತನಿಗೆ ತಿಳಿದದೆ. "ಅನಿಶ್ಚಿತವಾದ ಲೈಂಗಿಕತೆ" ಎನ್ನುವಂಥದ್ದು ಇರುವುದಿಲ್ಲ. ದೂರದರ್ಶನ ಕಾರ್ಯಕ್ರಮಗಳು ಮತ್ತು ಸಿನಿಮಾಗಳು ಅಲಕ್ಷ್ಯದ ಲೈಂಗಿಕತೆಯ ನಡವಳಿಕೆಯನ್ನು ಮೋಹಕ ಆಕರ್ಷಣೆಯಿಂದ ಕೂಡುವಂತೆ ಮಾಡಿದ್ದಾರೆ, ಆದರೆ ಅವರು ಅಂಥಂಹ ರೀತಿಯ ಜೀವನ ಶೈಲಿಯು ಜೀವವನ್ನೆ ತೆಗೆದುಕೊಳ್ಳುತ್ತದೆ ಎಂದು ತಿಳಿಸಲು ಅವರು ಸೋತುಹೋಗಿದ್ದಾರೆ. ಒಬ್ಬರು ಇನ್ನೊಬ್ಬರಿಗೆ

ಲೈಂಗಿಕತೆಯನ್ನು ಕೊಡುವದು ಬಹಳ ಗಂಭೀರವಾದ ವಿಷಯವಾಗಿದೆ. ಲೈಂಗಿಕತೆಯು ದೈಹಿಕ ಕಾರ್ಯಕ್ಕಿಂತಲೂ ಮಹತ್ವದ್ದಾಗಿದೆ; ಇದರಲ್ಲಿ ದೇಹ, ಮನಸ್ಸು, ಮತ್ತು ಆತ್ಮ ಒಳಗೊಳ್ಳುವಿಕೆಯಿಂದ ದೇವರು ಅದನ್ನು ರೂಪಿಸಿದ್ದಾನೆ.

ದೇವರು ಆದಾಮ ಮತ್ತು ಹವ್ವರನ್ನು ಉಂಟುಮಾಡಿ ಆತನು ಅವರನ್ನು ನೋಡಿ "ಅದು ಬಹಳ ಒಳ್ಳೆಯದು" ಎಂದನು (ಆದಿಕಾಂಡ 1:26-31). ಅವರನ್ನು ಆಶೀರ್ವಾದಿಸಿದನು ಮತ್ತು ಆಜ್ಞಾಪಿಸಿ "ನೀವು ಬಹು ಸಂತಾನವುಳ್ಳವರಾಗಿ ಮತ್ತು ಭೂಮಿಯಲ್ಲಿ ತುಂಬಿಕೊಳ್ಳಿರಿ" ಎಂದು ಹೇಳಿದನು. ಲೈಂಗಿಕ ಕ್ರಿಯೆ ಮೂಲ ಪಾಪವಲ್ಲ. ದೇವರು ಗಂಡ/ಹೆಂಡತಿಯ ಸಂಬಂಧವನ್ನು ಉಂಟು ಮಾಡಿದ್ದಾನೆ (ಆದಿಕಾಂಡ 2:22-25). ಆತನ ವಾಕ್ಯ ಅದನ್ನು ದೃಢಪಡಿಸುತ್ತದೆ (ಇಬ್ರಿಯ 13:4). ಆತನಿಂದ ಪ್ರೇರೇಪಿಸಲ್ಪಟ್ಟ ವಾಕ್ಯಗಳು ಇಡಿ ಪುಸ್ತಕವನ್ನು ಒಳಗೊಂಡಿದೆ (ಪರಮಗೀತ) ಅವುಗಳು ನಮಗೆ ದಾಂಪತ್ಯದ ಪ್ರೀತಿ ಬೋಧಿಸುತ್ತವೆ. ಲೈಂಗಿಕ ಕ್ರಿಯೆಯ ನಡವಳಿಕೆಯ ಆತನ ನಿಯಮಗಳು ನಮ್ಮ ಹಿತಕ್ಕಾಗಿವೆ (19:1-9; 1 ಕೊರಿಂಥ 7:3-5).

ಲೈಂಗಿಕ ಕ್ರಿಯೆ ಸಮಸ್ಯೆಯಲ್ಲ. ಲೈಂಗಿಕತೆಯನ್ನು ದುರುಪಯೋಗಪಡಿಸುವ ಮತ್ತು ಸ್ವಾರ್ಥಕ್ಕಾಗಿ ಬಳಸುವ ಪ್ರಪಂಚದಲ್ಲಿ ನಾವು ಇರುವುದೇ ನಿಜವಾದ ಸಮಸ್ಯೆಯಾಗಿದೆ. ಲೈಂಗಿಕತೆಯು ಹಲ್ಲುಜ್ಜುವದರಿಂದ ಹಿಡಿದುಕೊಂಡು ಮೋಟಾರು ಗಾಡಿಗಳನ್ನು ಮಾರುವವರೆಗೆ ಲೈಂಗಿಕತೆಯನ್ನು ಉಪಯೋಗಿಸಲಾಗುತ್ತಿದೆ. ದೂರದರ್ಶನ ಕಾರ್ಯಕ್ರಮಗಳು ಮುಚ್ಚುಮರೆಯಿಲ್ಲದೆ ನೀತಿಯನ್ನು ಮತ್ತು ಲೈಂಗಿಕ ಕ್ರಿಯೆಯ ಮಿಶ್ರವಾದ ತಮಾಷೆಗಳನ್ನು ಮಾಡುತ್ತವೆ. ಲೈಂಗಿಕದ ಸ್ಪಷ್ಟತೆ ಇರುವ ಸಿನಿಮಾಗಳು, ಸಂಗೀತ, ಮತ್ತು ಪುಸ್ತಕಗಳು ಯೌವನಸ್ಥ ಸ್ತೋತ್ರಗಳನ್ನೇ ಕೇಂದ್ರಿಕರಿಸುತ್ತವೆ, ಸುಖವೇ ಸಾಧನೆ ಎಂಬಂತೆ ಲೈಂಗಿಕ ನಡತೆಯ ಜವಾಬ್ದಾರಿಯ ಕುರಿತು ವಾದಮಾಡುತ್ತಾರೆ.

ಹೊರವಲಯದ ಲೈಂಗಿಕತೆಗೆ ಆಸಕ್ತಿಯುಳ್ಳವರು ಇದರಲ್ಲಿ ಅಪಕ್ವವಾಗುವವರು ನಂಬುವಂತೆ ಜನರ ಗುಂಪಿನೊಂದಿಗೆ ಹೋಗದಿದ್ದರೆ ಅಂಥವರು ಅದಕ್ಕೆ ಅಪರಿಚಿತರು ಅಥವಾ ಅಸಾಮಾನ್ಯವುಳ್ಳವರೆಂದು ನಂಬುವಂತೆ ಮಾಡುತ್ತಾರೆ. ಇದರ ಫಲವಾಗಿ ಮದುವೆಯ ಮುಂಚೆ ಮಕ್ಕಳಾಗುವದು, ಗರ್ಭಸ್ರಾವಮಾಡಿಸುವದು ಮತ್ತು ವಿಚ್ಛೇದಗಳು ಆಗುತ್ತವೆ. ಜಾಹಿರಾತುಗಳು ಲೈಂಗಿಕ ರೋಗಗಳು ಇನ್ನೊಬ್ಬರಿಗೆ ಅಂಟಿಸುತ್ತವೆ ಎಂದು ಹೇಳುವ ಬದಲಾಗಿ "ಸುರಕ್ಷಿತ ಲೈಂಗಿಕತೆ" ಎಂದು ವಾದಿಸಿ ಅವರು ಜಾಹಿರಾತು ಮಾಡುತ್ತಾರೆ. ಕೇವಲ ಮದುವೆ ಮುಂಚೆ ಲೈಂಗಿಕ ಕ್ರಿಯೆ ಮಾಡದಿರುವದು ಮತ್ತು ದೈವೀಕ ನೀತಿಯುಳ್ಳವರನ್ನು ಮತ್ತು ಆತ್ಮೀಕ ಮೌಲ್ಯಗಳನ್ನು ಹೊಂದಿರುವವರನ್ನು ಮದುವೆ ಮಾಡಿಕೊಳ್ಳುವದು ಒಂದೇ ಸತ್ಯವಾದ ಸುರಕ್ಷಿತವಾದ ಮಾರ್ಗವಾಗಿದೆ. ತರುವಾಯ ಇಬ್ಬರು ಸಂಗಾತಿಗಳು ಮದುವೆಯಲ್ಲಿ ಮಾಡಿರುವ ಪ್ರಮಾಣಕ್ಕೆ ನಂಬಿಗಸ್ತರಾಗಿರಬೇಕು.

ಇತ್ತೀಚಿನ ಕೆಲವು ಅಧ್ಯಾಯಗಳು ನಿರೀಕ್ಷಿತ ಮಟ್ಟಕ್ಕೆ ಕೆಲವು ಲೈಂಗಿಕ ನಡತೆಗಳು ಉತ್ತಮ ಸ್ಥಿತಿಗೆ ಬದಲಾವಣೆ ಹೊಂದುತ್ತಿವೆ. ಹೆಚ್ಚಿನ ಗರ್ಭಸ್ರಾವಗಳು ಕಡಿಮೆಯಾಗಿವೆ, ಕೆಲವು ಯೌವನಸ್ಥರು ನಂಬಿಕೆಯ ವಾಗ್ದಾನ ಮಾಡುತ್ತಿದ್ದಾರೆ, ಮತ್ತು ಶಾಲೆಗಳಲ್ಲಿ ಕೆಲವು ವಿಷಯಗಳಲ್ಲಿ ಕುಟುಂಬದ ಸ್ವಯಂ ಶೀಲತೆ ಕುರಿತು ಅವರು ಪ್ರೋತ್ಸಾಹ ನೀಡುತ್ತಿದ್ದಾರೆ.[55]

## ದುರಾಶೆಯನ್ನು ಸೋಲಿಸುವದು (5:27-30)

ಯೇಸು ದುರಾಶೆಯ ವಿರುದ್ಧವಾಗಿ ಎಚ್ಚರಿಸಿದ್ದಾನೆ, ಇದು ಆತ್ಮವನ್ನು ಹಾಳು ಮಾಡುತ್ತದೆ ಮತ್ತು ಇದು ವ್ಯಭಿಚಾರಕ್ಕೆ ನಡಿಸುತ್ತದೆ. ನವಯುಗದ ಸಂಸ್ಕೃತಿಯ ಆಕರ್ಷಣೆಯೆ ದುರಾಶೆಯ ಶೋಧನೆ ಆಗಿದೆ. William Hendriksen ಹೀಗೆ ಬರೆದಿದ್ದಾರೆ.

> [ಪಾಪವನ್ನು] "ಸಾಯಿಸಲೇಬೇಕು" (ಕೊಲಸ್ಸೆ 3:5). ಶೋಧನೆಯನ್ನು ಪಕ್ಕಕ್ಕೆ *ತಕ್ಷಣವೇ* ಎಸೆದು ಬಿಡು ಮತ್ತು ನಿಶ್ಚಯವಾಗಿ ... *ಶಸ್ತ್ರ ಚಿಕಿತ್ಸೆಯು ಬೆಲಿನ*

*ಮೂಲದಿಂದಲೇ* ಹೋಗಬೇಕು. ಈ ಕ್ಷಣದಲ್ಲಿ ಈಗಲೇ ಆಗಬೇಕು ಮತ್ತು ಯಾವುದೇ ಚಂಚಲ ಮನಸ್ಸು ಇಲ್ಲದೆ ಹೊಲಸಾದ ಪುಸ್ತಕಗಳನ್ನು ಸುಡಬೇಕು, ಕೆಟ್ಟ ಚಿತ್ರಗಳು ನಾಶಮಾಡಬೇಕು, ಆತ್ಮವನ್ನು ನಾಶಮಾಡುವಂಥದ್ದು ನಾಶವಾಗಬೇಕು, ಸಮಾಜವನ್ನು ಕಟ್ಟಿಹಾಕಿರುವ ದುಷ್ಟತನವು ಮುರಿದು ಹೋಗಲಿ, ವಿನಾಶಕಾರ ಅಭ್ಯಾಸಗಳು ತ್ಯಜಿಸಿಬಿಡಬೇಕು. ಪಾಪದ ವಿರುದ್ಧ ವಿಶ್ವಾಸಿಯು ಕಠಿಣವಾಗಿ ಹೋರಾಡಬೇಕು. ನೆರಳಿನ ಗುದ್ದಾಟವು ಯಾವುದೇ ಕೆಲಸ ಮಾಡುವದಿಲ್ಲ [1 ಕೊರಿಂಥ 9:26, 27].[56]

David Stewart

## ವಿಚ್ಛೇದ ಕುರಿತು ಯೇಸುವಿನ ಬೋಧನೆ (5:31, 32)

ಮತ್ತಾಯ 19:1-12ರಲ್ಲಿ, ಯೇಸು ಮದುವೆಯ ಕುರಿತು, ವಿಚ್ಛೇಧನ, ಮತ್ತು ಮರು ಮದುವೆ ಕುರಿತು ಅನೇಕ ಸತ್ಯಾಂಶಗಳನ್ನು ಹೇಳಿದ್ದಾನೆ. *ಮೊದಲನೆಯದಾಗಿ, ದೇವರ ಮೂಲ ಯೋಜನೆ ಒಂದೇ ಜೀವಿತ ಕಾಲಕ್ಕೆ ಒಬ್ಬ ಪುರುಷನಿಗೆ ಒಬ್ಬಳೇ ಸ್ತ್ರೀ ಎಂಬುದಾಗಿ ಆತನು ಹೇಳಿದ್ದಾನೆ* (19:3-5; ಆದಿಕಾಂಡ 2:18-25). ದೇವರು ಪುರುಷ ಮತ್ತು ಸ್ತ್ರೀಯರನ್ನು ಸಂತಾನ ವೃದ್ಧಿಪಡಿಸುವದಕ್ಕು ಮತ್ತು ಜೊತೆಯಾಗಿರುವದಕ್ಕಾಗಿ ಉಂಟುಮಾಡಿದನೆಂದು ತನ್ನ ಕೇಳುಗರಿಗೆ ನೆನಪು ಮಾಡಿದನು. ದೇವರು ಪುರುಷನನ್ನು ಸ್ತ್ರೀಗಾಗಿ ಸ್ತ್ರೀಯನ್ನು ಪುರುಷನಿಗಾಗಿ ಮಾಡಿದನು ಮತ್ತು ಅದರಲ್ಲಿ ಏನಾದ್ರು ನಡವಳಿಕೆಯಲ್ಲಿ ಪರ್ಯಾಯವಾಗಿ ಮಾಡಿದರೆ ಅದು ಅಡ್ಡದಾರಿಯಾಗುತ್ತದೆ (ರೋಮಾಪುರ 1:26, 27). ದೇವರು ಆದಾಮ, ಹವ್ವಳನ್ನು ಒಂದಾಗಿ ಮಾಡಿದನು, ಇದರ ಪರಿಣಾಮವಾಗಿ ಮೊದಲನೆಯ ಮದುವೆ ಸಂಭ್ರಮವಾಯಿತು. ಮದುವೆಯ ಸಂಬಂಧ ಶಾಶ್ವತವಾಗಿರಬೇಕೆಂದು ಆತನು ಅರ್ಥೈಸಿದನು.

*ಎರಡನೆಯದಾಗಿ, ಮುಂದಿನ ಮದುವೆಗಳಿಗೆ ಮಾದರಿಯಾಗಿರುವಂತೆ ನಮ್ಮ ಕರ್ತನು ಆದಾಮ ಮತ್ತು ಹವ್ವರನ್ನು ಒಂದೇ ಶರೀರವಾಗಿ ಕೂಡಿಸಿದ್ದಾನೆ* (19:6). ದೇವರು ಕೂಡಿಸಿದ್ದಾನೆ, ಮತ್ತು ಆತನಿಗೆ ಮಾತ್ರ ಅವರನ್ನು ಬೇರ್ಪಡಿಸಲು ಬಲವಾದ ಕಾರಣವಿರುವಾಗ ಆತನು ಅವರನ್ನು ಬೇರ್ಪಡಿಸಲು ನ್ಯಾಯವಾದ ಹಕ್ಕು ಆತನಿಗೆ ಇದೆ. ದೇವರು ಮಾಡಿರುವ ಕಾರ್ಯದಲ್ಲಿ ಕೈ ಹಾಕುವದರಿಂದ ಘೋರವಾದ ಫಲಿತಾಂಶವಿರುತ್ತದೆ. ಇಂದಿನ ಪ್ರಪಂಚದಲ್ಲಿ ಮದುವೆ ಬಿದ್ದು ಹೋಗಿ ಚದುರಿ ಹೋದವರಾಗಿದ್ದಾರೆ, ಕುಟುಂಬಗಳು ನಾಶವಾಗಿವೆ, ಮತ್ತು ಮಕ್ಕಳಿಗೆ ಸಮಸ್ಯೆಗಳಾಗಿವೆ.

*ಮೂರನೆಯದಾಗಿ, ಯೇಸು ಮದುವೆ ಸ್ಥಿರತೆಹೊಂದಿರಬೇಕೆಂದು ಪ್ರೋತ್ಸಾಹಿಸುತ್ತಾನೆ* (19:7, 8). ಮದುವೆಯನ್ನು ಗೌರವಿಸುವದಕ್ಕಾಗಿ ಮೋಶೆ ಕೊಟ್ಟಿರುವ ಮೂಲ ಆದೇಶಗಳನ್ನು ಮನುಷ್ಯರು ಭಾಧ್ಯತೆಯಿಂದ ತಪ್ಪಿಸಿಕೊಳ್ಳಲು ಉಪಯೋಗಿಸುವರು. ಕೆಲವು ಫರಿಸಾಯರು ಯೇಸುವಿನಲ್ಲಿಗೆ ಬಂದು "ಹಾಗಾದರೆ ತ್ಯಾಗ ಪತ್ರವನ್ನು ಕೊಟ್ಟು ಆಕೆಯನ್ನು ಬಿಟ್ಟು ಬಿಡಬಹುದೆಂದು ಮೋಶೆಯು ಯಾಕೆ ಆಜ್ಞೆಕೊಟ್ಟನು?" ಎಂದು ಕೇಳಿದರು (19:7). ಆತನು ಅವರ ಹೃದಯವು ಕಠಿಣವಾಗಿತ್ತು ಎಂದು ಯೇಸು ಉತ್ತರಿಸಿದನು (19:8). ವಿಚ್ಛೇದನವು ದೇವರ ಮೂಲ ಯೋಜನೆಯಲ್ಲವಾದರೂ, ಜನರು ಆ ಯೋಜನೆ ಮೀರುತ್ತಿದ್ದರು. ಆದುದರಿಂದ, ಮದುವೆ ನಿಯಮವನ್ನು ಕಾಪಾಡಿಕೊಳ್ಳುವಂತೆ ಅವರು ಮಾಡುತ್ತಿದ್ದ ಕೆಲಸಗಳನ್ನು ನಿಯಂತ್ರಿಸಲು ಅವಸರವಾಗಿರುವ ಆದೇಶವನ್ನು ಮೋಶೆ ಕೊಡಲು ದೇವರು ಅನುಮತಿಸಿದನು (ಧರ್ಮೋಪದೇಶಕಾಂಡ 24:1-4). ದೇವರು ವಿಚ್ಛೇದನವನ್ನು ದ್ವೇಷಿಸುತ್ತಾನೆಂದು ಮಲಾಕಿ 2:14-16 ನಮಗೆ ಮಾಹಿತಿ ಕೊಡುತ್ತದೆ. ಈ ವಿಷಯದಲ್ಲಿ ಆತನು ಮನಸ್ಸು ಬದಲಾಯಿಸಿದನು ಎಂದು ಎಲ್ಲಿಯೂ ಹೊಸ ಒಡಂಬಡಿಕೆಯಲ್ಲಿ ಸೂಚಿಸಿರುವದಿಲ್ಲ. ಮದುವೆಯ ಕುರಿತು ದೇವರ ಮೂಲ ಉದ್ದೇಶವನ್ನು ವಿವರಿಸಲು, ಯೇಸು ಮದುವೆಯ ವ್ಯವಸ್ಥೆಯ ಪ್ರಾರಂಭದ ಕಡೆಗೆ ತನ್ನ ಮನಸ್ಸನ್ನು ತಿರುಗಿಸಿದನು.

*ಅಂತಿಮವಾಗಿ, ಯೇಸು ಮದುವೆ ಸಂಬಂಧದ ಪವಿತ್ರತೆಯನ್ನು ಒತ್ತಿ ಹೇಳಿದ್ದಾನೆ* (19:9), ಗಂಡ ಹೆಂಡತಿಯರಲ್ಲಿ ಅನೈತಿಕ ಸಂಬಂಧವನ್ನು ಮಾಡಿದರೆ ಈ ಕಾರಣವನ್ನು ಹೊರತುಪಡಿಸಿ ಯಾರೊಬ್ಬರು ವಿಚ್ಛೇದನಕ್ಕಾಗಿ ನೋಡಬಾರದೆಂದು ಆತನು ಹೇಳಿದ್ದಾನೆ. ಬೇರೆ ಕಾರಣದಿಂದ ಸಂಗಾತಿಯನ್ನು ಬಿಟ್ಟು ಬಿಟ್ಟು ಅವನು/ಅವಳು ಇನ್ನೊಂದು ಮದುವೆ ಮಾಡಿಕೊಂಡರೆ ಅವನು/ಅವಳು ವ್ಯಭಿಚಾರದ ದೋಷವನ್ನು ಮಾಡಿದವರಾಗುತ್ತಾರೆ. ಗಂಡಬಿಟ್ಟವಳನ್ನು ಯಾರೊಬ್ಬರು ಅವಳನ್ನು ಮದುವೆ ಮಾಡಿಕೊಂಡರೆ ಅವನು ಸಹ ವ್ಯಭಿಚಾರದ ದ್ರೋಹ ಮಾಡಿದವನಾಗುತ್ತಾನೆಂದು ಇದನ್ನು ಸಹ ಯೇಸು ಮೇಲಿನ ವಿಷಯಕ್ಕೆ ಸೇರಿಸಿ ಹೇಳಿದ್ದಾನೆ.

ಈ ಸತ್ಯವನ್ನು ಅಪೊಸ್ತಲರು ಕಷ್ಟಕರವಾದ ಹೇಳಿಕೆಯೆಂದು ಗುರುತಿಸಿದರು (19:10), ಆದರೆ ಯೇಸು ಆತನು ಹೇಳಿರುವದು ಮೃದುವಾಗಿ ಹೇಳಲು ರಾಜೀ ಮಾಡಿಕೊಳ್ಳಲು ಪ್ರಯತ್ನಿಸಲಿಲ್ಲ. ಬದಲಾಗಿ, ಮದುವೆ ಕುರಿತ ದೇವರ ಯೋಜನೆ ಮೀರುವದಕ್ಕಿಂತ ಅವನು ನಪುಂಸಕನಾಗುವದು ಒಳ್ಳೆಯದು ಎಂದು ಪರಿಣಾಮಕಾರಿಯಾಗಿ ಹೇಳಿದನು (19:12). ಜನರು ಮದುವೆ ಆಗುವ ಮುಂಚೆ ಈ ಸತ್ಯವನ್ನು ಅವರಿಗೆ ಬೋಧಿಸುವುದಾದರೆ, ಅವರು ಮದುವೆಯ ಒಡಂಬಡಿಕೆಯ ಕುರಿತು ಗಂಭಿರವಾಗಿ ಅವರು ಆಲೋಚಿಸಬಹುದು, ಮತ್ತು ವಿಚ್ಛೇದನ ಕೊಡುವದಕ್ಕೆ ಕಾರಣವಾಗುವ ಕೆಲವು ವಿಷಯಗಳನ್ನು ತೆಗೆದುಹಾಕಿ ತಕ್ಷಣವೇ ವಿಚ್ಛೇದನ ಕೊಡುವ ಬದಲಾಗಿ ಅವರು ಮದುವೆ ಯಶಸ್ವಿಯಾಗಿರುವಂತೆ ಹೆಚ್ಚು ಪ್ರಯತ್ನ ಮಾಡುವರು.

## ಸತ್ಯ (5:33-37)

ಇಂದು ಸತ್ಯ ಬಹಳ ಮಹತ್ವವುಳ್ಳದ್ದಾಗಿದೆ. ಅನೇಕರಲ್ಲಿ ಹೆಚ್ಚಿನ ಜನರು ಕೆಲವು ಸಾರಿ ಸುಳ್ಳು ಹೇಳುವ ಅಪರಾಧ ಮಾಡುತ್ತಾರೆ, ಎಂದು ಇತ್ತೀಚಿನ ಅಧ್ಯಯನವು ತೋರಿಸುತ್ತದೆ. ತಮಗೆ ತಾವೇ ಚೆನ್ನಾಗಿದ್ದೇವೆಂದು ತೋರಿಸಿಕೊಳ್ಳಲು, ಅವರನ್ನು ಕಾಪಾಡಿಕೊಳ್ಳಲು, ಪ್ರೀತಿಸುವವರ ಹಿಂಸೆಯಿಂದ ತಪ್ಪಿಸಿಕೊಳ್ಳಲು, ಇನ್ನೊಬ್ಬರ ಅನಿಸಿಕೆಗಳನ್ನು ಕಾಪಾಡುವದಕ್ಕಾಗಿ, ಕಿರುಕುಳಕೊಡುವವರಿಂದ ಬಿಡುಗಡೆ ಹೊಂದಲು, ಸುಳ್ಳು ಹೇಳುತ್ತಾರೆ.[57] ನಾವು "ಒಳ್ಳೆಯ ಸುಳ್ಳು" ಹೇಳಬಹುದು, ಆದರೆ ಸುಳ್ಳು ಸುಳ್ಳೆಯಾಗಿದೆ. ಸುಳ್ಳು ಹೇಳುವವರೆಲ್ಲರ ತಂದೆಯು "ಸೈತಾನನೆ" ಆಗಿದ್ದಾನೆಂದು ಹೇಳಿದ್ದಾನೆ (ಯೋಹಾನ 8:44). "ಎಲ್ಲಾ ಸುಳ್ಳುಗಾರರು" "ಅವರೆಲ್ಲರಿಗೆ ಸಿಕ್ಕುವ ಪಾಲು ... ಬೆಂಕಿ ಗಂಧಕಗಳು ಉರಿಯುವ ಕೆರೆಯೇ" ಎಂದು ಯೋಹಾನನು ಬರೆದಿದ್ದಾನೆ (ಪ್ರಕಟಣೆ 21:8; ನೋಡಿರಿ 22:15). "ಸತ್ಯವನ್ನು ಕೊಂಡುಕೋ, ಮತ್ತು ಅದನ್ನು ಮಾರಿಬಿಡಬೇಡ" ಎಂದು ಒಬ್ಬ ಜ್ಞಾನಿ ಬರೆದಿದ್ದಾನೆ (ಜ್ಞಾನೋಕ್ತಿಗಳು 23:23ಎ), ಸತ್ಯವು ನಿಮ್ಮನ್ನು ಬಿಡುಗಡೆ ಮಾಡುತ್ತದೆ ಎಂದು ಯೇಸು ಹೇಳಿದ್ದಾನೆ (ಯೋಹಾನ 8:32).

## ಆಣೆಗಳನ್ನು ಪ್ರಮಾಣಮಾಡುವದು (5:33-37)

ಅವರು ಹೇಳುವ ವಿಷಯದಲ್ಲಿ ಸತ್ಯವಿದೆಯೆಂದು ತೋರಿಸಿಕೊಳ್ಳಲು "ನಾನು ಪ್ರಮಾಣ ಮಾಡಿ" ಹೇಳುತ್ತಿದ್ದೇನೆಂದು ಇಂದಿನ ದಿನಗಳಲ್ಲಿ ಅನೇಕರು ಹೇಳುತ್ತಿರುತ್ತಾರೆ. ಒಬ್ಬ ವ್ಯಕ್ತಿಯ ಮಾತನ್ನು ನಂಬಬಹುದಾಗಿದ್ದರೆ, ಅಲ್ಲಿ ಆಣೆಮಾಡುವ ಅವಶ್ಯಕತೆ ಇರುವುದಿಲ್ಲ. ಯಾವುದಾದರು ವಸ್ತುವಿನ ಮೇಲೆ ಆಣೆ ಇಡುವಾಗ ನಮ್ಮ ಮಾತುಗಳಿಗೆ ಬೆಲೆ ಇರುವದಿಲ್ಲ ಎಂದು ಯೇಸು ಹೇಳಿದ್ದಾನೆ (5:34-36). ನಮ್ಮ ಪ್ರಮಾಣಿಕತೆಗೆ ಇನ್ನೊಬ್ಬರ ಪ್ರಮಾಣವು ಯಾವುದೇ ಸಹಾಯ ಮಾಡುವದಿಲ್ಲ, ಹಾಗಾದರೆ ಯಾವುದು ಸಹಾಯ ಮಾಡುತ್ತದೆ?

ಯಾವಾಗಲು ನಂಬಿಗಸ್ತನಾಗಿರು ಮತ್ತು ನಂಬಲು ಯೋಗ್ಯನಾಗಿರುವ ವ್ಯಕ್ತಿಯೆಂದು ಗುರುತಿಸಿಕೋ (ನೋಡಿರಿ ಎಫೆಸ 4:25).

ಯಾವುದಾದರ ಮೇಲೆ ಪ್ರಮಾಣ ಮಾಡಿ ನಮ್ಮ ಮಾತುಗಳ ಮೇಲೆ ವಿಶ್ವಾಸವಿಡಲು ಪ್ರಯತ್ನಿಸುವದಕ್ಕಿಂತಲೂ, ನಾವು ಏನು ಹೇಳುತ್ತೇವೋ ನಮ್ಮ ಮಾತುಗಳೇ ಅರ್ಥೈಸುತ್ತವೆಂದು ಯೇಸು ಹೇಳಿದ್ದಾನೆ. ನಾವು ಯಾವಾಗ "ಹೌದು" ಎನ್ನುತ್ತೇವೆ ಅದಕ್ಕೆ ಬದ್ಧರಾಗಿರಬೇಕು! ಯಾವಾಗ "ಇಲ್ಲ" ಎಂದು ಹೇಳುತ್ತೇವೋ ಅದಕ್ಕೆ ಬದ್ಧರಾಗಿರಬೇಕು! ಆಗ ಜನರು ನಾವು ಹೇಳುವದು ನಂಬುತ್ತಾರೆ. ನಮ್ಮ ಲೋಕದಲ್ಲಿ "ನನ್ನ ಮಾತು ನನ್ನ ಕರಾರು ಪತ್ರ" ಎಂಬ ಸತ್ಯಕ್ಕೆ ದೂರವಾಗಿ ಹೋಗಿ "ಕರಾರು ಪತ್ರವಿಲ್ಲದೆ ನಾನು ನಿನ್ನ ಮಾತುಗಳನ್ನು ಅಂಗಿಕರಿಸುವದಿಲ್ಲ" ಎಂಬ ಪರಿಸ್ಥಿತಿಗೆ ನಾವು ಮುಟ್ಟಿದ್ದೇವೆ. ಜನರು ಒಬ್ಬರನ್ನೊಬ್ಬರು ನಂಬದೆ ಹೋದರೆ, ಮನೆಯಲ್ಲಿ ಇಲ್ಲವೇ ಸಭೆಗಳಲ್ಲಿ ಶಾಶ್ವತವಾದ ಸಂಬಂಧಗಳನ್ನು ಕಟ್ಟುವದಕ್ಕೆ, ಬಹಳ ಕಷ್ಟವಾಗುತ್ತದೆ.

## ನಮ್ಮ ಹಕ್ಕುಗಳ ಕುರಿತು ಏನು? (5:38-42)

ಅವರು ಹಕ್ಕುಗಳ ಕುರಿತು ಅವರಿಗಿರುವ ಪಟ್ಟು/ಹಟವೇ ಫರಿಸಾಯರ ವಕ್ರಬುದ್ಧಿಗೆ ಮೂಲವಾಗಿತ್ತು. "ಸ್ವಾರ್ಥ"ವನ್ನೇ ಹೊಗಳಿಕೊಳ್ಳುವ ಸಮಯದಲ್ಲಿ ನಾವು ಜೀವಿಸುತ್ತಿದ್ದೇವೆ. ಪ್ರತಿಕ್ಷಣದಲ್ಲಿ ಎಲ್ಲಾ ದಿಕ್ಕುಗಳಿಂದಲೂ ಸ್ವಾರ್ಥದಿಂದ ತುಂಬಲು, ಸ್ವಾರ್ಥದಿಂದ ಒಳಗೊಳ್ಳುವಿಕೆಗಾಗಿ ಮತ್ತು ಸ್ವಾರ್ಥತೃಪ್ತಿಹೊಂದುವದಕ್ಕಾಗಿ ನಾವು ಪ್ರೋತ್ಸಾಹಗೊಳ್ಳುತ್ತೇವೆ. ಈ ಸ್ವಾರ್ಥದಿಂದ ತುಂಬಿದ ಈ ಲೋಕದಲ್ಲಿ ಜನರು ನಾಗರೀಕ ಹಕ್ಕುಗಳಿಗಾಗಿ, ಸ್ತ್ರೀಯರ ಹಕ್ಕುಗಳಿಗಾಗಿ, ಅಪರಾಧಿಯ ಹಕ್ಕುಗಳಿಗಾಗಿ, ಸೆರೆಯಲ್ಲಿರುವವರ ಹಕ್ಕುಗಳಿಗಾಗಿ, ಮತ್ತು ಸಲಿಂಗ ಕಾಮದ ಹಕ್ಕುಗಳಿಗಾಗಿ ಬೇಡಿಕೆ ಇಡುತ್ತಾರೆ. ಜನರು ತಮ್ಮ ಹಕ್ಕುಗಳಿಗಾಗಿ ವಿಶೇಷವಾಗಿ ಅವರ ಸ್ವಂತ ಹಕ್ಕುಗಳಿಗಾಗಿ ಪೀಡಿಸುವಂತವರಾಗಿರುತ್ತಾರೆ. ನಮ್ಮ ಜೀವನದಲ್ಲಿ ನಮ್ಮ ವೈಯಕ್ತಿಕ ಹಕ್ಕುಗಳಿಗೆ ಮೊದಲ ಸ್ಥಾನ ಕೊಡುವಾಗ, ನಿಜವಾದ ನೀತಿಯ ಹಕ್ಕುಗಳನ್ನು ಮರೆತು ಹೋಗುತ್ತವೆ.

ಕ್ರೈಸ್ತರು ಹಿಂಸೆಯನ್ನು ಎದುರಿಸಬಾರದೆಂದು ಅನೇಕರು ತಪ್ಪಾಗಿ ಮತ್ತಾಯ 5:38-42ರನ್ನು ವಿವರಿಸಿದ್ದಾರೆ. "ಅಹಿಂಸೆ" ಉಪದೇಶ ಬೋಧಿಸುವದಕ್ಕೂ, ಯುದ್ಧ ಜರುಗುವ ಸಮಯದಲ್ಲಿ ಅಂತರಾತ್ಮದ ವಿಷಯದಲ್ಲಿ ಬೆಂಬಲಿಸಲು ಮತ್ತು ರಾಷ್ಟ್ರೀಯ ಶಿಕ್ಷೆಯ ವಿರುದ್ಧವಾಗಿ ವಾದಿಸಲು ಉಪಯೋಗಿಸಲಾಗುತ್ತದೆ. ಕೆಲವೊಬ್ಬರು ನಮ್ಮೊಂದಿಗೆ ತಪ್ಪಾಗಿ ನಡೆದುಕೊಂಡಾಗ ಅಥವಾ ಆ ವ್ಯಕ್ತಿ ತನ್ನ ಕುಟುಂಬ ಕಾಪಾಡ ಬಾರದು, ಕೆಲವೊಬ್ಬರು ತಮ್ಮ ಮನೆಗಳನ್ನು ಒಡೆದು ಹಾಕಿದ್ದರೆ ಅದನ್ನು ತಡೆಯಬೇಡ ಎನ್ನುವ ಅರ್ಥದಲ್ಲಿ ಯೇಸು ಹೇಳಲಿಲ್ಲ. Albert Barnes ಹೀಗೆ ಬರೆದಿದ್ದಾರೆ,

> ನಮ್ಮ ಕುಟುಂಬಗಳು ಕೊಲೆಯಾಗುವಾಗ ಅಥವಾ ನಮ್ಮನ್ನು ನಾವೆ ಹತ್ಯ ಮಾಡಿಕೊಳ್ಳುವಾಗ ಅವರನ್ನು ತಡೆಯುವ ಬದಲು ನೋಡು ಎನ್ನುವ ಉದ್ದೇಶದಲ್ಲಿ ಯೇಸು ಬೋಧಿಸಲಿಲ್ಲ. ನೈಸರ್ಗಿಕ ನಿಯಮ, ಮತ್ತು ಎಲ್ಲಾ ಧರ್ಮಶಾಸ್ತ್ರದ ನಿಯಮಗಳು, ಮಾನವ ಮತ್ತು ದೈವೀಕ ನಿಯಮಗಳು, ಜೀವವು ಅಪಾಯದಲ್ಲಿರುವಾಗ ಸ್ವರಕ್ಷಣೆ ಮಾಡಿಕೊಳ್ಳಲು ಸಮರ್ಥಿಸಿಕೊಳ್ಳುತ್ತವೆ ... ಇದರಿಂದ ನಮ್ಮ ರಕ್ಷಕನು ಆತನು ಏನಾಗಿದ್ದಾನೆ ಎಂದು ತಕ್ಷಣವೇ ವಿವರಿಸುತ್ತದೆ. ಜೀವನವು ಅಪಾಯದಲ್ಲಿರುವಾಗ ಅದನ್ನು ಸೂಚಿಸಲು ಅಭಿಪ್ರಾಯ ಹೊಂದಿದ್ದಾನೆ, ಆತನು ಅದನ್ನು ಖಚಿತವಾಗಿ ಸೂಚಿಸುವವನಾಗಿದ್ದಾನೆ.[58]

## ನಿನ್ನ ವೈರಿಯನ್ನು ಪ್ರೀತಿಸು (5:43-48)

ಒಬ್ಬನು ತನ್ನ ವೈರಿಗಳನ್ನು ಪ್ರೀತಿಸಬೇಕು ಎಂದು ಯೇಸು ಹೇಳಿರುವ ಆಜ್ಞೆಯು ಅನೇಕರಿಗೆ ಸಾಧ್ಯವಾಗುವದಿಲ್ಲ. ಅದಕ್ಕೆ ಒಂದು ಕಾರಣವಿದೆ, ಅನೇಕ ಸಾರಿ ನಾವು "ಪ್ರೀತಿ"ಯನ್ನು (*agapē*) ತಪ್ಪಾಗಿ ಅರ್ಥಮಾಡಿಕೊಳ್ಳುತ್ತೇವೆ. ಕೆಲವೊಬ್ಬರು ನಮ್ಮೊಂದಿಗೆ, ತಪ್ಪಾಗಿ ನಡೆಸಿಕೊಂಡರೆ ಅವರೊಂದಿಗೆ ಪ್ರೀತಿಯಿಂದ ಇರುವದಕ್ಕೆ ಸಾಧ್ಯವಾಗದೆ ಇರಬಹುದು. ಆದರೆ ಅವರೊಂದಿಗೆ ಕರುಣೆಯಿಂದ ವರ್ತಿಸುವದು ನಮಗೆ ಅಸಾಧ್ಯವಾದದ್ದಲ್ಲ. 1 ಕೊರಿಂಥ 13:4-7ರಲ್ಲಿ "ಪ್ರೀತಿ" ಕುರಿತು ಪೌಲನಿಂದ ವಿವರಣೆ ಕೊಡಲ್ಪಟ್ಟಿದೆ. ಅಲ್ಲಿ ಮುಖ್ಯವಾಗಿ ಇತರರ ಕಡೆಗೆ ನಮ್ಮ ಕಾರ್ಯದ ಮೇಲೆ ಕೇಂದ್ರೀಕರಿಸಿದೆ: ತಾಳ್ಮೆಯಿಂದಿರುವದು, ಜಂಬಕೊಚ್ಚಿಕೊಳ್ಳುವದಲ್ಲ, ಅನಾಗರಿಕನಂತೆ ಇರುವದಲ್ಲ, ಸ್ವಾರ್ಥನಾಗಿರುವದಲ್ಲ, ಮುಂಗೋಪಿ ಮತ್ತು ವಕ್ರ ಬುದ್ಧಿ ಯುಳ್ಳವನಾಗಿರಬಾರದು, ಮತ್ತು ಹೊಟ್ಟೆಕಿಚ್ಚಿನಿಂದ ಇರುವುದಲ್ಲವೆಂದು ಹೇಳುತ್ತದೆ. ನಾವು ಕೆಲವೊಬ್ಬರನ್ನು ಪ್ರೀತಿಸಲು ಅವರಿಗೆ ಉತ್ತಮವಾದದ್ದನ್ನು ಆಸಕ್ತಿಯಿಂದ ಹುಡುಕಬೇಕು. ಯಾವಾಗ ನಾವು ಇದನ್ನು ಮಾಡುತ್ತೇವೊ ನಾವು ದೇವರನ್ನು ಅನುಕರಿಸುವವರಾಗುತ್ತೇವೆ. ಆತನು ಅನೇಕ ಸಾರಿ ತನ್ನ ಸೃಷ್ಟಿಯಿಂದಲೇ ಅಸಂತೋಷಗೊಂಡನು, ಆದರೆ ಇಂದಿಗೂ ಕೂಡ ಆತನು ಆಶೀರ್ವಾದಗಳನ್ನು ಸುರಿಸುತ್ತಾನೆ ಮತ್ತು ನಮ್ಮ ಅವಶ್ಯಕತೆಗಳಿಗಾಗಿ ಆತನು ಕಾಳಜಿವಹಿಸುತ್ತಾನೆ.

David Stewart

---

ಟಿಪ್ಪಣಿಗಳು

[1]Donald A. Hagner, *Matthew 1-13*, Word Biblical Commentary, vol. 33A (Dallas: Word Books, 1993), 111. [2]Ibid., 116; Talmud *Kiddushin* 28a; and Mishnah *Aboth* 3.12. [3]Michael J. Wilkins, "Matthew," in *Zondervan Illustrated Bible Backgrounds Commentary*, vol. 1, *Matthew, Mark, Luke*, ed. Clinton E. Arnold (Grand Rapids, Mich.: Zondervan, 2002), 38. [4]John Lightfoot, *A Commentary on the New Testament from the Talmud and Hebraica: Matthew-1 Corinthians*, vol. 2, *Matthew-Mark* (Oxford: Oxford University Press, 1859; reprint, Grand Rapids, Mich.: Baker, 1979), 109. ಬೈಬಲ್‌ಗೆ ಸಂಬಂಧಪಟ್ಟವಲ್ಲದ ಯೆಹೂದ್ಯರ ಬರಹಗಳಲ್ಲಿ ಈ ಪದವನ್ನು ಬಳಸಿರುವ ಅನೇಕ ಉದಾಹರಣೆಗಳನ್ನು Lightfoot ಅವರು ಕೊಟ್ಟಿರುವರು. [5]R. T. France, *The Gospel According to Matthew*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 120. [6]Leon Morris, *The Gospel According to Matthew*, Pillar Commentary (Grand Rapids, Mich.: Wm. B. Eerdmans Publishing Co., 1992), 114. [7]ನೋಡಿ Joachim Jeremias, *Jerusalem in the Time of Jesus*, trans. F. H. and C. H. Cave (Philadelphia: Fortress Press, 1969), 17. [8]Robert H. Gundry, *Matthew: A Commentary on His Literary and Theological Art* (Grand Rapids, Mich.: Wm. B. Eerdmans Publishing Co., 1982), 85. [9]Douglas R. A. Hare, *Matthew*, Interpretation (Louisville: John Knox Press, 1993), 52. [10]Mishnah *Yoma* 8.9.

[11]*Didache* 14.2. [12]Gundry, 87. [13]ನೋಡಿ Lightfoot, 118; Talmud *Berakoth* 20. [14]*Leviticus Rabbah* 23.12; ನೋಡಿ Talmud *Berakoth* 24a; *Shabbath* 64b. [15]Sirach 9:8 (NRSV). [16]Jack P. Lewis, *The Gospel According to Matthew*, Part 1, The Living Word Commentary (Austin, Tex.: Sweet Publishing Co., 1976), 91. [17]Robert H. Mounce, *Matthew*, New International Biblical Commentary (Peabody, Mass.: Hendrickson Publishers, 1991), 46. *Skandalon* ಎಂಬ ಗ್ರೀಕ್ ಪದವು "ಅಡ್ಡಿಬಂದ ಕಲ್ಲು" ಅಥವಾ "ಬೀಳಿಸುವದು" ಎಂಬುದನ್ನು ಸೂಚಿಸುತ್ತದೆ. ಆತ್ಮಿಕವಾಗಿ ಹೇಳುವದಾದರೆ ಒಬ್ಬನನ್ನು ಶೋಧನೆಗೆ ಒಳಮಾಡುವದು ಮತ್ತು ಸಿಕ್ಕಿಸುವದು ಎಂಬುದಾಗಿದೆ (18:6, 7). [18]Eusebius *Ecclesiastical History* 6.8.1-2. [19]Mounce, 46. [20]Lewis, 92. ನೋಡಿ *Rabbah Ecclesiastes* 1.4.


[21]ವಚನ 1ರಲ್ಲಿ "ತರುವಾಯ" ಎಂಬ ಪದವು KJVನ್ನು ಗಲಿಬಿಲಿಗೊಳಿಸಿದೆ. [22]Christopher

Wright, *Deuteronomy*, New International Biblical Commentary (Peabody, Mass.: Hendrickson Publishers, 1996), 255. [23]Lightfoot, 122. [24]Mishnah *Yebamoth* 14.1. ಹಾಗಿದ್ದರು, ಒಬ್ಬ ಸ್ತ್ರೀ ತನ್ನ ಗಂಡನು ವಿಚ್ಛೇದನ ಒತ್ತಾಯ ಪಡಿಸುವಾಗ ಆಕೆ ನ್ಯಾಯಲಯಕ್ಕೆ ಹೋಗ ಬಹುದು. (Mishnah *Arakhin* 5.6; *Nedarim* 11.12.) [25]Josephus *Antiquities* 4.8.23. [26]ಧರ್ಮೋಪದೇಶಕಾಂಡ 24:1ರಲ್ಲಿರುವ "ಅಶ್ಲೀಲ" ಎನ್ನುವ ಪದದ ಮೇಲೆ ಚರ್ಚೆಯು ಈ ಭಾಗವು ವಿಚ್ಛೇದನದ ತಳಹದಿಯಾಗಿದ್ದು ಪಕ್ಕದಿಂದ ನೂಕುವಂತೆ ಇದೆ: ಸ್ತ್ರೀಯರನ್ನು ರಕ್ಷಿಸುವದಕ್ಕಾಗಿ ಮತ್ತು ಪುರುಷರು ತಮ್ಮ ಹೆಂಡತಿಯರಿಗೆ ವಿಚ್ಛೆದನ ಕೊಡುವ ಮೊದಲು ಎರಡು ಸಾರಿ ಯೋಚಿಸಬೇಕು. [27]Mishnah *Gittin* 9.10. ನಂತರ Rabbi Akiba ಹೇಳುದ್ದಾರೆ, "ಆಕೆಗಿಂತಲೂ ಸುಂದರವಾಗಿರುವದು ಬೇರೆಯಾರಲ್ಲಿಯೂ ಈತನು ಯಾವ ಮೆಚ್ಚಿಕೆಯು ಕಾಣಲಿಲ್ಲ" (ಧರ್ಮೋಪದೇಶಕಾಂಡ 24:1). [28]Hagner, 125. [29]W. F. Albright and C. S. Mann, *Matthew*, The Anchor Bible (Garden City, N.Y.: Doubleday & Co., 1971), 65. [30]*Porneia*, ಲೈಂಗಿಕ ಅಶ್ಲೀಲ ವಿಷಯಗಳನ್ನೊಳಗೊಂಡ ಪುಸ್ತಕ ವಿಸ್ತಾರವಾಗಿ ಉಪಯೋಗಿಸಿದಾಗ "ವ್ಯಭಿಚಾರ" (*moicheia*). ಇದರ ಕುರಿತು ಎಲ್ಲವನ್ನು ಗ್ರಹಿಸಬಹುದು. ಉದಾಹರಣೆಹೆ ಸೀರಿಟ್ 23:23 ಹೇಳಿದ್ದೇನೆಂದರೆ "ಆಕೆಯ ಹಾದರದಿಂದಲೇ ವ್ಯಭಿಚಾರ ಮಾಡಿದಳು" (NRSV).

[31]Mishnah *Ketuboth* 3.5; *Sotah* 5.1; *Yebamoth* 2.8. [32]Philo *Special Laws* 2.1.5; Mishnah *Nedarim* 1.3, 4. [33]Mishnah *Shebuoth* 4.13. [34]Mishnah *Sanhedrin* 3.2. [35]Josephus *Wars* 2.8.6. [36]Ibid., 2.8.7; ನೋಡಿ *Community Rule* 5.7, 8. [37]*Code of Hammurabi* 196, 200. [38]ನೋಡಿ Josephus *Antiquities* 4.8.35; Mishnah *Baba Kamma* 8.1, 2. [39]John MacArthur, Jr., *The MacArthur New Testament Commentary: Matthew 1-7* (Chicago: Moody Press, 1985), 332. [40]ನೋಡಿ Mishnah *Baba Kamma* 8.6.

[41]Wilkins, 41. [42]Herodotus 8.98; Xenophon *Cyropaedia* 8.6.17. [43]Epictetus 4.1.79. [44]Wilkins, 42. [45]Hagner, 131. [46]Leon Morris, *Luke: An Introduction and Commentary*, rev. ed., The Tyndale New Testament Commentaries (Grand Rapids, Mich.: Wm. B. Eerdmans Publishing Co., 1988), 143. [47]France, 127. [48]ನೋಡಿರಿ Morris, ಮತ್ತಾಯ 129-30. ಕಾನಾನನ್ನು ಗೆಲ್ಲುವದಕ್ಕೆ ಇಸ್ರಾಯೇಲರಿಗೆ ವೈರಿಗಳ ಕಡೆಗೆ ಕಠಿಣವಾದ ನಡವಳಿಕೆ ಕಾರ್ಯಗಳು ಮಾಡಬೇಕಾಗಿತ್ತು. ಆ ಸಂದರ್ಭದಲ್ಲಿ, ಕಾನಾನ್ಯರು ಮಾಡಿದ ಮಹಾದುಷ್ಟ ಕಾರ್ಯದ ನಿಮಿತ್ತ ಅವರನ್ನು ಶಿಕ್ಷಿಸಲು ದೇವರು ತನ್ನ ಜನರನ್ನು ಉಪಯೋಗಿಸಿಕೊಂಡನು (ಆದಿಕಾಂಡ 15:13-16; ಯಾಜಕಕಾಂಡ 18:24, 25; ಧರ್ಮೋಪದೇಶಕಾಂಡ 9:5; 1 ಅರಸುಗಳು 14:24). [49]*Community Rule* 1.4; ನೋಡಿರಿ 9.21, 22. [50]Josephus *Against Apion* 2.15.

[51]Hare, 59. [52]Morris, *Matthew*, 132, n. 167. [53]Mishnah *Nedarim* 3.4; *Tohoroth* 7.6; *Baba Kamma* 10.1, 2. [54]Gundry, 99. [55]ಉದಾಹರಣೆಗೆ, Alan Guttmacher Institute ಅವರ ಜನವರಿ ಅಧ್ಯಾಯನ ವರದಿಕೊಟ್ಟಿದೆ ಏನೆಂದರೆ US ಗರ್ಭಸ್ರಾವ ಮಾಡುವದು 2000 ಮತ್ತು 2005ರ ಮಧ್ಯದಲ್ಲಿ ಶೇಕಡ 9 ಕಡಿಮೆಯಾಗಿದೆ ಎಂದು ಹೇಳಿದೆ. ("U.S. Abortion Rate Falls, Study Finds" [http://www.reuters.com/article/domesticNews/idUSN1722176020080117; Internet; accessed 15 July 2009].) [56]William Hendriksen, *New Testament Commentary: Exposition of the Gospel According to Matthew* (Grand Rapids, Mich.: Baker Book House, 1973), 303. [57]ಅಂತಹ ದಾಖಲೆಗಳಲ್ಲಿ ಒಂದು, Ulrich Boser, "We're All Lying Liars: Why People Tell Lies, and Why White Lies Can Be OK," *U.S. News & World Report* (http://health.usnews.com/articles/health/brain-and-behavior/2009/05/18/were-all-lying-liars-why-people-tell-lies-and-why-white-lies-can-be-ok.html; Internet; accessed 17 July 2009). [58]Albert Barnes, *Notes on the New Testament: Matthew and Mark*, ed. Robert Frew (Philadelphia: N.p., 1832; reprint, Grand Rapids, Mich.: Baker Book House, 1974), 59.


ಅಂತೋನಿಯನ
ಕೋಟೆ
ಹೆರೋದನ
ದೇವಾಲಯ
ಅನ್ಯಜನರ
ಅಂಗಳ
ಪಾಲೇಸ್ತೀನಿಯರ
ನ್ಯಾಯಲಯ
ಇಸ್ರಾಯೇಲ್ಯರ
ನ್ಯಾಯಲಯ
ಯಜ್ಞವೇದಿಕೆ
ಸುಂದರ
ದ್ವಾರ
ಮಹಿಳೆಯರ
ನ್ಯಾಯಲಯ
ಪರಿಶುದ್ಧ
ಪತಿಪರಿಶುದ್ಧ
ಪರಿಶುದ್ಧ
ಅರಮನೆ
ಸೊಲೊಮೋನನ
ಮುಖಮಂಟಪ